ಸಂಪುಟ 15
ಸಂಚಿಕೆ 50

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

19 ಡಿಸೆಂಬರ್ 1993
ರೂ. 2.00

ಸದ್ಯ ಕೋಮುವಾದ ಸೋತಿದೆ- ಅಪಾಯ ಮಾತ್ರ ಇನ್ನೂ ಇದೆ

ಸರ್ವತೋಮುಖ ಸಮರ ಮುಂದುವರೆಯಲಿ - ಪೊಲಿಟ್‌ಬ್ಯೂರೋ

ಉತ್ತರ ಪ್ರದೇಶ, ಮಧ್ಯಪ್ರದೇಶ ಹಾಗೂ ಹಿಮಾಚಲ ಪ್ರದೇಶಗಳ ಚುನಾವಣೆಗಳಲ್ಲಿ ಬಿಜೆಪಿಯ ಪರಾಭವ ಅದಕ್ಕೊದು ಪ್ರಮುಖ ಹಿನ್ನಡೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಸೋಲುಣ್ಣಿಸಿದ ಮತದಾರರನ್ನು ಅಭಿನಂದಿಸಿದೆ. ಅವರು ರಾಷ್ಟ್ರೀಯ ಐಕ್ಯತೆಗೆ ಹಾಗೂ ಜಾತ್ಯಾತೀತ ತತ್ವಕ್ಕೆ ತಮ್ಮ ಬದ್ಧತೆಯನ್ನು ತೋರ್ಪಡಿಸಿದ್ದಾರೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಪೊಲಿಟ್‌ಬ್ಯೂರೋದ ಎರಡು ದಿನಗಳ ಸಭೆಯ ನಂತರ ಕರೆಯಲಾದ ಪತ್ರಿಕಾ ಸಮ್ಮೇಳನವೊಂದರಲ್ಲಿ ಅವರು ಮಾತನಾಡುತ್ತಿದ್ದರು.

ಬಿಜೆಪಿ ಚುನಾವಣೆಗಳಲ್ಲಿ ಸೋತರೂ ಕೋಮುವಾದಿಗಳಿಂದ ಇನ್ನು ಅಪಾಯವಿಲ್ಲ ಎಂಬ ಸಂತೃಪ್ತ ಭಾವನೆಗೆ ಅವಕಾಶವಿಲ್ಲ. ಬಿಜೆಪಿ ಈಗಲೂ ಗಮನಾರ್ಹ ಬೆಂಬಲ ಹೊಂದಿದೆ ಎಂದು ಪೊಲಿಟ್‌ಬ್ಯೂರೋ ಎಚ್ಚರಿಸಿದೆ. ಕೋಮುವಾದಿ ಶಕ್ತಿಗಳ ವಿರುದ್ಧ ರಾಜಕೀಯ, ಸೈದ್ಧಾಂತಿಕ, ಸಾಮಾಜಿಕ ವಲಯಗಳಲ್ಲಿ ಎಡೆಬಿಡದ ಹೋರಾಟವನ್ನು ಮುಂದುವರಿಸಬೇಕು ಎಂದು ಸುರ್ಜಿತ್ ಹೇಳಿದರು. ಬಿಜೆಪಿಯ ಕರಾಳ ಕೃತ್ಯದ ಮೊದಲ ವಾರ್ಷಿಕ ಕೋಮು ಸೌಹಾರ್ದವನ್ನು ರಕ್ಷಿಸುವ ದೃಢ ನಿಶ್ಚಯವನ್ನು ಮತ್ತೊಮ್ಮೆ ಒತ್ತಿ ಹೇಳುವ ದಿನವಾಗಲಿ ಎಂದು ಅವರು ಆಶಿಸಿದರು.

ಪೊಲಿಟ್‌ಬ್ಯೂರೋ ಸಭೆ ಚುನಾವಣೆಯಲ್ಲಿ ಪಕ್ಷದ ಪಾತ್ರವನ್ನು ವಿಮರ್ಶಿಸಿತು. ದೇಶದ ಆರ್ಥಿಕ ಪರಿಸ್ಥಿತಿಯ ವಿಮರ್ಶೆಯನ್ನೂ ನಡೆಸಿತು.

ಎಡ ಪಕ್ಷಗಳ ಉದ್ದೇಶ ಈಡೇರಿದೆ

ಈ ಚುನಾವಣೆಗಳಲ್ಲಿ ಬಾಬ್ರಿಮಸೀದಿಯ ಧ್ವಂಸದಿಂದಾಗಿ ಬಿಜೆಪಿ ಸರಕಾರಗಳು ವಜಾ ಆದ ರಾಜ್ಯಗಳಲ್ಲಿ ಮತ್ತೆ ಅದು ಅಧಿಕಾರಕ್ಕೆ ಬರದಂತೆ ತಡೆಯುವುದು ಕೋಮು ಶಕ್ತಿಗಳ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಎಡ ಪಕ್ಷಗಳ ಮುಖ್ಯ ಉದ್ದೇಶವಾಗಿತ್ತು. ಇದು ಬಹುಮಟ್ಟಿಗೆ ಈಡೇರಿದೆ. ಎಡಪಕ್ಷಗಳು ಬಹಳ ಸ್ಥಾನಗಳನ್ನೇನೂ ಪಡೆದಿರಲಿಕ್ಕಿಲ್ಲ. ಆದರೆ ಬಿಜೆಪಿ ಸೋಲಿಗೆ ಎಡಪಕ್ಷಗಳ ಕೊಡುಗೆ ಗಮನಾರ್ಹವಾಗಿದೆ ಎಂದು ಪಿ.ಬಿ. ಅಭಿಪ್ರಾಯಪಟ್ಟಿದೆ. ಪಕ್ಷದ ಸಂಬಂಧ ಪಟ್ಟ ರಾಜ್ಯ ಸಮಿತಿಗಳು ಚುನಾವಣಾ ಪ್ರಚಾರ ಕಾಲದಲ್ಲಿ ಗಳಿಸಿದ ಪ್ರಭಾವವನ್ನು ಕ್ರೋಢೀಕರಿಸಿ ಈ ಚುನಾವಣೆಗಳಲ್ಲಿ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನು ಸಾಮೂಹಿಕ ಸಂಘಟನೆಗಳಿಗೆ, ಪಕ್ಷಕ್ಕೆ ತರಲು ತಕ್ಷಣ ಸಂಘಟನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪೊಲಿಟ್‌ಬ್ಯೂರೋ ಕರೆ ನೀಡಿದೆ.

ಬಿಜೆಪಿಯ ಸೋಲು ಕಾಂಗ್ರೆಸ್(ಐ)ನ ನೀತಿಗಳಿಗೆ ದೊರೆತ ಅನುಮೋದನೆ ಎಂದೂ ಭಾವಿಸುವಂತಿಲ್ಲ ಎಂದೂ ಕಾಂ. ಸುರ್ಜಿತ್ ನೆನಪಿಸಿದರು. ಒಂದು ಪ್ರಜಾಸತ್ತಾತ್ಮಕ ಪರ್ಯಾಯ ಇಲ್ಲದ್ದರಿಂದಲೇ ಅದು ಮಧ್ಯಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ ಗೆಲ್ಲಲು ಸಾಧ್ಯವಾಯಿತು. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್(ಐ) ನ ಸ್ಥಾನಗಳು ಮಾತ್ರವಲ್ಲ ಮತಗಳ ಪ್ರಮಾಣವೂ ಕಮ್ಮಿಯಾಗಿದೆ.

"ಡಂಕೆಲ್ ಕರಡನ್ನು ತಿರಸ್ಕರಿಸಿ"

ಆರ್ಥಿಕರಂಗದಲ್ಲಿ ರಾವ್ ಸರಕಾರ ಐ.ಎಂ.ಎಫ್.-ವಿಶ್ವಬ್ಯಾಂಕುಗಳ ಆದೇಶಗಳನ್ನು ಈಡೇರಿಸುತ್ತಲೇ ಇದೆ. ಭಾರತದ ವಿದೇಶೀ ಸಾಲ ಹಣಕಾಸು ಸಚಿವಾಲಯ ನೀಡಿದ ಅಂಕಿ ಅಂಶಗಳ ಪ್ರಕಾರ 2.66 ಲಕ್ಷ ಕೋಟಿ ಆಗಿದೆ. ಈ ಸಾಲಕ್ಕೆ ಬಡ್ಡಿ ತೆರುವಾಗ, ಮರುಪಾವತಿ ಮಾಡುವ 1994-95ರಲ್ಲಿ ಒಂದು ಗಂಬೀರ ಬಿಕ್ಕಟ್ಟು ಬರಲಿದ್ದು, ಆಗ ಮತ್ತಷ್ಟು ಐ.ಎಂ.ಎಫ್. ಸಾಲ ಅಗತ್ಯವಾಗಬಹುದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆತಂಕ ವ್ಯಕ್ತಪಡಿಸಿದೆ. ಬೆಲೆಯೇರಿಕೆ ಹಾಗೂ ಭರದ ಖಾಸಗೀಕರಣದ ವಿರುದ್ಧ ಪ್ರತಿಭಟನೆ ಸಂಘಟಿಸಬೇಕೆದು ಅದು ತನ್ನ ರಾಜ್ಯ ಸಮಿತಿಗಳಿಗೆ ಕರೆ ನೀಡಿದೆ.

ಗ್ಯಾಟ್ ಮಾತುಕತೆಗಳು ಡಿಸೆಂಬರ್ ಮಧ್ಯಭಾಗದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿರುವುದರಿಂದ ಸರಕಾರ ಡಂಕೆಲ್ ಕರಡನ್ನು ಸಂಸತ್ತಿನ ಮುಂದಿಡಬಹುದು. ಆಗ ಅದನ್ನು ಸೋಲಿಸಬೇಕು ಎಂದು ಎಲ್ಲಾ ರಾಜಕೀಯ ಪಕ್ಷಗಳಿಗೆ ಕರೆ ನೀಡಿದೆ. ಏಕೆಂದರೆ ಡಂಕೆಲ್ ಕರಡಿನ ಚೌಕಟ್ಟನ್ನು ಒಪ್ಪಿಕೊಂಡರೆ ಅದು ನಮ್ಮ ದೇಶದ ಸಾರ್ವಭೌಮತೆಗೆ ಧಕ್ಕೆ ತಂದಂತಾಗುತ್ತದೆ. ನಮ್ಮ ಸ್ವಾವಲಂಬನೆಗೆ ತೀವ್ರ ಏಟು ಬೀಳುತ್ತದೆ, ಔಷಧಿ ತಯಾರಿಕಾ ಉದ್ದಿಮೆ, ಕೃಷಿ, ಆಹಾರ ಭದ್ರತೆ ಇವುಗಳನ್ನು ತೀವ್ರವಾಗಿ ತಟ್ಟುತ್ತದೆ. ವಿದೇಶೀ ಬಂಡವಾಳ ಹಣಕಾಸು ಹಾಗೂ ಸೇವಾ ವಿಭಾಗದೊಳಗೆ ಅತಿಕ್ರಮಿಸುತ್ತದೆ. ಇತ್ತೀಚೆಗೆ ಡಂಕೆಲ್ ಪ್ರಸ್ತಾಪಗಳ ವಿರುದ್ಧ ಆಂದೋಲನ ಇನ್ನಷ್ಟು ಗತಿಶೀಲವಾಗುತ್ತಿದೆ. ಸಂಸತ್ತಿನಲ್ಲಿ ಈ ಕರಡಿನ ಬಗ್ಗೆ ಚರ್ಚೆಯಾಗುವಾಗ ಆ ಕರಡನ್ನು ತಿರಸ್ಕರಿಸಿ ಜನಗಳ ಹಿತಾಸಕ್ತಿಗಳನ್ನು ದೃಢವಾಗಿ ಕಾಪಾಡಿಕೊಳ್ಳಬೇಕಾಗಿದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಕಾಶ್ಮೀರ ಸಮಸ್ಯೆಯನ್ನು ಪರಿಶೀಲಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ರಾವ್ ಸರಕಾರ ತಕ್ಷಣ ಒಂದು ಸಮಗ್ರ ಪರಿಹಾರ ವ್ಯವಸ್ಥೆಯನ್ನು ರೂಪಿಸಬೇಕೆಂದು, ಇದು ರಾಜಕೀಯ ಪ್ರಕ್ರಿಯೆಯನ್ನು ಮತ್ತೆ ಜೀವಂತಗೊಳಿಸಲು ನೆರವಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದೆ.

ತ್ರಿಪುರಾ ರಾಜ್ಯಪಾಲರು ತಕ್ಷಣ ರಾಜೀನಾಮೆ ನೀಡಬೇಕು, ಇಲ್ಲವಾದರೆ ಕೇಂದ್ರ ಸರಕಾರ ಅವರನ್ನು ವಜಾ ಮಾಡಬೇಕೆಂದು ಅವರ ವರ್ತನೆಯನ್ನು ಖಂಡಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

"ಡಂಕೆಲ್ ಪ್ರಸ್ತಾಪಗಳನ್ನು ತಿರಸ್ಕರಿಸಿ"

ದೇಶಾದ್ಯಂತ ಸಾವಿರಾರು ಜನಗಳ ಪ್ರತಿಭಟನೆ

ನರಸಿಂಹರಾವ್ ಸರಕಾರ ಗ್ಯಾಟ್ (GATT) ನ ಬೆದರಿಕೆಗೆ ತಲೆಬಾಗಿ ಯಾವುದೇ ತಿದ್ದುಪಡಿಯಿಲ್ಲದೆ ಡಂಕೆಲ್ ಪ್ರಸ್ತಾಪಗಳಿಗೆ ಸಹಿ ಹಾಕಲು ಸಿದ್ಧವಾಗಿದೆ. ಇದು ಅತ್ಯಂತ ಗಂಭೀರ ವಿಷಯ. ಈ ರೀತಿ ದೇಶದ ಆರ್ಥಿಕದ ಎಲ್ಲಾ ವಲಯಗಳನ್ನು ಬಹುರಾಷ್ಟ್ರೀಯ ಕಂಪೆನಿಗಳ ಪ್ರಾಬಲ್ಯಕ್ಕೆ ತೆರೆದಿಟ್ಟು ದೇಶದ ಆರ್ಥಿಕ ಹಾಗೂ ರಾಜಕೀಯ ಸಾರ್ವಭೌಮತ್ವವನ್ನು ಬುಡಮೇಲು ಮಾಡಲು ನಾವು ಬಿಡುವುದಿಲ್ಲ ಎಂದು ದೇಶಾದ್ಯಂತ ದುಡಿಯುವ ಜನರು - ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು, ವಿಜ್ಞಾನಿಗಳು ಹಾಗೂ ಇತರ ಬುದ್ಧಿ ಜೀವಿಗಳು ನರಸಿಂಹರಾವ್ ಸರಕಾರಕ್ಕೆ ಸ್ಪಷ್ಟಪಡಿಸಿದ್ದಾರೆ. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಕರೆಯ ಮೇರೆಗೆ ದೇಶದ ಮೂಲೆ ಮೂಲೆಗಳಲ್ಲಿ ಡಿಸೆಂಬರ್ 3 ರಿಂದ 9 ರವರೆಗೆ ಡಂಕೆಲ್ ಪ್ರಸ್ತಾಪಗಳ ಕರಾಳ ಪರಿಣಾಮಗಳನ್ನು ಚರ್ಚಿಸಲಾಯಿತು. ಡಿಸೆಂಬರ್ 9 ರಂದು ದೇಶದ ರಾಜಧಾನಿಯ ಸಂಸತ್ತಿನೆದುರು ಹಾಗೂ ರಾಜ್ಯದ ರಾಜಧಾನಿಗಳಲ್ಲಿ ಬೃಹತ್ ರ್‍ಯಾಲಿಗಳು ನಡೆದವು.

ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಸಾಮೂಹಿಕ ಸಂಘಟನೆಗಳ ವೇದಿಕೆಯ ಆಶ್ರಯದಲ್ಲಿ ರಾಜಭವನದ ಎದುರು ಒಂದು ಪ್ರತಿಭಟನಾ ರ್‍ಯಾಲಿ ನಡೆಯಿತು. ಸಿಐಟಿಯು ಮುಖಂಡರಾದ ಕೆ.ಎಸ್. ಸುಬ್ರಮಣ್ಯ ಎ.ಐ.ಟಿ.ಯು.ಸಿ.ಯ ವೆಂಕಟರಾಂ. ಯು.ಟಿ.ಯು.ಸಿ.ಯ ಸಿಂಹಾದ್ರಿ, ಎಸ್.ಎಫ್.ಐ.ನ ರಾಮಕೃಷ್ಣ, ಎ.ಐ.ಎಸ್.ಎಫ್. ನ ಅಮ್ಜದ್ ಮತ್ತಿತರರು ಮಾತನಾಡಿದರು. ಎ.ಐ.ಟಿ.ಯು.ಸಿ. ಮುಖಂಡ ಮಹದೇವನ್ ನಡೆಸಿಕೊಟ್ಟ ಪ್ರತಿಭಟನಾ ಸಭೆಯಲ್ಲಿ ವಿವಿಧ ಕಾರ್ಮಿಕ ಸಂಘಗಳ, ರೈತ ಸಂಘಟನೆಗಳ, ವಿದ್ಯಾರ್ಥಿ-ಯುವಜನ ಸಂಘಟನೆಗಳ ಕಾರ್ಯಕರ್ತಕರು ಭಾಗವಹಿಸಿದ್ದರು. ಸಭೆಯ ಕೊನೆಯಲ್ಲಿ ಡಂಕೆಲ್‌ನ ಪ್ರತಿಕೃತಿಯನ್ನು ಸುಟ್ಟು ಜನಗಳ ತೀವ್ರ ಕ್ರೋಧವನ್ನು ವ್ಯಕ್ತಪಡಿಸಲಾಯಿತು.

ದಿಲ್ಲಿಯಲ್ಲಿ ಜಂತರ್ ಮಂತರ್ ಎದುರು ಸಮಾವೇಶಗೊಂಡು ಸಂಸತ್ತಿನತ್ತ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟಿಸಲು ನಿರ್ಧರಿಸಲಾಗಿತ್ತು. ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಷ್ಟ್ರೀಯ ಕೈಗಾರಿಕಾ ಕಾರ್ಮಿಕರ ಒಕ್ಕೂಟಗಳು, ಸರ್ಕಾರಿ ನೌಕರರ, ರೈಲ್ವೇ ನೌಕರರ, ರೈತರು, ಕೃಷಿಕೂಲಿಕಾರರ ಸಂಘಟನೆಗಳ ಮುಖಂಡರಲ್ಲದೆ ವಿದ್ಯಾರ್ಥಿ, ಯುವಜನರ, ಮಹಿಳಾ ಸಂಘಟನೆಗಳ, ವೈಜ್ಞಾನಿಕ ಕೈಲಸಗಾರರ ಸಂಘಟನೆಯ ಮುಖಂಡರು ಪೇಟೆಂಟ್ ಕಾನೂನು ಕುರಿತು ರಾಷ್ಟ್ರೀಯ ಕಾರ್ಯಶೀಲ ಗುಂಪಿನ ಸದಸ್ಯರು ಭಾಗವಹಿಸಿದ್ದರು. ಸಂಸತ್ತಿನ ಒಳಗೆ ಎಡಪಕ್ಷಗಳು ಹಾಗೂ ಜನತಾದಳ ಮುಖಂಡರು ಡಂಕೆಲ್ ಪ್ರಸ್ತಾಪಗಳನ್ನು ತಿರಸ್ಕರಿಸಬೇಕೆಂದು ಒತ್ತಾಯಿಸಿದರು.

ಜಿನೀವಾದಲ್ಲಿ ಗ್ಯಾಟ್ ಕಚೇರಿಯೆದುರು ರೈತರ ಪ್ರದರ್ಶನವನ್ನು ಚದುರಿಸುವಲ್ಲಿ ತೊಡಗಿರುವ ಪೋಲೀಸರು - ಪುಟ-7 ನೋಡಿ



ಪಂಚಾಯತ್ ಚುನಾವಣಾ ಪ್ರಕ್ರಿಯೆ ಆರಂಭ

ಕೊನೆಗೂ ಕರ್ನಾಟಕಸರಕಾರ ಪಂಚಾಯತೀ ರಾಜ್ಯ ಚುನಾವಣಾ ಪ್ರಕ್ರಿಯೆಯನ್ನು ಆರಂಭಿಸಿದೆ. ಡಿಸೆಂಬರ್ 8ರ ನೋಟಿಫಿಕೇಶನ್‌ನೊಂದಿಗೆ ಇದು ಆರಂಭವಾಗಿದೆ. ಡಿಸೆಂಬರ್ 15 ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ. ಡಿಸೆಂಬರ್ 18 ನಾಮಪತ್ರ ವಾಪಸು ಪಡೆಯಲು ಕೊನೆಯ ದಿನ. ಡಿಸೆಂಬರ್ 29 ರಂದು ಚುನಾವಣೆ ನಡೆದು ಡಿಸೆಂಬರ್ 31 ರೊಳಗೆ ಚುನಾವಣಾ ಪ್ರಕ್ರಿಯೆ ಹಾಸನ ಜಿಲ್ಲೆ ಬಿಟ್ಟು ಉಳಿದೆಲ್ಲಾ ಜಿಲ್ಲೆಗಳಲ್ಲಿ ಪೂರ್ಣಗೊಳ್ಳುತ್ತದೆ. ಹಾಸನ ಜಿಲ್ಲೆಯಲ್ಲಿ ಶ್ರವಣಬೆಳಗೊಳದ ಗೊಮ್ಮಟೇಶ್ವರ ಮಹಾಮಸ್ತಾಭಿಷೇಕದ ಪ್ರಯುಕ್ತ ಚುನಾವಣೆ ಜನವರಿ 16ರಂದು ನಡೆಯುವುದು. ನಾಮಪತ್ರ ಸಲ್ಲಿಕೆ ಡಿಸೆಂಬರ್ 23 ರಿಂದ 30 ರವರೆಗೆ, ವಾಪಸು ಪಡೆಯಲು ಕೊನೆಯ ದಿನ ಜನವರಿ 3 ಎಂದು ರಾಜ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ.

ಗ್ರಾಮಪಂಚಾಯತು ಚುನಾವಣೆಗಳು ಪಕ್ಷರಹಿತವಾಗಿ ನಡೆಯಲಿದ್ದು ಇದರಲ್ಲಿ 1,01,93,188 ಮಹಿಳಾ ಮತದಾರರು, 1,04,43,594 ಪುರುಷ ಮತದಾರರು, ಒಟ್ಟು 2,06,36,783 ಮತದಾರರು ಇದ್ದಾರೆ. ಒಟ್ಟು 21 ಜಿಲ್ಲೆಗಳಲ್ಲಿ 5641 ಗ್ರಾಮ ಪಂಚಾಯತುಗಳಿಗೆ 80, 631 ಸದಸ್ಯರನ್ನು ಇವರು ಆರಿಸಬೇಕಾಗಿದೆ. ಇದರಲ್ಲಿ 17,912 ಸ್ಥಾನಗಳು (22.21 %) ಪರಿಶಿಷ್ಟ ಜಾತಿಗಳಿಗೆ, 7571 ಪರಿಶಿಷ್ಟ ವರ್ಗಗಳಿಗೆ (9.39%) 26827 ಹಿಂದುಳಿದ ವರ್ಗಗಳಿಗೆ (**33.27%**) ಮೀಸಲಾಗಿದೆ. ಮಹಿಳೆಯರಿಗೆ 31,303 ಸ್ಥಾನಗಳು ಮೀಸಲಿವೆ.

ಸಂವಿಧಾನದ 73ನೇ ತಿದ್ದುಪಡಿಯ ಅನ್ವಯ ರಾಜ್ಯದಲ್ಲಿ ಮೂರು ಹಂತದಲ್ಲಿ ಪಂಚಾಯತೀ ರಾಜ್ಯ ವ್ಯವಸ್ಥೆಯನ್ನು ತರಲು ಈಗ ಶಾಸನ ರೂಪಿಸಲಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತು ಚುನಾವಣೆಗಳು ರಾಜಕೀಯ ಪಕ್ಷಗಳ ಆಧಾರದ ಮೇಲೆ ನಡೆಯುತ್ತವೆ.

ಬೆಂಗಳೂರು ಜಿಲ್ಲೆಯನ್ನು 15 ವರ್ಷಗಳ ನಂತರ ಮತ್ತೆ ಪಂಚಾಯತೀ ರಾಜ್ಯ ವ್ಯವಸ್ಥೆಯೊಳಗೆ ತರಲಾಗಿದೆ ಎಂದು ಬೆಂಗಳೂರು ಜಿಲ್ಲಾ ಉಪ ಆಯುಕ್ತರು ತಿಳಿಸಿದ್ದಾರೆ. ನಗರ ಜಿಲ್ಲೆಯ 26 ಲಕ್ಷ ವಾಸಿಗಳು ಮಹಾನಗರ ಪಾಲಿಕೆಗೆ, 15 ಲಕ್ಷ ವಾಸಿಗಳು 8 ನೋಟಿಫೈಡ್ ಪ್ರದೇಶಗಳಿಗೆ ಹಾಗೂ 6.67 ಲಕ್ಷ ಜನರು ಸದ್ಯದಲ್ಲೇ ರಚನೆಗೊಳ್ಳಲಿರುವ ಗ್ರಾಮ ಪಂಚಾಯತುಗಳಿಗೆ ಸೇರುತ್ತಾರೆ ಎಂದು ಅವರು ತಿಳಿಸಿದರು. ●

ಅಂಚೆ ನೌಕರರ ಯಶಸ್ವಿ ಮುಷ್ಕರ

ಪುಟ 8

ಶಿಮ್ಲಾ: ಸ್ಫೂರ್ತಿ-ಹೊಣೆಗಾರಿಕೆ ಹೆಚ್ಚಿಸಿದ ವಿಜಯ

ಸೀತಾರಾಂ ಯೆಚೂರಿ

ಹಿಮಾಲಯದ ತಪ್ಪಲಿನಲ್ಲಿರುವ ಪುಟ್ಟ ರಾಜ್ಯ ಹಿಮಾಚಲ ಪ್ರದೇಶ. ಅದರ ರಾಜಧಾನಿ ಶಿಮ್ಲಾ. ಈಗ ಶಿಮ್ಲಾದ ತಂಪು ಗಾಳಿಯಲ್ಲಿ 'ಕೆಂಪು' ರಾಜಕೀಯದ ಕಂಪು ಪಸರಿಸಿದೆ, ಗಮನಿಸಿದ್ದೀರಾ?

ಹೌದು, ಈ ವಿಧಾನಸಭಾ ಕ್ಷೇತ್ರದಲ್ಲಿ ರಾಕೇಶ್ ಸಿಂಘಾ ಅನ್ನುವವರು ಗೆದ್ದಿದ್ದಾರೆ. ಅವರು ಯಾರು ಗೊತ್ತಾ? ಭಾರತದ ದುಡಿಯುವ ವರ್ಗದ ಕಣ್ಮಣಿಯಾದ ಭಾರತದ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪ್ರತಿನಿಧಿ.

ರಾಜ್ಯದಲ್ಲಿ ಹಿಂದೆ ಆಡಳಿತದಲ್ಲಿದ್ದ ಕೋಮುವಾದಿ ಬಿಜೆಪಿಯನ್ನು ಹಿಂದೆ ತಳ್ಳಿ ಅಧಿಕಾರಕ್ಕೆ ಮರಳಿದ ಕಾಂಗ್ರೆಸ್ (ಐ) ಪಕ್ಷದ ಅಲೆ ರಾಜ್ಯದ ಬೇರೆಲ್ಲೆಡೆ ಬೀಸಿದರೂ ಶಿಮ್ಲಾದಲ್ಲಿ ಆ ಅಲೆಗೆ ಏನನ್ನೂ ಮಾಡಲು ಆಗಲಿಲ್ಲ. ಇಲ್ಲಿ ಶ್ರಮಿಕ ವರ್ಗದವರ ಕೈ ಮೇಲಾಯಿತು. 'ಕೈ' - 'ಕಮಲ' ಹೋದವು!

ಶಿಮ್ಲಾದಲ್ಲಿ ಸಾಧಿಸಿರುವ ಈ ಗೆಲುವು ಹಿಮಾಲಯದ ಈ ರಾಜ್ಯದಲ್ಲಿ ಸಿಪಿಐ(ಎಂ) ಬೆಳವಣಿಗೆಗೆ ದೊಡ್ಡ ಚಾಲನೆ ನೀಡಲಿದೆ-

ಪಕ್ಷದ ಚುನಾವಣಾ ಪ್ರಚಾರ ಕಾರ್ಯದಲ್ಲಿ ಶಿಮ್ಲಾ ಕ್ಷೇತ್ರದಲ್ಲಿ ಬೀಡು ಬಿಟ್ಟಿದ್ದ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚುರಿ ಅವರ ನಿರೀಕ್ಷೆ-ವಿಶ್ವಾಸವಿದು. ಐ.ಎನ್.ಎಸ್‌ಗೆ ನೀಡಿರುವ ಸಂದರ್ಶನದಲ್ಲಿ ಇದು ವ್ಯಕ್ತವಾಗಿದೆ.

ರಾಜ್ಯದ ರಾಜಧಾನಿಯಾಗಿರುವುದರಿಂದ ಶಿಮ್ಲಾ ಪ್ರತಿಷ್ಠೆಯ ಕ್ಷೇತ್ರವಾಗಿದೆ. ರಾಜಕೀಯ ಮಹತ್ವ ಉಳ್ಳದ್ದೂ ಆಗಿದೆ. ವಿದ್ಯಾರ್ಥಿ ಸಮುದಾಯ ಮತ್ತು ಹೋಟೆಲ್ ಕಾರ್ಮಿಕ ವಲಯಕ್ಕಷ್ಟೆ ಇಷ್ಟರವರೆಗೆ ಸಿಪಿಐ(ಎಂ) ಪ್ರಭಾವ ಸೀಮಿತಗೊಂಡಿತ್ತು. ಈಗ ಕ್ಷೇತ್ರದ ಶಾಸಕರೇ ಸಿಪಿಐ(ಎಂ)ನವರಾಗಿರುವುದರಿಂದ ಪಕ್ಷ ಹೆಚ್ಚು ಜನರನ್ನು ತಲುಪಲು ಸಾಧ್ಯವಾಗುತ್ತದೆ. ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯವೂ ಸಿಪಿಐ(ಎಂ)ಗೆ ಇದೆ ಎನ್ನುವುದನ್ನು ಈ ವಿಜಯ ಎತ್ತಿ ತೋರಿಸಿದೆ. ಇದುವರೆಗೆ ಜನರು ಹೋರಾಟಗಳಲ್ಲಿ ಮಾತ್ರವೇ ಕೆಂಬಾವುಟವನ್ನು ಬೆಂಬಲಿಸುತ್ತಿದ್ದರು. ಚುನಾವಣೆ ಬಂದಾಗ ಕಾಂಗ್ರೆ ಮತ್ತು ಬಿಜೆಪಿ- ಈ ಎರಡು ಪ್ರಮುಖ ರಾಜಕೀಯ ಬಣಗಳತ್ತ ಒಲವು ತೋರಿಸುತ್ತಿದ್ದರು.

ಸಿಪಿಐ(ಎಂ) ಮತ್ತು ಅದರ ಅನೇಕ ಯುವ ನಾಯಕರು ನೌಕರರು, ಕಾರ್ಮಿಕರು, ರೈತರು, ವಿದ್ಯಾರ್ಥಿಗಳ ಪರವಾಗಿ ತೀಕ್ಷ್ಣ ಹೋರಾಟಗಳನ್ನು ನಡೆಸಿದ್ದರೂ ಜನ ಬೆಂಬಲ ಚುನಾವಣಾ ಫಲಿತಾಂಶದಲ್ಲಿ ವ್ಯಕ್ತವಾಗುತ್ತಿರಲಿಲ್ಲ. ಈಗ ಆ ಸ್ಥಿತಿ ಬದಲಾಗಿದೆ.

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆ ಮತ್ತು ಬಿಜೆಪಿಗೆ ಸವಾಲೊಡ್ಡುವ ಪರ್ಯಾಯ ಇಲ್ಲ. ವಿಧಾನಸಭೆಯಲ್ಲಿ ಸಿಪಿಐ(ಎಂ)ಗೆ ಪ್ರವೇಶ ದೊರಕಿದೆಯಾದರೂ ಅದು ಮಾಡಬೇಕಿರುವ ಕಾರ್ಯ ಅಗಾಧವಾಗಿದೆ. ಶಿಮ್ಲಾದಲ್ಲಿ ಪಕ್ಷದ ವಿಜಯ ಮೂರನೇ ಶಕ್ತಿಯ ಆರಂಭದ ಸೂಚಿ ಎಂದು ಪರಿಗಣಿಸಬಹುದು. ರಾಜ್ಯದಲ್ಲಿ ಕಾಂಗ್ರೆಯೇತರ ಹಾಗೂ ಬಿಜೆಪಿಯೇತರ ಶಕ್ತಿಗಳ ಬೆಳವಣಿಗೆಗೆ ವಿಪುಲ ಅವಕಾಶ ಇದೆ.

ಪರ್ಯಾಯ ಕೊರತೆಯನ್ನು ಜನತಾ ದಳ ಸ್ವಲ್ಪ ಮಟ್ಟಿಗಾದರೂ ತುಂಬಬಹುದಿತ್ತು. ಆದರೆ ರಾಜ್ಯದಲ್ಲಿ ಅದರ ದೊಡ್ಡ ವಿಭಾಗ ಕಾಂಗ್ರೆ ಸೇರಿತು, ಉಳಿದದ್ದು ಬಿಜೆಪಿಯನ್ನು ಸೇರಿತು. ಹೀಗಾಗಿ ವಿಧಾನಸಭೆಯಲ್ಲಿ ರಾಕೇಶ್ ಸಿಂಘಾ ಒಬ್ಬರೇ ಕಾಂಗ್ರೆಯೇತರ, ಬಿಜೆಪಿಯೇತರ ವ್ಯಕ್ತಿಯಾಗಲಿದ್ದಾರೆ.

ಹೋರಾಟದ ಅಪಾರ ಅನುಭವವಿರುವ ರಾಕೇಶ್ ಸಿಂಘಾ, ಜನಸಮುದಾಯದ ಸಂಕಷ್ಟಗಳನ್ನು ಹಾಗೂ ಹೋರಾಟದ ಕಹಳೆಯನ್ನು ವಿಧಾನಸಭೆಯಲ್ಲಿ ಸಮರ್ಥವಾಗಿ ಪ್ರತಿಧ್ವನಿಸಲಿದ್ದಾರೆ. ಒಬ್ಬನೇ ಒಬ್ಬ ಶಾಸಕನನ್ನು ಹೊಂದಿರುವ ಈ ಅವಕಾಶವನ್ನು ಬಳಸಿಕೊಂಡು ರಾಜ್ಯದಲ್ಲಿ ರೈತ ಹಾಗೂ ಯುವಜನ ಚಳವಳಿಯನ್ನು ಬೆಳೆಸಲು ಪಕ್ಷ ಪ್ರಯತ್ನಿಸಲಿದೆ ಎಂದು ಯೆಚುರಿ ಹೇಳಿದ್ದಾರೆ.


ಶಿಮ್ಲಾದಲ್ಲಿ ಪಕ್ಷದ ಅಭ್ಯರ್ಥಿ ಗೆದ್ದಿರುವುದರಿಂದ ರಾಜ್ಯದಾದ್ಯಂತ ಇರುವ ಸಿಪಿಐ(ಎಂ) ಕಾರ್ಯಕರ್ತರಲ್ಲಿ ಉತ್ಸಾಹ-ಹುಮ್ಮಸ್ಸು ಹೆಚ್ಚಿದೆ. ಇದಕ್ಕೆ ಸೂಕ್ತವಾದ ರೂಪಕೊಟ್ಟು ರಾಜ್ಯದಲ್ಲಿ ಚಳುವಳಿಯನ್ನು ಬಲಪಡಿಸುವ ಹೊಣೆ -ಗುರಿ ಪಕ್ಷದ ಮುಂದಿದೆ. •

ಇಸ್ಕೋ ಖಾಸಗೀಕರಣವನ್ನು ವಿರೋಧಿಸಿ

ಪೊಲಿಟ್‌ಬ್ಯೂರೋ ಕರೆ

ಭಾರತೀಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ (ಇಸ್ಕೋ)ಯನ್ನು ಖಾಸಗೀಕರಿಸುವ ಪ್ರಸ್ತಾಪವನ್ನು ಆರ್ಥಿಕ ವ್ಯವಹಾರಗಳ ಮಂತ್ರಿ ಮಂಡಳ ಸಮಿತಿ ಅನುಮತಿ ನೀಡುವ ನಿರ್ಣಯ ಕೈಗೊಂಡಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಪ್ರತಿಭಟಿಸಿದೆ. ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಈ ಕಾರ್ಖಾನೆಯನ್ನು ಆಧುನೀಕರಿಸುವ ಕೆಲಸವನ್ನು Sail - ಭಾರತ ಉಕ್ಕು ಪ್ರಾಧಿಕಾರಕ್ಕೆ ನೀಡಬೇಕೆಂದು ಒತ್ತಾಯಿಸುತ್ತಿದ್ದರೂ ಅದನ್ನು ತಿರಸ್ಕರಿಸಿ ಒಂದು ಖಾಸಗೀ ಕಂಪೆನಿಗೆ ಇಸ್ಕೋದ 80ಶೇ. ಬಂಡವಾಳ ಹೊಂದಲು ಈ ಪ್ರಸ್ತಾಪ ಅವಕಾಶ ನೀಡುತ್ತದೆ.

ಈ ಖಾಸಗೀಕರಣ ಪ್ರಯತ್ನ ಕೈಗೂಡಲು ಬಿಡಬಾರದು. ಎಲ್ಲಾ ಕಾರ್ಮಿಕ ಸಂಘಗಳು, ಪ್ರಜಾಪ್ರಭುತ್ವವಾದೀ ಶಕ್ತಿಗಳು ಈ ನಿರ್ಣಯವನ್ನು ಐಕ್ಯತೆಯಿಂದ ವಿರೋಧಿಸಬೇಕು. ಸಂಸತ್ತಿನಲ್ಲಿ ಇಸ್ಕೋವನ್ನು ಖಾಸಗೀಕರಿಸುವ ಮಸೂದೆಗೆ ದೃಢ ವಿರೋಧ ವ್ಯಕ್ತಗೊಳ್ಳಬೇಕು ಎಂದು ಪೊಲಿಟ್‌ಬ್ಯೂರೋ ಕರೆ ನೀಡಿದೆ.



ಕೇರಳದಲ್ಲಿ ಈ ವರ್ಷದ ಗಾಂಧಿ ಜಯಂತಿಯ ದಿನ ರಾಜ್ಯದ ಉತ್ತರದಲ್ಲಿರುವ ಪಯ್ಯಾನ್ನೂರಿನಿಂದ ದಕ್ಷಿಣದಲ್ಲಿರುವ ರಾಜಧಾನಿ ತಿರುವನಂತಪುರದವರೆಗೆ ಒಂದು ಪಾದಯಾತ್ರೆ ನಡೆಯಿತು. ಅದರಲ್ಲಿ 50ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ನವೆಂಬರ್ 1 ರ ನಂತರ ಆ ಪಾದಯಾತ್ರೆ ತಮಿಳುನಾಡು ಪ್ರವೇಶಿಸಿತು. ಇದನ್ನು ಸ್ವಾಶ್ರಯ ಪಾದಯಾತ್ರ (ಸ್ವಾವಲಂಬನೆಯ ಪಾದಯಾತ್ರೆ) ಎಂದು ಕರೆಯಲಾಗಿತ್ತು. ಸಿಪಿಐ(ಎಂ)ನ ಹಿರಿಯ ಮುಖಂಡ ಕಾಂ. ಇ.ಎಂ.ಎಸ್. ನಂಬೂದರಿಪ್ಪಾಡ್ ಈ ಪಾದಯಾತ್ರೆಯ ಹಿನ್ನೆಲೆಯಲ್ಲಿ ಸ್ವಾವಲಂಬನೆಯನ್ನು ಮೂಲೆಗೊತ್ತಿರುವ ಹೊಸ ಆರ್ಥಿಕ ನೀತಿಯ ಬಗ್ಗೆ ವಿಶ್ಲೇಷಿಸಿದ್ದಾರೆ.

ಸ್ವರಾಜ್ಯ, ಸ್ವದೇಶಿ, ಸ್ವಾವಲಂಬನೆಗೆ ಹೊಸ ಸ್ವರೂಪ ನೀಡಬೇಕಾಗಿದೆ

ಅಕ್ಟೋಬರ್ 2 ನ್ನು ಆರಿಸಿಕೊಂಡದ್ದು ಅದು ಗಾಂಧೀಜಯಂತಿಯ ದಿನ ಎಂದು. ಪಯ್ಯನ್ನೂರನ್ನು ಆರಿಸಿಕೊಳ್ಳಲು ಕಾರಣ ಗಾಂಧೀಜಿಯ ಉಪ್ಪು ಸತ್ಯಾಗ್ರಹ ಕೇರಳದಲ್ಲಿ ನಡೆದದ್ದು ಅಲ್ಲಿ. ಈ ಪಾದಯಾತ್ರೆಯ ಸಂದೇಶ, ದಿನಾಂಕ ಹಾಗೂ ಆರಂಭದ ಸ್ಥಳ ಎಲ್ಲವೂ 'ಸ್ವರಾಜ್ಯ' ಹಾಗೂ 'ಸ್ವದೇಶಿ'ಯ ಹಳೆಯ ಹೋರಾಟಕ್ಕೆ ಹೊಸ ಸ್ವರೂಪ ನೀಡಬೇಕಾಗಿದೆ, ಹೊಸ ಹೂರಣ ತುಂಬಬೇಕಾಗಿದೆ ಎಂಬ ವಿಚಾರದ ಸಂಕೇತವಾಗಿದ್ದವು. ನರಸಿಂಹರಾವ್ ಸರಕಾರ ವಿಶ್ವಬ್ಯಾಂಕ್, ಐ.ಎಂ.ಎಫ್., ಗ್ಯಾಟ್ ಮತ್ತು ವಿಶ್ವ ಸಾಮ್ರಾಜ್ಯಶಾಹಿಯ ಇತರ ಅಂಗಸಂಸ್ಥೆಗಳ ಆಜ್ಞೆಗಳನ್ನು ಶಿರಸಾವಹಿಸಿ ಪಾಲಿಸುತ್ತಿರುವಾಗ ಇದು ...ಗತ್ಯ ಎಂಬ ಭಾವನೆಗಳ ಸಂಕೇತ ಈ ...ದಯಾತ್ರೆ.

ಗಾಂಧೀಜಿಯ ಉಪ್ಪು ಸತ್ಯಾಗ್ರಹ ...ದಿನಗಳಲ್ಲಿ ದೇಶದ ಮೇಲೆ ಅಧಿ... ಚಲಾಯಿಸುತ್ತಿದ್ದ ವಿಶ್ವದ ಏಕ...ತ್ರ ಸಾಮ್ರಾಜ್ಯಶಾಹಿ ಶಕ್ತಿ ಗ್ರೇಟ್ ಬ್ರಿಟ... ಪ್ರತಿರೋಧದ ಒದು ರೂಪವಾ... ಹದಿನೇಳು ವರ್ಷಗಳ ನಂತರ ... 15, 1947 ರಂದು ಭಾರತ ...ಪ್ ಸಾಮ್ರಾಜ್ಯಶಾಹಿಯ ನೊಗವನ್ನು ...ಯಿತು. ಅಂದಿನಿಂದ ಸುಮಾರು ...ದಶಕಗಳವರೆಗೆ ಜವಾಹರಲಾಲ್ ... ಮತ್ತು ಪ್ರಧಾನ ಮಂತ್ರಿ ಪದವಿ ...ರಿದ ಅವರ ಉತ್ತರಾಧಿಕಾರಿಗಳು ... ಚಂಚಲತೆ, ರಾಜಿಮನೋಭಾ... ತೋರ್ಪಡಿಸಿದರೂ ಒಟ್ಟಾರೆ 1947 ರಲ್ಲಿ ಗದ್ದ ಸ್ವಾತಂತ್ರ್ಯವನ್ನು ...ಳ್ಳಲು ತಮ್ಮ ಕೈಲಾದುದನ್ನೆಲ್ಲಾ ...

... ಇಂದು ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ಹಾಗೂ ವಿದೇಶ ನೀತಿಗಳಿಂದಾಗಿ ಆ ಸ್ವಾತಂತ್ರ್ಯಕ್ಕೆ ಗಂಭೀರ ಬೆದರಿಕೆ ಬಂದಿದೆ. ಆಗ ತಾನೇ ತಾನಾಗಿ ಮೆರೆಯುತ್ತಿದ್ದ ಏಕೈಕ ಸಾಮ್ರಾಜ್ಯಶಾಹಿ ಶಕ್ತಿಯ ನೊಗವನ್ನು ಕಿತ್ತೆಸೆದ ಭಾರತ ಈಗ ಅಮೇರಿಕಾದ ಮುಖಂಡತ್ವದಲ್ಲಿರುವ ವಿಶ್ವ ಸಾಮ್ರಾಜ್ಯಶಾಹಿಯ ಎಲ್ಲ ಪಾಲುದಾರರು ಕೊಳ್ಳೆ ಹೊಡೆಯಬಹುದಾದ ವಸಾಹತುವನ್ನಾಗಿ ಮಾಡಲಾಗುತ್ತಿದೆ. ನಮ್ಮ ಹಳೆಯ ಸಾಮ್ರಾಜ್ಯಶಾಹಿ ಒಡೆಯರು ಬ್ರಿಟನ್ ಕೂಡಾ ಇದರಲ್ಲಿ ಒಂದು ಪ್ರಮುಖ ಪಾಲುದಾರ.

ಹೊಸ ಸನ್ನಿವೇಶದಲ್ಲಿ ಹಳೆಯ ಹೋರಾಟದ ಸ್ಫೂರ್ತಿ

ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ಭಾಗವಹಿಸಿದ ಹಿರಿಯರು 1930ರ ಪಯ್ಯಾನ್ನೂರು ಉಪ್ಪು ಸತ್ಯಾಗ್ರಹದಲ್ಲಿ ಭಾಗವಹಿಸಿದವರೂ ಸ್ವತಃ ಈ ಪಾದಯಾತ್ರೆಯಲ್ಲಿ ಭಾಗವಹಿಸಿದರು. ಇದು ನಿಜವಾಗಿಯೂ ಹೊಸ ಸನ್ನಿವೇಶದಲ್ಲಿ ಹಳೆಯ ಸಾಮ್ರಾಜ್ಯಶಾಹಿ-ವಿರೋಧಿ ಸಾಮೂಹಿಕ ಹೋರಾಟದ ಮರು ಆಟವಾಗಿತ್ತು.

ಅಕ್ಟೋಬರ್ 2 ರಂದು ಪಯ್ಯನ್ನೂರಿನಿಂದ ಆರಂಭವಾಟ ನಂತರ ಪೂರ್ಣ ಒಂದು ತಿಂಗಳು ಪಾದಯಾತ್ರೆ ಕೇರಳದ ಹಳ್ಳಿ-ಪಟ್ಟಣಗಳಲ್ಲಿ ಸ್ವಾವಲಂಬನೆಯ ಸಂದೇಶವನ್ನು ಬಿತ್ತರಿಸಿತು. ಎಲ್ಲಾ ವಿಭಾಗಗಳ ಬುದ್ಧಿಜೀವಿಗಳು, ಎಲ್ಲಾ ಪಕ್ಷಗಳ ರಾಜಕೀಯ ಕಾರ್ಯಕರ್ತರು ಹಾಗೂ ಪಕ್ಷೇತರ ದೇಶ ಪ್ರೇಮಿಗಳು ಪಾದಯಾತ್ರಿಕರನ್ನು ಸ್ವಾಗತಿಸಿದರು.

ನಮ್ಮ ಸ್ವಾತಂತ್ರ್ಯ ಹೋರಾಟದ ಎಲ್ಲಾ ಉನ್ನತ ಧ್ಯೇಯಗಳನ್ನು ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತಿತರರ ಧ್ಯೇಯಗಳನ್ನು - ರಕ್ಷಿಸಲು ಎಲ್ಲಾ ದೇಶಪ್ರೇಮಿ ಶಕ್ತಿಗಳ ಐಕ್ಯತೆಯನ್ನು ಬೆಸೆಯುವ ಆಂದೋಲನ ಇದಾಗಿತ್ತು. ಅದೂ 'ಹಿಂದುತ್ವ' ಗುಂಪಿನ ನೇತೃತ್ವದಲ್ಲಿ ರಾಷ್ಟ್ರೀಯ ವಿಘಟನೆಯ ಶಕ್ತಿಗಳು ಒಂದೆಡೆ 'ಸ್ವದೇಶಿ' ಇತ್ಯಾದಿ ಮಂತ್ರ ಉದುರಿಸುತ್ತಾ ಮತ್ತೊಂದು ಕಡೆ ನಮ್ಮ ಆರ್ಥಿಕದ 'ಜಾಗತೀಕರಣ', "ಉದಾರೀಕರಣ" ಇತ್ಯಾದಿಗಳನ್ನು ಸ್ವಾಗತಿಸುವಲ್ಲಿ ಕಾಂಗ್ರೆಸ್ (ಐ) ನೊಡನೆ ಸ್ಪರ್ಧೆಗಿಳಿದಿರುವ ಸಂದರ್ಭದಲ್ಲಿ ಈ ಪಾದಯಾತ್ರೆ ನಡೆಯಿತು.

ಎರಡು ಪ್ರಶ್ನೆಗಳು

ಇದೊಂದು ಕಮ್ಯುನಿಸ್ಟರ ಮುತುವರ್ಜಿಯಿಂದ ನಡೆದ ರಾಜಕೀಯ ಹೆಜ್ಜೆಯಲ್ಲವೇ ಎಂಬ ಪ್ರಶ್ನೆಯನ್ನು ಕೇಳಲಾಯಿತು. ಈ ಮಾತನ್ನು ಹೇಳಿ ಜನ ಈ ಸ್ವಾವಲಂಬನಾ ಆಂದೋಲನದಲ್ಲಿ ಭಾಗವಹಿಸದಂತೆ ಮಾಡಲು ಕೂಡಾ ವಿರೋಧಿಗಳು ಪ್ರಯತ್ನಿಸಿದರು. ಖಂಡಿತವಾಗಿಯೂ ಇದೊಂದು ರಾಜಕೀಯ ಪ್ರಯತ್ನ. ಖಂಡಿತವಾಗಿಯೂ ಕಮ್ಯುನಿಸ್ಟರು ಇದರಲ್ಲಿ ಸಕ್ರಿಯರಾಗಿದ್ದಾರೆ. ಆದರೆ ಅದು ಕಮ್ಯುನಿಸ್ಟರ ಒಂದು ಆಂದೋಲನಕ್ಕೆ ಹೆಚ್ಚು ವ್ಯಾಪಕವಾದದ್ದು.

ಕಮ್ಯುನಿಸ್ಟೇತರ ಪಕ್ಷಗಳನ್ನು, ಪಕ್ಷೇತರ ದೇಶ ಪ್ರೇಮಿಗಳನ್ನು ಇಲ್ಲಿ ಒಟ್ಟು ಸೇರಿಸಿದ ಏಕೈಕ ಪ್ರಶ್ನೆಯೆಂದರೆ ನರಸಿಂಹರಾವ್ ಸರಕಾರದ ಆರ್ಥಿಕ ಹಾಗೂ ವಿದೇಶೀ ನೀತಿಗಳು ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯದ ಉನ್ನತ ಮೌಲ್ಯಗಳಿಗೆ, ಕೋಮು ಸೌಹಾರ್ದತೆಗೆ, ಆರ್ಥಿಕ, ಸ್ವಾವಲಂಬನೆಗೆ ಇತ್ಯಾದಿ ಸ್ವಾತಂತ್ರ್ಯ ಆಂದೋಲನ ಸ್ತಂಭಗಳಿಗೇ ಧಕ್ಕೆ ತರುತ್ತಿಲ್ಲವೇ ಎಂಬುದು. ಆದ್ದಕ್ಕಾಗಿ ಪಕ್ಷೇತರ ಜನಗಳನ್ನು ಅಣಿನೆರೆಸುವ ಒಂದು ಮಹತ್ವದ ಪ್ರಯತ್ನ.

ಇನ್ನೊಂದು ಪ್ರಶ್ನೆಯೂ ಎದ್ದಿತು. ಇಂದಿನ ಪರಸ್ಪರ ಅವಲಂಬಿಸಿರುವ ಜಗತ್ತಿನಲ್ಲಿ ಯಾವುದೇ ದೇಶ ಏಕ್‌ದಂ ಸ್ವಾವಲಂಬಿಯಾಗಿರಲು ಸಾಧ್ಯವೇ? ವಿಶ್ವ ಆರ್ಥಿಕದಿಂದ, ವಿಶ್ವ ರಾಜಕೀಯದಿಂದ ಭಾರತ ತನ್ನನ್ನು ದೂರವಿರಿಸಿಕೊಂಡರೆ ಸದಾ ವಿಸ್ತರಿಸುತ್ತಿರುವ ಜಗತ್ತಿನಲ್ಲಿ ಮತ್ತೆ ಸಂಪೂರ್ಣ ಏಕಾಂಗಿಯಾಗುವುದಿಲ್ಲವೇ.

ನರಸಿಂಹರಾವ್ ಸರಕಾರ ಭಾರತದ ಆರ್ಥಿಕದ ಬಾಗಿಲನ್ನು ಕಿಟಕಿಗಳನ್ನು ಜಾಗತೀಕರಣ ಮತ್ತು 'ಉದಾರೀಕರಣ'ದ ಹೆಸರಿನಲ್ಲಿ ದೊಡ್ಡದಾಗಿ ತೆರೆದಿರುವುದು ಈ ತಾತ್ವಿಕ ತರ್ಕವನ್ನು ಮುಂದೊಡ್ಡಿಯೇ. ದೇಶದ ಸಾಮಾಜಿಕ- ಸಾಂಸ್ಕೃತಿಕ ಹಾಗೂ ಆರ್ಥಿಕ ಬೆಳವಣಿಗೆಯಾಗಬೇಕಾದರೆ ದೇಶ ವಿಶ್ವ ಆರ್ಥಿಕತೆಯೊಂದಿಗೆ, ವಿಶ್ವ ರಾಜಕೀಯದೊಂದಿಗೆ ಬೆರೆತು ಬಿಡಬೇಕು ಎಂದು ಹೇಳಲಾಗುತ್ತಿದೆ.

ಏಕಾಂಗಿಯಾಗಿರಬೇಕು ಎಂದು ಅರ್ಥವಲ್ಲ

'ಸ್ವಾಶ್ರಯ ಪಾದಯಾತ್ರೆ'ಯ ಸಂಘಟಕರು ಭಾರತ ವಿಶ್ವ ಸಮುದಾಯದೊಂದಿಗೆ ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಸಂಪರ್ಕ ಇಟ್ಟುಕೊಳ್ಳಬಾರದೆಂದು ಹೇಳುತ್ತಿಲ್ಲ. ವಿಶ್ವ ಆರ್ಥಿಕದ ಬಹುಮುಖೀ ನೆರವು ಸಿಗದೆ ಭಾರತದ ಹಿಂದುಳಿದ ಆರ್ಥಿಕ ಬೆಳೆಯಲಾರದು. ಅದೇ ರೀತಿ ವಿಶ್ವ ಸಮುದಾಯದ ಸದಸ್ಯರೊಂದಿಗೆ ಸರಕುಗಳ, ವಿಚಾರಗಳ ಸತತ ವಿನಿಮಯವಿಲ್ಲದೆ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬೆಳೆಯಲು ಕೂಡಾ ಸಾಧ್ಯವಿಲ್ಲ. ಅಂದರೆ ಸ್ವಾವಲಂಬನೆಯೆಂದರೆ ನಾವು ಎಲ್ಲರಿಂದ ದೂರವಾಗಿ ಏಕಾಂಗಿಯಾಗಿರಬೇಕು ಎಂದರ್ಥವಲ್ಲ.

ಆದರೆ ವಿಶ್ವಸಮುದಾಯದ ಪಾಲುದಾರರೊಂದಿಗೆ ಸಂಬಂಧಗಳನ್ನು ಬೆಳೆಸುವಾಗ ಇಂದಿನ ಜಗತ್ತಿನಲ್ಲಿ ಅಮೇರಿಕಾ ನೇತೃತ್ವದ ವಿಶ್ವಬಂಡವಾಳಶಾಹಿಯ ಪ್ರಾಬಲ್ಯವಿದೆ ಎಂಬುದನ್ನು ಭಾರತ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸೋವಿಯೆಟ್ ಒಕ್ಕೂಟದ, ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ಹಿನ್ನಡೆಯ ಅರ್ಥ ಭಾರತದಂತಹ ಹಿಂದುಳಿದ ದೇಶಗಳು ಸಾಮ್ರಾಜ್ಯಶಾಹಿಗೆ ಸವಾಲು ಹಾಕುವ ರೀತಿಯಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬೆಳೆಯದಿದ್ದರೆ ಅವು ವಿಶ್ವ ಸಾಮ್ರಾಜ್ಯಶಾಹಿಯ ಮೇಲೆ ಅವಲಂಬಿಸಿರಬೇಕಾಗುತ್ತದೆ.

ಸಮಾಜವಾದಿ ಚೀಣಾದ ಕಡೆ ನೋಡಿ. ಹೊರಜಗತ್ತಿಗೆ ಅದು ತನ್ನ ಬಾಗಿಲು, ಕಿಟಕಿಗಳನ್ನು ತೆರೆದಿಟ್ಟಿದೆ. ಸರಕುಗಳ, ಸೇವೆಗಳ, ವಿಚಾರಗಳ ವಿನಿಮಯ ಮಾಡಿಕೊಳ್ಳುತ್ತಿದೆ. ಆದರೆ ದೇಶವನ್ನು ಸ್ವಾವಲಂಬಿಯಾಗಿಟ್ಟಿದೆ. ಆದರೆ ಭಾರತದ ಮಟ್ಟಿಗೆ ಏನಾಗಿದೆ ನೋಡಿ. ವಿಶ್ವಬ್ಯಾಂಕ್, ಐ.ಎಂ.ಎಫ್.ನಂತಹ ಆರ್ಥಿಕ ಸಂಸ್ಥೆಗಳು, ವಿಶ್ವಸಂಸ್ಥೆಯಂತಹ ರಾಜಕೀಯ ಸಂಸ್ಥೆಗಳು, ಅಂತರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ. ವಿಶ್ವ ಪರಿಸರಕ್ಕೆ ಬೆದರಿಕೆಯನ್ನು ಎದುರಿಸುವ ಕೆಲಸಗಳನ್ನು ಸಂಯೋಜಿಸಲೆಂದು ರಚನೆಗೊಳ್ಳಲಿರುವ ಸಂಸ್ಥೆ ಇತ್ಯಾದಿ ವೈಜ್ಞಾನಿಕ-ತಾಂತ್ರಿಕ ಸಂಸ್ಥೆಗಳು ಇವೆಲ್ಲಾ ನಮ್ಮಲ್ಲಿ 'ಶಿಸ್ತು' ಮೂಡಿಸುತ್ತವೆಯಂತೆ. ಆದ್ದರಿಂದ ದೇಶದ ಸ್ವಾತಂತ್ರ್ಯ ಸಾರ್ವಭೌಮತೆ ರಕ್ಷಣೆಗಾಗಿ ಹೋರಾಡಬೇಕಾಗಿದೆ.

ನರಸಿಂಹರಾವ್ ಸರಕಾರ ತಲೆಬಾಗುವುದನ್ನು ನಿಲ್ಲಿಸಬೇಕು

ಅಮೆರಿಕಾ ನಮ್ಮ ಮೇಲೆ ಹಾಕುತ್ತಿರುವ ಭಾರೀ ಒತ್ತಡಗಳೇ ಇದಕ್ಕೆ ಉದಾಹರಣೆ. ಆರ್ಥಿಕ ಪ್ರಶ್ನೆಗಳಲ್ಲಿ ಮಾತ್ರವಲ್ಲ ಅಣುಶಕ್ತಿ, ಮಾನವ ಹಕ್ಕುಗಳು, ಭಾರತ-ಪಾಕಿಸ್ತಾನ ಸಂಬಂಧಗಳು, ವಿಶೇಷವಾಗಿ ಜಮ್ಮು-ಕಾಶ್ಮೀರಕ್ಕೆ ಸಂಬಂಧ ಪಟ್ಟಂತೆ ಇತ್ಯಾದಿ ಹಲವು ವಿಚಾರಗಳಲ್ಲಿ ಅದು ಒತ್ತಡ ಹಾಕುತ್ತಿದೆ. ಈ ಪ್ರತಿಯೊಂದು ಆರ್ಥಿಕೇತರ ವಿಷಯಗಳಲ್ಲಾಗಲೀ ವ್ಯಾಪಾರ, ವ್ಯಾಪಾರ ಸುಂಕ, ಸಬ್ಸಿಡಿ ಇತ್ಯಾದಿ ಆರ್ಥಿಕ ಪ್ರಶ್ನೆಗಳಲ್ಲಾಗಲೀ ಅಮೇರಿಕಾ ಭಾರತವನ್ನು ತನ್ನ ಹತೋಟಿಗೊಳ ಪಡಿಸಬಯಸುತ್ತಿದೆ ಆದ್ದರಿಂದ ನಾವು ಅತ್ಯಂತ ಕಾಳಜಿಯಿಂದ ನಮ್ಮ ಸ್ವಾತಂತ್ರ್ಯ, ಸಾರ್ವಭೌಮತೆ, ರಾಷ್ಟ್ರೀಯ ಐಕ್ಯತೆಯನ್ನು ಕಾದುಕೊಂಡು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಪ್ರಗತಿಯತ್ತ ಒಂದೇ ಸಮನೆ ಮುನ್ನಡೆಯುತ್ತಿರಬೇಕು.

ನಿಜವಾಗಿ ನೆಹರೂ ನೇತೃತ್ವದ ಸರಕಾರಗಳಿಂದ ಹಿಡಿದು ಸ್ವಾತಂತ್ರ್ಯ ನಂತರದ ಸರಕಾರಗಳು ಸಾಕಷ್ಟು ಮಟ್ಟಿಗೆ ಇದನ್ನೇ ಮಾಡಿದವು. ಇದರಿಂದಾಗಿಯೇ ಭಾರತ ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಬೆಳೆಯಲು ಸಾಧ್ಯವಾಯಿತು. ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತಾ, ಸೋವಿಯೆತ್ ಒಕ್ಕೂಟ ಇರುವವರೆಗೆ ಅದರೊಡನೆ ಹಾಗೂ ವಿಶ್ವದ ಪ್ರಗತಿಪರ ಶಕ್ತಿಗಳೊಂದಿಗೆ ಸಹಕರಿಸುತ್ತಾ ನಾವು ವಿಶ್ವ ರಾಜಕೀಯದಲ್ಲಿ ಒಂದು ಮಹತ್ವದ ಶಕ್ತಿಯಾಗಿ ಬೆಳೆಯಲು ಸಾಧ್ಯವಾಯಿತು. ಈ ಮೂಲಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ನಮ್ಮ ಗೆಳೆಯರಿಗೆ ನೆರವಾಗಲು, ನಮ್ಮೊಡನೆ ಸಹಕರಿಸಲು ಸಿದ್ಧರಿದ್ದವರೆಲ್ಲರ ನೆರವಿನಿಂದ ನಮ್ಮನ್ನು ಬಲಗೊಳಿಸಿಕೊಳ್ಳಲು ಸಾಧ್ಯವಾಯಿತು.

ಈ ಪರಂಪರೆಯನ್ನೀಗ ನರಸಿಂಹರಾವ್ ಸರಕಾರ ಹೊರಗೆಸೆದಿದೆ. ಹೆಜ್ಜೆ ಹೆಜ್ಜೆಯಾಗಿ ಅದು ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳ ದುರಹಂಕಾರದೆದುರು ತಲೆಬಾಗುತ್ತಿದೆ. ಇದನ್ನು ನಿಲ್ಲಿಸಲೇಬೇಕು ಇಲ್ಲವಾದರೆ ದೇಶದ ಸ್ವಾತಂತ್ರ್ಯ ಉಳಿಯಲಾರದು. ಇದು ಸ್ವಾವಲಂಬನಾ ಪಾದಯಾತ್ರೆಯ ಸಂದೇಶ.

50 ಲಕ್ಷ ಬೀಡಿ ಕಾರ್ಮಿಕರ ಬದುಕಿನಲ್ಲಿ ಹೊಸ ಅಧ್ಯಾಯ ಬರೆಯಲು ಸಂಕಲ್ಪ



ದೇಶದ ಸುಮಾರು 14 ರಾಜ್ಯಗಳಲ್ಲಿ ಹರಡಿರುವ 50 ಲಕ್ಷಕ್ಕೂ ಹೆಚ್ಚು ಬೀಡಿ ಕಾರ್ಮಿಕರಿಗೆ ಒಂದು ಮಾನವೀಯ ಬದುಕನ್ನು ಬದುಕಲು ಸಾಧ್ಯವಾಗುವಂತೆ ಮಾಡಿ ಅವರ ಬದುಕಿನಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆಯುವ ದೃಢ ಸಂಕಲ್ಪದೊಂದಿಗೆ ಕೇರಳದ ಕಣ್ಣೂರಿನಲ್ಲಿ ಇದೇ ಡಿಸೆಂಬರ್ 3 ರಿಂದ ಆರಂಭವಾದ ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನವು ಡಿಸೆಂಬರ್ 5 ರಂದು ಮುಕ್ತಾಯವಾಯಿತು. ಪಶ್ಚಿಮ ಬಂಗಾಲ, ತ್ರಿಪುರಾ, ಬಿಹಾರ, ರಾಜಸ್ತಾನ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಂದ ಒಟ್ಟು 496 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ದಕ್ಷಿಣ ಪ್ರದೇಶ ಬೀಡಿ ಕಾರ್ಮಿಕರ ಸಮನ್ವಯ ಸಮಿತಿಯ ಸಂಚಾಲಕರಾದ ಕಾಂ. ಸಿ. ಕಣ್ಣನ್ ಅವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನ ಆರಂಭವಾಯಿತು. ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಕಾಂ. ವಿಮಲ ರಣದಿವೆ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಇದಕ್ಕೂ ಮೊದಲು ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಂ. ಟಿ.ಕೆ. ಬಾಲನ್ ಸ್ವಾಗತ ಕೋರಿದರು. ಸಮ್ಮೇಳನದ ಕಾರ್ಯಕಲಾಪಗಳನ್ನು ನಡೆಸಲು ಕಾಂ. ಸಿ. ಕಣ್ಣನ್ (ಕೇರಳ) ಕಾಂ. ವೈದ್ಯನಾಥನ್ (ತಮಿಳುನಾಡು) ಕಾಂ. ಹಸನತ್ ಖಾನ್ (ಪಶ್ಚಿಮ ಬಂಗಾಳ) ಕಾಂ. ವಿ.ಜೆ.ಕೆ. ನಾಯರ್ (ಕರ್ನಾಟಕ) ಮತ್ತು ಕಾಂ. ಕೆ. ಹೇಮಲತಾ (ಆಂಧ್ರಪ್ರದೇಶ) ಇವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಚುನಾಯಿಸಲಾಯಿತು. ಬೀಡಿ ಕಾರ್ಮಿಕರ ಅಖಿಲ ಭಾರತ ಸಮನ್ವಯ ಸಮಿತಿಯ ಸಂಚಾಲಕರಾದ ಕಾಂ. ಪಿ.ಕೆ. ಗಂಗೂಲಿ ಅವರು ವರದಿಯನ್ನು ಮಂಡಿಸಿದರು.

ಸಮ್ಮೇಳನದ ಮೊದಲನೆಯ ದಿನ ಸಂಜೆ ಬೀಡಿ ಕಾರ್ಮಿಕರ ಬೃಹತ್ ವರ್ಣರಂಜಿತ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಅನಂತರ ನಡೆದ ಭಾರೀ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ. ಸಿ. ಕಣ್ಣನ್, ಕಾಮ್ರೇಡ್ ವಿ.ಜೆ.ಕೆ. ನಾಯರ್ ಕಾಂ. ಪಿ.ಕೆ. ಗಂಗೂಲಿ ಅವರು ಮಾತನಾಡಿದರು. ತಮಿಳುನಾಡಿನ ಕಾಂ. ಎಸ್. ಚಂದ್ರಶೇಖರನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದ ಎರಡನೇ ದಿನವನ್ನು ಚರ್ಚೆಗಾಗಿ ಮೀಸಲಿಡಲಾಗಿತ್ತು. ಅಂದು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಂ. ಇ. ಬಾಲನಂದನ್ ಅವರು ಆಗಮಿಸಿ ಸಮ್ಮೇಳನದ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಣ್ಣೂರಿನಲ್ಲಿ ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ ನಡೆಯುತ್ತಿರುವುದು ತುಂಬ ಮಹತ್ವದ ವಿಷಯವಾಗಿದೆ. ಇಲ್ಲಿನ ಬೀಡಿ ಕಾರ್ಮಿಕರು ನಡೆಸಿದ ಸಮರಶೀಲ ಹೋರಾಟಗಳು ಚರಿತ್ರಾರ್ಹವಾಗಿವೆ. 1966 ರಲ್ಲಿ ಕೇಂದ್ರ ಸರ್ಕಾರ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯ್ದೆಯನ್ನು ಮಾಡಿದಾಗ ಆಗ ಕೇರಳದಲ್ಲಿ ಅಧಿಕಾರದಲ್ಲಿದ್ದ ಕಾಂ. ಇ.ಎಂ.ಎಸ್. ನಂಬೂದರಿಪಾಡ್ ಅವರ ನೇತೃತ್ವದ ಕಮ್ಯುನಿಸ್ಟ್ ಪಕ್ಷದ ಸರ್ಕಾರ 1968ರಲ್ಲಿ ಆ ಕಾಯ್ದೆಯನ್ನು ಕೇರಳದಲ್ಲಿ ಜಾರಿ ಮಾಡಲು ಮುಂದಾಯಿತು. ಆಗ 50 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕಣ್ಣೂರ್ ಜಿಲ್ಲೆಯಲ್ಲಿ ಬೀಡಿ ತಯಾರಿಸುತ್ತಿದ್ದ ಗಣೇಶ್, ಪಿ.ವಿ.ಎಸ್., ದರ್ಬಾರ್ ಮೊದಲಾದ ಬೀಡಿ ಮಾಲಕರು ತಮ್ಮ ಕಾರ್ಖಾನೆಗಳನ್ನು ಮುಚ್ಚಿದರು. ಜಿಲ್ಲೆಯ ಸುಮಾರು 12 ಸಾವಿರ ಕುಟುಂಬಗಳು ಉದ್ಯೋಗ ಕಳೆದುಕೊಂಡು ನಿರ್ಗತಿಕರಾಗುವ ಪರಿಸ್ಥಿತಿ ಬಂತು. ಇಂತಹ ಪರಿಸ್ಥಿತಿ ದೇಶದ ಬೇರೆ ಯಾವ ಭಾಗದಲ್ಲಿಯೂ ಈ ಹಿಂದೆ ಉಂಟಾಗಿರಲಿಲ್ಲ. ಕೇರಳದ ಸರ್ಕಾರ ಪರಿಸ್ಥಿತಿಯನ್ನು ಎದುರಿಸಲು ತೀರ್ಮಾನಿಸಿತು. ಬೀಡಿ ಕಾರ್ಮಿಕರನ್ನು ಸಹಕಾರಿ ಸಂಘದ ಅಡಿಯಲ್ಲಿ ಸಂಘಟಿಸಲಾಯಿತು. ಸರಕಾರವೇ ಅವರ ಪರವಾಗಿ ಶೇರು ಬಂಡವಾಳವನ್ನು ಒದಗಿಸಿತು. ದಿನೇಶ್ ಬೀಡಿ ಜನ್ಮತಾಳಿತು. ಇಂದು ದಿನೇಶ್ ಬೀಡಿ ಇತರ ಎಲ್ಲ ಬೀಡಿಗಳೊಂದಿಗೆ ಸ್ಪರ್ಧಿಸುತ್ತಾ, ಕಾರ್ಮಿಕರಿಗೆ ಗರಿಷ್ಠ ಸೌಲಭ್ಯಗಳಮ್ನು ಒದಗಿಸುತ್ತಾ ಮುನ್ನಡೆದಿದೆ.

ಬೀಡಿ ಕೈಗಾರಿಕೆ ಅತ್ಯಂತ ಲಾಭದಾಯಕ ಕೈಗಾರಿಕೆ. ಬೀಡಿ ಕೈಗಾರಿಕೆಗೆ ಯಂತ್ರಗಳು ಬೇಕಿಲ್ಲ, ಆಧುನಿಕ ತಂತ್ರಜ್ಞಾನ ಬಳಕೆ ಇಲ್ಲ. ಅರಣ್ಯದಲ್ಲಿ ಬೆಳೆಯುವ ತೆಂಡು ಎಲೆ ಮತ್ತು ರೈತರು ಬೆಳೆಯುವ ತಂಬಾಕು ಅದಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳು. ಬೀಡಿ ಬೆಲೆಯಲ್ಲಿ ಸಹ ಹೆಚ್ಚಿನ ವ್ಯತ್ಯಾಸಗಳು ಇರುವುದಿಲ್ಲ. ಆದರೆ ಬೀಡಿ ಕಾರ್ಮಿಕರ ಕೂಲಿಯ ವಿಷಯದಲ್ಲಿ ಮಾತ್ರ ರಾಜ್ಯದಿಂದ ರಾಜ್ಯಕ್ಕೆ ಒಂದೇ ರಾಜ್ಯದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಅಥವಾ ಕೈಗಾರಿಕೆಯಿಂದ ಕೈಗಾರಿಕೆಗೆ ವ್ಯತ್ಯಾಸಗಳಿವೆ. ಬಡತನದ ರೇಖೆಗಿಂತಲೂ ಕೆಳಮಟ್ಟದ ಕೂಲಿಯನ್ನು ಪಡೆಯುತ್ತಿರುವ ಬೀಡಿ ಕಾರ್ಮಿಕರಿದ್ದಾರೆ. ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಯ ಅಡಿಯಲ್ಲಿ ಸಿಗಬೇಕಾದ ಸೌಲಭ್ಯಗಳಿಂದ ಬಹುತೇಕ ಬೀಡಿ ಕಾರ್ಮಿಕರು ವಂಚಿತರಾಗಿದ್ದಾರೆ. ಇದಕ್ಕೆ ನಮ್ಮ ಸಂಘಟನಾ ದೌರ್ಬಲ್ಯವೇ ಕಾರಣ. 50 ಲಕ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಬೀಡಿ ಕಾರ್ಮಿಕರ ಸ್ಥಿತಿಗತಿಯಲ್ಲಿ ಬದಲಾವಣೆ ತರಲು ಸಾಧ್ಯವಾಗುವಂತಹ ಸಂಘಟನಾ ಚೌಕಟ್ಟನ್ನು ಕಟ್ಟಲು ಈ ಸಮ್ಮೇಳನ ತೀರ್ಮಾನಿಸಬೇಕು ಎಂದು ಕಾಂ. ಬಾಲನಂದನ್ ಕರೆ ನೀಡಿದರು.

ವರದಿಯ ಮೇಲೆ ಸವಿಸ್ತಾರವಾದ ಚರ್ಚೆಯ ನಂತರ ಕೆಲವು ಮುಖ್ಯ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ಸಾವಿರ ಬೀಡಿ ಕಟ್ಟಲು 50 ರೂ. ಕನಿಷ್ಟ ಮೂಲವೇತನವನ್ನು ರಾಷ್ಟ್ರೀಯ ಕನಿಷ್ಟವಾಗಿ ಮೂಲವೇತನ ನಿಗದಿ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಪುಟ 8ಕ್ಕೆ

ಹಿಂದಿ ಕಡ್ಡಾಯ ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಕೋಲಾರ: ಹಿಂದಿ ಕಡ್ಡಾಯ ವಿರೋಧಿಸಿ ಕೋಲಾರ ಜಿಲ್ಲಾ ಕೇಂದ್ರದಲ್ಲಿ ಸುಮಾರು 15ಕ್ಕೂ ಹೆಚ್ಚು ಪ್ರೌಢ ಶಾಲೆಗಳಲ್ಲಿ ತರಗತಿ ಬಹಿಷ್ಕಾರ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ವಿದ್ಯಾರ್ಥಿ ಜನತಾದಳ (ವಿ.ಜೆ.ಡಿ.), ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟ (ಡಿ.ಎಸ್.ಎಫ್.) ಸಂಘಟನೆಗಳು ಜಂಟಿಯಾಗಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿವೆ. ವಿದ್ಯಾರ್ಥಿಗಳಿಂದ, ಶಿಕ್ಷಕರಿಂದ ತುಂಬಾ ಸಹಕಾರ ಕಂಡುಬಂದಿದೆ.

ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ಸುಮಾರು 20 ಪ್ರೌಢಶಾಲೆಗಳಲ್ಲಿ ತರಗತಿ ಬಹಿಷ್ಕಾರ ಹಾಕಿದ್ದು, ಬೆಂಗಳೂರು-ಮದ್ರಾಸ್, ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದೂವರೆ ಗಂಟೆ ಕಾಲ ರಸ್ತೆ ತಡೆ ಕಾರ್ಯಕ್ರಮ ನಡೆದಿದೆ.

ಬಾಗೇಪಲ್ಲಿ ತಾಲೂಕಿನಲ್ಲಿಯೂ ಸಹ ತರಗತಿ ಬಹಿಷ್ಕಾರ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ.

ಇದೇ ಕಾರ್ಯಕ್ರಮದ ಭಾಗವಾಗಿ ಸುಮಾರು 5 ಸಾವಿರ ಪೋಸ್ಟ್ ಕಾರ್ಡ್ ಚಳುವಳಿ ಜಿಲ್ಲಾದ್ಯಂತ ನಡೆದಿದೆ.

ಭಾರತೀನಗರ (ಮಂಡ್ಯ): ಹಿಂದಿ ಕಡ್ಡಾಯದ ವಿರುದ್ಧ ಸ್ಥಳೀಯ ಭಾರತೀ ಕಾಲೇಜಿನಸ ಎಸ್.ಎಫ್.ಐ. ಘಟಕವು ಡಿಸೆಂಬರ್ 4 ರಂದು ಪ್ರತಿಭಟನಾ ಮೆರವಣಿಗೆಯನ್ನು ನಡೆಸುವುದರ ಮೂಲಕ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಕಾಲೇಜಿನ ಸುಮಾರು ಸಾವಿರ ವಿದ್ಯಾರ್ಥಿಗಳು ಸೇರಿದ್ದ ಈ ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಬಾರತೀ ಕಾಲೇಜಿನ ಎಸ್.ಎಫ್.ಐ. ಘಟಕದ ಅಧ್ಯಕ್ಷರಾದ ಎನ್.ಎಸ್. ಶಂಕರೇಗೌಡರು, ರಮೇಶ್ ಹಾಗೂ ಶಿವಲಿಂಗು ಅವರು ವಹಿಸಿದ್ದರು.

ಮೆರವಣಿಗೆಕಾರರನ್ನು ಉದ್ದೇಶಿಸಿ ಎನ್.ಎಸ್. ಶಂಕರೇಗೌಡರು ಮಾತನಾಡಿ ಹಿಂದಿ ಕಡ್ಡಾಯವನ್ನು ತೆಗೆದು ವೈಜ್ಞಾನಿಕ ಭಾಷಾ ನೀತಿಯನ್ನು ಅಳವಡಿ ಒತ್ತಾಯ, ಪ್ರತಿಭಟನೆ ಮಾಡಿದ್ದರೂ, ಸರಕಾರ ಅದನ್ನು ಜಾರಿಗೆ ತರುತ್ತಿಲ್ಲವಾದ್ದರಿಂದ ತೀವ್ರ ಹೋರಾಟ ಅಗತ್ಯ ಎಂದು ಹೇಳಿ ಈಗಲಾದರೂ ಈ ಅವೈಜ್ಞಾನಿಕ ಭಾಷಾ ನೀತಿಯನ್ನು ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಿದರು.

ನೂತನ ಪದಾಧಿಕಾರಿಗಳ ಆಯ್ಕೆ

ಮಳವಳ್ಳಿ: 93-94 ನೇ ಸಾಲಿನ ಎಸ್.ಎಫ್.ಐನ ಶಾಂತಿ ಕಾಲೇಜು ಘಟಕದ ಪದಾಧಿಕಾರಿಗಳನ್ನು ಆಯ್ಕೆಮಾಡಲಾಗಿದೆ.

ಅಧ್ಯಕ್ಷರಾಗಿ ಶುಭದೇವರಾಜೇ ಅರಸ್, ಉಪಾಧ್ಯಕ್ಷರಾಗಿ ಚಿಕ್ಕಸ್ವಾಮಿ, ಕಾರ್ಯದರ್ಶಿಯಾಗಿ ದೊಡ್ಡಯ್ಯ, ಸಹಕಾರ್ಯದರ್ಶಿಯಾಗಿ ಮಹದೇವಸ್ವಾಮಿ, ಖಜಾಂಚಿಯಾಗಿ ಬಾಲರಾಜೇ ಅರಸ್ ಮತ್ತು ಸಂಚಾಲಕರಾಗಿ ಬಸವರಾಜು ಇವರಲ್ಲದೆ ಶಿವಮಹದೇವಪ್ಪ, ರವಿಚಂದ್ರ, ಅರಾಧ್ಯ ಇವರುಗಳನ್ನೊಳಗೊಂಡ ಕಾರ್ಯಕಾರಿ ಮಂಡಳಿಯೊಂದನ್ನು ರಚಿಸಲಾಗಿದೆ.

ಬಾಗೇಪಲ್ಲಿ: ಸ್ಥಳಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ಹೈಸ್ಕೂಲು ಘಟಕವನ್ನು ರಚಿಸಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಪಿ.ವಿ. ಶ್ರೀರಾಮ, ಕಾರ್ಯದರ್ಶಿಯಾಗಿ ಎನ್.ವಿ. ವೆಂಕಟೇಶ್, ಉಪಾಧ್ಯಕ್ಷರಾಗಿ ವೆಂಕಟೇಶ್, ಶಿವಕುಮಾರ್, ಎಂ.ಎ. ಆದಿನಾರಾಯಣ, ಭಾಸ್ಕರ ರೆಡ್ಡಿ, ಎ. ಲಕ್ಷ್ಮಿನರಸಿಂಹಪ್ಪ, ಹಾಗೂ ಸಹಕಾರ್ಯದರ್ಶಿಯಾಗಿ ಬಸವರಾಜು.ವಿ, ಲಕ್ಷ್ಮಣ.ಎನ್, ಮುನಿಕೃಷ್ಣ, ಮುರಳಿಧರ, ಆರ್. ಸೂರ್ಯನಾರಾಯಣ.

ಸರಕಾರಿ ಪದವಿ ಪೂರ್ವ ಕಾಲೇಜಿನ ಕಾಲೇಜು ಘಟಕದ ಪದಾಧಿಕಾರಿಗಳು ಈ ಕೆಳಕಂಡಂತಿದ್ದಾರೆ.

ಅಧ್ಯಕ್ಷರಾಗಿ ಕೆ.ಎಸ್. ವೆಂಕಟರೆಡ್ಡಿ, ಕಾರ್ಯದರ್ಶಿಯಾಗಿ ಬಿ.ವಿ. ನಾಗರಾಜ, ಉಪಾಧ್ಯಕ್ಷರಾಗಿ ಗಂಗಾಧರ, ಆನಂದ.ಯು, ಮಲ್ಲಿಕಾರ್ಜುನ್, ಮುನಿಯಪ್ಪ, ಜಿ.ವಿ. ಶ್ರೀನಿವಾಸ್, ಮತ್ತು ಸಹಕಾ... ನಾರಾಯಣ, ಕೆ.ವೆಂಕಟೇಶ್, ರಮೇಶ್.ಕೆ, ಬಿ. ಶ್ರೀನಿವಾಸ್, ಹಾಗೂ 12 ಜನ ಸದಸ್ಯರು ಆಯ್ಕೆಯಾಗಿದ್ದಾರೆ.

ಎಸ್.ಎಫ್.ಐ.ನಿಂದ 'ಡಂಕೆಲ್ ಪ್ರಸ್ತಾಪ' ವಿಚಾರ ಸಂಕಿರಣ

ಭಾರತೀನಗರ (ಮಂಡ್ಯ) : ಡಿಸೆಂಬರ್ 3ರಂದು ಸ್ಥಳೀಯ ಭಾರತೀ ಕಾಲೇಜಿನ ಎಸ್.ಎಫ್.ಐ. ಘಟಕವು 'ಡಂಕೆಲ್ ಪ್ರಸ್ತಾಪಗಳು'ವಿಷಯದ ಮೇಲೆ ವಿಚಾರ ಸಂಕಿರಣವನ್ನು ನಡೆಸಿತು. ಈ ಸಂಕಿರಣವು ನಂಜುಂಡಸ್ವಾಮಿಯವರ ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಯಿತು. ಈ ಸಂಕಿರಣಕ್ಕೆ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಮಾತನಾಡುತ್ತಾ ಡಂಕೆಲ್ ಪ್ರಸ್ತಾಪಗಳ ದುಷ್ಪರಿಣಾಮಗಳನ್ನು ವಿವರವಾಗಿ ತಿಳಿಸಿ ಅದರ ವಿರುದ್ಧ ಸಿಡಿದೇಳಬೇಕೆಂದು ಕರೆ ಇತ್ತರು.

ಡಂಕೆಲ್ ಪ್ರಸ್ತಾಪಗಳಿಗೆ ಸಹಿ ಹಾಕುವುದರ ಮೂಲಕ ಕೇಂದ್ರ ಸರಕಾರ ದೇಶದ ಜನತೆಯನ್ನು ಗ್ಯಾಟ್‌ಗೆ ಅಡವಿಡುತ್ತಿದ್ದಾರೆ ಎಂದರು.ಅಧ್ಯಾಪಕರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, ಮಹಾರಾಷ್ಟ್ರದ ರೈತ ನಾಯಕ ಶರದ್ ಜೋಷಿ ಹಿಂದೆ ವಿಶ್ವ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ವ್ಯಕ್ತಿ. ಈಗ ಆತ ರೈತನಾಯಕ. ಈತನಿಂದ ಡಂಕೆಲ್ ಪ್ರಸ್ತಾಪಗಳ ಪರವಾದ ಮಾತುಗಳನ್ನಲ್ಲದೆ ಬೇರೇನು ತಾನೇ ಕೇಳಲು ಸಾಧ್ಯ ಎಂದರು. ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಭಾರತೀ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೋ. ಬಿ.ವಿ. ಹನುಮಂತಪ್ಪನವರು ವಹಿಸಿ ಮಾತನಾಡುತ್ತಾ ಡಂಕೆಲ್ ಪ್ರಸ್ತಾಪಗಳ ವಿರುದ್ಧ ಎಲ್ಲರೂ ಹೋರಾಟ ಮಾಡಬೇಕು ಎಂದು ಕರೆ ನೀಡಿದರು. ಈ ವಿಚಾರ ಸಂಕಿರಣದ ವ್ಯವಸ್ಥೆ ಮಾಡಿದ್ದ ಎಸ್.ಎಫ್.ಐ. ವಿದ್ಯಾರ್ಥಿಗಳಿಗೆ ವಂದನೆ ಸಲ್ಲಿಸಿದರು.

ಇನ್ನೊಬ್ಬ ಭಾಷಣಕಾರರಾಗಿ ಆಗಮಿಸಿದ್ದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡುತ್ತಾ ಡಂಕೆಲ್ ಪ್ರಸ್ತಾಪಕ್ಕೆ ಇದೇ ಡಿಸೆಂಬರ್ 15 ರಂದು ಕೇಂದ್ರ ಸರಕಾರ ಸಹಿಹಾಕುತ್ತಿರುವ ಹಿನ್ನೆಲೆಯಲ್ಲಿ ಅನೇಕ ಸಾಮೂಹಿಕ ಸಂಘಟನೆಗಳು ಡಿಸೆಂಬರ್ 3 ರಿಂ 9ರವರೆಗೆ ಡಂಕೆಲ್ ವಿರುದ್ಧ ವಾರಾಚರಣೆಯನ್ನು ಹಮ್ಮಿಕೊಂಡಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಡಂಕೆಲ್ ಪ್ರತಿಕೃತಿಯನ್ನು ಸುಡುವುದರ ಮೂಲಕ ಪ್ರತಿಭಟಿಸಬೇಕೆಂದು ಕರೆಯಿತ್ತರು.

ನಂತರ ಭಾರತೀ ಕಾಲೇಜಿನ ಎಸ್.ಎಫ್.ಐ. ಘಟಕದ ಅಧ್ಯಕ್ಷರಾದ ಎನ್.ಎಸ್. ಶಂಕರೇಗೌಡರು ವಂದನಾರ್ಪಣೆಯನ್ನು ಮಾಡಿದರು.

ರೈತರ, ಕೃಷಿ ಕೂಲಿಕಾರರ ಧರಣಿ

ಮಂಗಳೂರು: ಅಕ್ರಮ ಭೂಮಿಯ ಸಕ್ರಮ, ನಗರ ಪ್ರದೇಶದ 10 ಕಿ.ಮಿ ಒಳಗಿನ ಪ್ರದೇಶದಲ್ಲಿ ಭೂಮಿಯ ಸಕ್ರಮಕ್ಕೆ ಈಗಿರುವ ಸರ್ಕಾರದ ನೀತಿಯನ್ನು ಹಿಂತೆಗೆದುಕೊಳ್ಳಲು, ರೇಶನ್ ಕಾರ್ಡ್ ನೀಡಲು, ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ರೈತರ ಬೆಳೆ ನಷ್ಟವಾಗಿರುವುದರಿಂದ ರೈತರಿಗೆ ನೆರವು ನೀಡಲು, ರೈತರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ, ಹಳೆ ಸಾಲದ ರದ್ದತಿ, ರೈತರ ಉತ್ಪನ್ನಗಳಿಗೆ ಬೆಂಬಲಿತ ಬೆಲೆ ನೀಡಲು, ಕಡಿಮೆ ದರದಲ್ಲಿ ಗೊಬ್ಬರ, ಬೀಜ ಮತ್ತಿತರ ಕೃಷಿ ವಸ್ತುಗಳನ್ನು ನೀಡಲು ಹಾಗೂ ಇನ್ನಿತರ ರೈತ-ಕೃಷಿ ಕೂಲಿಕಾರರ ಸಮಸ್ಯೆಗಳನ್ನು ಶೀಘ್ರವೇ ಪರಿಹರಿಸಲು ಕರ್ನಾಟಕ ಪ್ರಾಂತ ರೈತ ಸಂಘದ ಮಂಗಳೂರು ಘಟಕವು ನವೆಂಬರ್ 26 ರಂದು ಮಂಗಳೂರಿನ ತಾಲೂಕು ಕಛೇರಿಯೆದುರು ಧರಣಿ ಸತ್ಯಾಗ್ರಹ ನಡೆಸಿದರು. ರೈತ ಸಂಘದ ಕಛೇರಿಯಿಂದ ಅಧ್ಯಕ್ಷ ಫೌಲ್ ಡಿ'ಸೋಜ ಹಾಗೂ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್‌ರವರ ನೇತೃತ್ವದಲ್ಲಿ ನೂರಾರು ರೈತ-ಕೃಷಿ ಕೂಲಿಕಾರರು ನಗರದಲ್ಲಿ ಮೆರವಣಿಗೆ ನಡೆಸಿ ತಾಲೂಕು ಕಛೇರಿಯೆದುರು ಧರಣಿ ನಡೆಸಿದರು.

ರೈತ-ಕೃಷಿ ಕೂಲಿಕಾರರ ಬೇಡಿಕೆಗಳ ಮನವಿಯನ್ನು ಮಂಗಳೂರು ತಾಲೂಕು ರೈತ ಸಂಘದ ಅಧ್ಯಕ್ಷ ಫೌಲ್ ಡಿ'ಸೋಜಾ, ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್, ತಾಲೂಕು ಉಪಾಧ್ಯಕ್ಷ ಎಂ. ಕೃಷ್ಣಮೂಲ್ಯ ಖಜಾಂಚಿ ಪಿ. ಪರಮೇಶ್ವರ ಭಟ್ಟ, ಸಹಕಾರ್ಯದರ್ಶಿ ಶ್ರೀನಿವಾಸ್ ಆಳ್ವ ಕಟಿಮಾರ್, ವಿಶ್ವನಾಥ ಬಂಗೇರಾ, ಕೆ.ಟಿ. ಭಂಡಾರಿ, ಮೋಹನ್ ನಾಯರ್, ಗೋಪಾಲ ಹಾಗೂ ಗುರುಪುರ ಫಿರ್ಕಾದ ಸಿಪಿಎಂ ಕಾರ್ಯದರ್ಶಿ ಯು.ಬಿ. ಲೋಕಯ್ಯ ಶೆಟ್ಟಿಯುವರನ್ನೊಳಗೊಂಡ ನಿಯೋಗವು ತಹಶೀಲ್ದಾರರಿಗೆ ಅರ್ಪಿಸಿತು. ರೈತ ಸಂಘದ ಅಧ್ಯಕ್ಷ ಫೌಲ್ ಡಿ'ಸೋಜ, ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್‌ರು ಮಾತನಾಡಿ ರೈತ-ಕೃಷಿ ಕೂಲಿಕಾರರ ಬಗ್ಗೆ ಸರಕಾರ ಕೂಡಲೇ ಸರಕಾರ ಕ್ರಮ ಕೈಗೊಳ್ಳದಿದ್ದಲ್ಲಿ ತೀವ್ರತರದ ಹೋರಾಟಕ್ಕೆ ಸಿದ್ಧರಾಗಲು ಕರೆ ನೀಡಿದರು. ವಿವಿಧ ಸಂಘಟನೆಗಳು ಸತ್ಯಾಗ್ರಹ ನಡೆಯುವ ಸ್ಥಳಕ್ಕೆ ಬಂದು ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಪದವೀಧರ ಕ್ಷೇತ್ರದಿಂದ ಕಾಂ. ಬಾಳೆ ಸ್ಪರ್ಧೆ

ಸದ್ಯದಲ್ಲೇ ಪದವೀಧರ ಕ್ಷೇತ್ರಗಳಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಚುನಾವಣೆಗಳು ನಡೆಯಲಿದ್ದು ಈಶಾನ್ಯ ಪದವೀಧರ ಕ್ಷೇತ್ರದಿಂದ ಸಿಪಿಐ(ಎಂ) ...ಯಿಂದ ಕಾಂ. ಚಂದ್ರಶೇಖರ ಎಸ್. ... ಸ್ಪರ್ಧಿಸಬೇಕೆಂದು 8, 9, ನವೆಂಬರ್ ...3 ರಂದು ಸಭೆ ಸೇರಿದ್ದ ಸಿಪಿಐ(ಎಂ) ರಾ... ತೀರ್ಮಾನಿಸಿದೆ. ನೈರುತ್ಯ ಪದ... ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಶಿವಮೊ... ವಕೀಲರಾದ ಶ್ರೀ ಜಿ. ನಾಗರಾಜ್‌ರವರಿಗೆ ... ಬೇಕೆಂದೂ ಸಭೆ ತೀರ್ಮಾ...

ಮುಂಬರುವ ಗ್ರಾಮ ... ತಾಲ್ಲೂಕು ಮತ್ತು ಜಿಲ್ಲಾ ... ವಣೆಗಳಲ್ಲಿ ಸಿಪಿಐ(ಎಂ) ಹಾಗ... ಹಿಕ ಸಂಘಟನೆಗಳು ವಿಶೇ... ಹಾಗೂ ಕೃಷಿ ಕೂಲಿಕಾರರ ... ಪ್ರಮಾಣದಲ್ಲಿ ಸ್ಪರ್ಧಿಸಲಿವೆ.

ಭಾರತದ ಆರ್ಥಿಕವನ್ನು ಉಳಿಸಲು......

6 ರಾಜ್ಯಗಳ ವಿಧಾನಸಭಾ ಚುನಾವಣೆಗಳು ಮುಗಿದಿವೆ. ಚುನಾವಣಾ ದೃಷ್ಟಿಯಿಂದ ಕಾಂಗ್ರೆಸ್ ಆಳರಸರು ಹಿನ್ನೆಲೆಗೆ ಸರಿಸಿದ್ದ ಆರ್ಥಿಕ "ಸುಧಾರಣೆ"ಗಳು ರಭಸದಿಂದ ಮತ್ತೆ ಮುನ್ನುಗ್ಗಲಿವೆಯಂತೆ. "ಉದಾರೀಕರಣ"ದ ಮೂರನೇ ಬಜೆಟ್ಟಿಗೆ ಹಣಕಾಸು ಮಂತ್ರಿಗಳ ಸಿದ್ಧತೆ ಆಗಲೇ ಆರಂಭವಾಗಿದೆ. ಇದರ ನಡುವೆ ಆರ್ಥಿಕ ನೀತಿಗೆ ವಿರೋಧ ದುಡಿಯುವ ವರ್ಗಗಳಿಂದ ಮಾತ್ರವಲ್ಲ, ಉದ್ಯಮಿಗಳಿಂದಲೂ, ಸಣ್ಣ ಉದ್ಯಮಿಗಳಿಂದ ಮಾತ್ರವಲ್ಲ, ದೊಡ್ಡ ಉದ್ಯಮಿಗಳಿಂದಲೂ ಬರಲಾರಂಭಿಸಿದೆ. ಹಾಗಾದರೆ ಹೊಸ ಆರ್ಥಿಕ ನೀತಿ "ಸಾಧಿಸಿ"ದ್ದೇನು? ಈಗ ದುಡಿಯುವ ಜನ ಏನು ಮಾಡಬೇಕಾಗಿದೆ?

ಭಾರತದ ಒಂದು ಪ್ರಮುಖ ಕಾರ್ಮಿಕ ಸಂಘಟನೆ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಪಂಧೆ ಇಂಗ್ಲೀಷ್ ಪಾಕ್ಷಿಕ 'ಫ್ರಂಟ್ ಲೈನ್'ಗೆ ನೀಡಿದ ಸಂದರ್ಶನದಲ್ಲಿ ಈ ವಿಷಯಗಳ ಬಗ್ಗೆ ಕಾರ್ಮಿಕವರ್ಗದ ಪರವಾಗಿ ಉತ್ತರವನ್ನು ನೀಡಿದ್ದಾರೆ.

• ಜೂನ್ 1991 ರಿಂದ ಹೊಸ ಆರ್ಥಿಕ ನೀತಿ ಚಾಲ್ತಿಯಲ್ಲಿದೆ. ಸ್ಥೂಲವಾಗಿ ಅವರ ಪರಿಣಾಮವೇನು? ಮೊದಲನೆಯದಾಗಿ, ಕೈಗಾರಿಕಾ ಕಾರ್ಮಿಕರು, ರೈತರು, ಮಧ್ಯಮ ವರ್ಗದ ನೌಕರರು, ಕೃಷಿ ಕಾರ್ಮಿಕರು ಮುಂತಾದವರ ಮೇಲೆ. ಎರಡನೆಯದಾಗಿ, ಭಾರತೀಯ ಕೈಗಾರಿಕೆಯ ಮೇಲೆ. ಮೂರನೆಯದಾಗಿ, ವಿದೇಶ ವ್ಯಾಪಾರ ಹಾಗೂ ಪಾವತಿ ಬಾಕಿಯ ಮೇಲೆ. ನಾಲ್ಕನೆಯದಾಗಿ, ಒಟ್ಟಾರೆ ಆರ್ಥಿಕ ಬೆಳವಣಿಗೆಯ ಮೇಲೆ. ಏಕೆಂದರೆ ಈ ನೀತಿ ಒಂದು ತ್ವರಿತ ಬೆಳವಣಿಗೆಗೆ ಉತ್ತೇಜನ ನೀಡುತ್ತದೆ ಎಂದು ಹೇಳಲಾಗಿತ್ತು.

ಡಾ. ಪಂಧೆ: ಕೈಗಾರಿಕೆಯ ಮೇಲೆ ಏನು ಪರಿಣಾಮವಾಗಿದೆ ಎಂಬುದರಿಂದ ನಾನು ಆರಂಭಿಸುತ್ತೇನೆ. ಈ ನೀತಿಯ ಪರಿಣಾಮವಾಗಿ ಕೈಗಾರಿಕಾ ಬೆಳವಣಿಗೆ ನಿಧಾನಗೊಂಡಿದೆ ಎಂಬ ತೀರ್ಮಾನಕ್ಕೆ ಉದ್ಯಮಿಗಳೇ ಈಗ ಬಂದಿದ್ದಾರೆ. ಇತ್ತೀಚೆಗೆ ಅಸೋಸಿಯೇಟೆಡ್ ಚೇಂಬರ್ ಆಫ್ ಕಾಮರ್ಸ್ (ಅಸೋಚಾಮ್ - ಉದ್ಯಮಿಗಳ ಒಂದು ಪ್ರಧಾನ ಸಂಘಟನೆ) ಏರ್ಪಡಿಸಿದ್ದ ಒಂದು ವಿಚಾರಸಂಕಿರಣದಲ್ಲಿ ಸುಮಾರಾಗಿ ಎಲ್ಲಾ ಭಾಷಣಕಾರರು ಈ ಅಂಶವನ್ನೇ ಎತ್ತಿ ಹೇಳಿದರು.

ಹೊಸ ಆರ್ಥಿಕ ನೀತಿಯ ಮೊದಲ ವರ್ಷದಲ್ಲಿ ವಾಹನ ಉತ್ಪಾದನಾ ಉದ್ದಿಮೆಯಲ್ಲಿ ಉತ್ಪಾದನೆ 14ಶೇ. ಇಳಿಯಿತು. ಇಂಜಿನಿಯರಿಂಗ್, ಬಟ್ಟೆ ಉದ್ಯಮದಲ್ಲೂ ಈ ಇಳಿಮುಖತೆ ಕಂಡು ಬಂತು. ಮುಖ್ಯವಾಗಿ ಆಮದುಗಳನ್ನು ಅವಲಂಬಿಸಿದ ಕೈಗಾರಿಕೆಗಳಲ್ಲಿ ಉತ್ಪಾದನೆ ಇಳಿಮುಖವಾಯಿತು.

ಇನ್ನೊಂದು ಅಂಶವನ್ನು ಬಹಳ ಮಂದಿ ಸರಿಯಾಗಿ ವಿಶ್ಲೇಷಿಸಿಲ್ಲ. ಆರ್ಥಿಕವನ್ನು ಉದಾರೀಕರಿಸಲಾಯಿತು. ಅಂದರೆ ಯಾವುದೇ ಉದ್ದಿಮೆಯನ್ನು ಆರಂಭಿಸಲು ಲೈಸೆನ್ಸ್‌ನ ಅಗತ್ಯವಿಲ್ಲ. ಎಲ್ಲಿ ಬೇಕಾದರೂ ಕೈಗಾರಿಕೆ ಆರಂಭಿಸಬಹುದು. ಇದರ ಪರಿಣಾಮ ವೇನು ಗೊತ್ತೇ? ಕೈಗಾರಿಕಾ ಸಚಿವಾಲಯದ ಒಂದು ವರದಿಯ ಪ್ರಕಾರ ಲೈಸೆನ್ಸಿಂಗ್ ನೀತಿಯ ಉದಾರೀಕರಣದಿಂದಾಗಿ ದೇಶದ ಆರ್ಥಿಕ ಬೆಳವಣಿಗೆಯಲ್ಲಿನ ಅಸಮಾನತೆ ಕಳೆದ ಎರಡು ವರ್ಷಗಳಲ್ಲಿ ಇನ್ನಷ್ಟು ಹೆಚ್ಚಾಯಿತು. ಏಕೆಂದರೆ ಕಳೆದ ಎರಡು ವರ್ಷಗಳಲ್ಲಿ ತೊಡಗಿಸಿದ ಬಂಡವಾಳದಲ್ಲಿ 39 ಶೇ. ಪಶ್ಚಿಮ ಭಾರತದಲ್ಲಿ, 26 ಶೇ. ಉತ್ತರ ಭಾರತದಲ್ಲಿ, ಶೇ. 19 ದಕ್ಷಿಣ ಭಾರತದಲ್ಲಿ ಹಾಗೂ 15ಶೇ. ಪೂರ್ವಭಾರತದಲ್ಲಿ ತೊಡಗಿಸಲಾಯಿತು. ಇವುಗಳಲ್ಲೂ ಕೆಲವೇ ಬಂದರು ಪಟ್ಟಣಗಳಲ್ಲಷ್ಟೇ ಬಂಡವಾಳ ತೊಡಗಿಸಲಾಯಿತು. ಬಂಡವಾಳವನ್ನು ಪಶ್ಚಿಮ ಭಾರತದಲ್ಲಿ ತೊಡಗಿಸಲಾಗುತ್ತಿಲ್ಲ. ಅಲ್ಲಿಯ ಕೆಲವು ಬಂದರು ನಗರಗಳಲ್ಲಷ್ಟೇ ತೊಡಗಿಸಲಾಗುತ್ತದೆ. ಇದರಿಂದ ಒಂದು ರೀತಿಯ ಸಂಕುಚಿತ ಪ್ರಾದೇಶಿಕತೆ ಬೆಳೆಯುತ್ತಿದೆ. ಇದರ ಪರಿಣಾಮವಾಗಿ ಪ್ರಾದೇಶಿಕ ಆಂದೋಲನಗಳು ಬೆಳೆಯಬಹುದು. ಇತ್ತೀಚೆಗಷ್ಟೇ ಮಹಾರಾಷ್ಟ್ರದಲ್ಲಿ ವಿಧರ್ಭ ಚೇಂಬರ್ ಆಫ್ ಕಾಮರ್ಸ್ ತಮ್ಮ ಪ್ರದೇಶವನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿತು.

ಇಲ್ಲಿ ಇನ್ನೊಂದು ಅಂಶವೂ ಇದೆ. ಒಂದೇ ಉದ್ದಿಮೆಯಲ್ಲಿ ಅನವಶ್ಯಕವಾಗಿ ಹೆಚ್ಚು ಹಣ ವಿನಿಯೋಗವಾಗುತ್ತಿದೆ. ಉದಾಹರಣೆಗೆ ದ್ವಿಚಕ್ರವಾಹನಗಳ ಉದ್ದಿಮೆಯಲ್ಲಿ ಎಷ್ಟೊಂದು ಬಂಡವಾಳ ತೊಡಗಿಸಲಾಗಿದೆಯೆಂದರೆ ಇದರಲ್ಲಿ ಪ್ರತಿಯೊಂದು ಕಂಪನಿಗೂ ತನ್ನ ಉತ್ಪಾದನಾ ಸಾಮರ್ಥ್ಯದ ಪೂರ್ಣ ಬಳಕೆ ಮಾಡಲಾಗುತ್ತಿಲ್ಲ. ನಮ್ಮ ದೇಶದ ಸಂಪನ್ಮೂಲಗಳು ಸೀಮಿತವಾಗಿವೆ. ಆದ್ದರಿಂದ ದೇಶದ ಆರ್ಥಿಕ ಮುನ್ನಡೆಯಾಗಬೇಕಾದರೆ ಅದನ್ನು ಸರಿಯಾಗಿ ಬಳಸಬೇಕಾಗುತ್ತದೆ. ಆದರೆ ಈಗ ಹಾಗಾಗುತ್ತಿಲ್ಲ.

• ಬಹುಶಃ ಆಮದಿನ ಉದಾರೀಕರಣದಿಂದ ಈ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ.

ಡಾ. ಪಂಧೆ: ಹೌದು. ಈ ಉದಾರ ಆಮದು ನೀತಿಗಳ ಮತ್ತೊಂದು ಪರಿಣಾಮವೆಂದರೆ ಹೆಚ್ಚೆಚ್ಚು ಕೈಗಾರಿಕೆಗಳು ರೋಗಗ್ರಸ್ತವಾಗುತ್ತಿವೆ. ನಾವು 2 ಲಕ್ಷ 40 ಸಾವಿರ ಉದ್ದಿಮೆಗಳು ರೋಗಗ್ರಸ್ತವಾಗಿವೆ ಎಂದು ಹೇಳುತ್ತಿದ್ದೆವು. ಆದರೆ ಸರಕಾರವೇ ಹೇಳುವ ಪ್ರಕಾರ ಆ ಸಂಖ್ಯೆ ಈಗ 4 ಲಕ್ಷ 7 ಸಾವಿರ. ಇದರಲ್ಲಿ ಸಿಲುಕಿರುವ ಬ್ಯಾಂಕ್ ಬಂಡವಾಳ 30 ಸಾವಿರ ಕೋಟಿ ರೂ. ಹೊಸ ಆರ್ಥಿಕ ನೀತಿಯ ನಂತರ ಕೈಗಾರಿಕೆಗಳಿಗೆ ರೋಗ ತಗುಲುವ ದರವೂ ಹೆಚ್ಚಿದೆ.

ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ ಐ.ಎಲ್.ಓ ಆರ್ಥಿಕ ತಜ್ಞ ಡಾ. ಸುದೀಪ್ತೊ ಮಂಡಲ್‌ಗೆ ಹೊಸ ಆರ್ಥಿಕ ನೀತಿ ಉದ್ಯೋಗಾವಕಾಶಗಳ ಮೇಲೆ ಬೀರಿರುವ ಪ್ರಭಾವವನ್ನು ಅಧ್ಯಯನ ಮಾಡಲು ಹೇಳಿತು. ಕೇವಲ ಈ ನೀತಿಗಳಿಂದಾಗಿಯೇ ಮುಂದಿನ ಎರಡು ವರ್ಷಗಳಲ್ಲಿ ನಿರುದ್ಯೋಗಿಗಳ ಪಟ್ಟಿಗೆ ಇನ್ನೂ 1 ಕೋಟಿ ಹೆಸರುಗಳು ಸೇರಲಿವೆ ಎಂದು ಅವರು ಹೇಳಿದ್ದಾರೆ. ಸಣ್ಣ ಹಾಗೂ ಮಧ್ಯಮ ವಲಯದ ಉದ್ದಿಮೆಗಳಿಗೆ ಈ ನೀತಿಗಳು ದೊಡ್ಡ ಬೆದರಿಕೆಯೊಡ್ಡಿವೆ ಎಂದಿದ್ದಾರೆ. ದೊಡ್ಡ ಉದ್ದಿಮೆಗಾರರು ಈ ಸಣ್ಣ ಉದ್ದಿಮೆಗಳ ವಲಯದಲ್ಲಿ 40 ಶೇ. ಬಂಡವಾಳ ಹೊಂದಲು ಅವಕಾಶ ನೀಡಿರುವ ಹೊಸ ನೀತಿ ಸಣ್ಣ ಉದ್ದಿಮೆಗಳನ್ನು ದೊಡ್ಡ ಉದ್ದಿಮೆಗಳು ನುಂಗಿ ಹಾಕುವ ಅಪಾಯವೊಡ್ಡಿದೆ ಎಂದು 'ಹಿಂದುಸ್ತಾನ್ ಟೈಮ್ಸ್' ಸಂಪಾದಕೀಯ ಹೇಳಿತು. ಗಮನಿಸಿ 'ನುಂಗಿ ಹಾಕುತ್ತದೆ' ಎಂಬ ಪದವನ್ನೇ ಇಲ್ಲಿ ಬಳಸಲಾಗಿದೆ.

ಇಬ್ಬರು ವಿಶ್ವ ಬ್ಯಾಂಕ್ ಆರ್ಥಿಕತಜ್ಞರು ಸಿಐಟಿಯು ಕಛೇರಿಗೆ ಬಂದರು. ಅವರಲ್ಲೊಬ್ಬ ಅಮೇರಿಕನ್, ಇನ್ನೊಬ್ಬ ಜರ್ಮನ್ ನಾನವರನ್ನು ಕೇಳಿದೆ- "ಕೈಗಾರಿಕೆಗಳ ಹಿಂಜರಿತ ಇರುವಾಗ ಆಮದು ಸುಂಕವನ್ನು ತಗ್ಗಿಸಿ, ಅಬಕಾರಿ ಸುಂಕವನ್ನು ಹೆಚ್ಚಿಸಿರುವ ಯಾವುದಾದರೂ

> ಖಾಸಗೀ ಟೆಲಿಫೋನ್ ಕಂಪನಿಗಳು ಎಲ್ಲಾ ಬಿಡಿ ಭಾಗಗಳನ್ನು ವಿದೇಶಗಳಿದ ಆಮದು ಮಾಡಿ ಅವನ್ನು ಜೋಡಿಸುತ್ತವಷ್ಟೆ. ಈ ಕಂಪೆನಿಗಳು ತಮ್ಮ ಕಾರ್ಮಿಕರಿಗೆ ಅತೀ ಕಮ್ಮಿ ಸಂಬಳ ಕೊಡುತ್ತವೆ. ಐ.ಟಿ.ಐ. ಕೊಡುವ ಸಂಬಳ ಕಾಲುಭಾಗದಷ್ಟು. ಭಾರತ ಸರಕಾರವೂ ಅದಕ್ಕೆ ಅವಕಾಶ ನೀಡಿದೆ. ಈ ರೀತಿಯ ಅನ್ಯಾಯದ ಸ್ಪರ್ಧೆಗಿಳಿಯಲು ಸಾರ್ವಜನಿಕ ವಲಯದ ಮೇಲೆ ಒತ್ತಡ ಹಾಕುತ್ತದೆ.

ದೇಶದ ಉದಾಹರಣೆಯನ್ನು ನೀವು ಕೊಡಬಲ್ಲಿರಾ?" ಅವರಿಬ್ಬರು ಪರಸ್ಪರ ಚರ್ಚಿಸಿದರು. ಅವರಿಗೆ ಇಂತಹ ಯಾವುದೇ ಉದಾಹರಣೆ ಸಿಗಲಿಲ್ಲ. ಭಾರತದಲ್ಲಿ ನಮ್ಮ ಸರ್ಕಾರ ಅದನ್ನೇ ಮಾಡುತ್ತಿದೆ. ಜರ್ಮನಿ, ಜಪಾನ್ ಅಥವಾ ಅಮೇರಿಕಾದಲ್ಲಿ ಕೈಗಾರಿಕಾ ಹಿಂಜರಿತವಿದೆಯೆಂದು ಅವುಗಳ ರಫ್ತಿಗೆ ಇಲ್ಲಿ ಅವಕಾಶ ಮಾಡಿಕೊಡಲು ಭಾರತ ಸರಕಾರ ನಮ್ಮ ಆಮದು ಸುಂಕ ಇಳಿಸಿತು. ಇದರಿಂದ ಬಜೆಟ್ ಆದಾಯಕ್ಕಾದ ಖೋತಾವನ್ನು ತುಂಬಲು ಭಾರತದ ಉತ್ಪಾದನೆಗಳ ಮೇಲೆ ಅಬಕಾರಿ ಸುಂಕ ಹೆಚ್ಚಿಸಿತು. ಇದರ ಪರಿಣಾಮದ ಒಂದು ಉದಾಹರಣೆ ಕೊಡುವುದಾದರೆ ಉಕ್ಕಿನಂತಹ ನಮ್ಮ ಪ್ರಮುಖ ಕೈಗಾರಿಕಾ ವಲಯದಲ್ಲಿ ಉಕ್ಕು ಉತ್ಪಾದನೆಗಳಿಗೆ ಮಾರುಕಟ್ಟೆಯಿಲ್ಲದಾಗಿದೆ. ಕಳೆದ 10 ವರ್ಷಗಳಲ್ಲಿ ಎಂದೂ ಇಷ್ಟು ದೊಡ್ಡ ಸ್ಟಾಕು ಮಾರಾಟವಾಗದೇ ಉಳಿದಿರಲಿ. ಇದಕ್ಕೆ ಪ್ರಮುಖ ಕಾರಣ

ದೊಡ್ಡ ಉದ್ಯಮಿಗಳಿಗೂ

ಮೇಲೆ ಹೇಳಿದ ಆಮದು ಸುಂಕ ಕಡಿತ ಹಾಗೂ ಅಬಕಾರಿ ಸುಂಕ ಏರಿಕೆ.

• ಈ ನೀತಿಯ ದೊಡ್ಡ ಹೊರೆಯನ್ನು ಸಾರ್ವಜನಿಕ ವಲಯದ ಉದ್ದಿಮೆಗಳು ಹೊರಬೇಕಾಗಿ ಬಂದಿದೆಯಲ್ಲವೇ?

ಡಾ. ಪಂಧೆ:ಹೌದು, ಸರಕಾರ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಏಟು ಕೊಡಲು ನಿರ್ಧರಿಸಿದ ಬಗ್ಗೆ ಹಲವು ಉದಾಹರಣೆಗಳನ್ನು ನೀಡಬಹುದು. ಬಿ.ಹೆಚ್.ಇ.ಎಲ್.ಗೆ ಮುಂದಿನ 5 ವರ್ಷಗಳಲ್ಲಿ 30 ಸಾವಿರ ಮೆಗಾವಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಮಾಡಲು ಬೇಕಾದ ತಾಪ ವಿದ್ಯುತ್ ಹಾಗೂ ಜಲ ವಿದ್ಯುತ್ ಉತ್ಪಾದನಾ ಉಪಕರಣಗಳನ್ನು ತಯಾರಿಸುವ ಸಾಮರ್ಥ್ಯವಿದೆ. ದೇಶಕ್ಕೆ ಮುಂದಿನ 5 ವರ್ಷಗಳಲ್ಲಿ 35 ಸಾವಿರ ಮೆಗಾವಾಟ್ ವಿದ್ಯುತ್ತಿನ ಅಗತ್ಯವೂ ಇದೆ. ಆದರೆ ಸರಕಾರ ಬಿ.ಹೆಚ್.ಇ.ಎಲ್.ಗೆ 10 ಸಾವಿರ ಮೆಗಾವಾಟ್‌ಗಳಷ್ಟೇ ಆರ್ಡರ್ ನೀಡಿದೆ. ಉಳಿದವನ್ನೆಲ್ಲಾ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡಲಾಗಿದೆ.

ಈಗ ಯಾವುದೇ ತಾಪವಿದ್ಯುತ್ ಯೋಜನೆಗೆ ನೆರವು ಕೊಡುವಾಗಲೇ ವಿಶ್ವ ಬ್ಯಾಂಕ್ ನಿಮ್ಮ ಉತ್ಪಾದನಾ ಘಟಕಗಳು ಯಾವುದೇ ವಿದೇಶೀ ಕಂಪೆನಿಗಳೊಂದಿಗೆ ಸಹಕಾರ ಹೊಂದಿವೆಯೇ ಎಂಬ ಪ್ರಶ್ನೆಯನ್ನು ಮರೆಯದೇ ಕೇಳುತ್ತದೆ. ಆದ್ದರಿಂದ ಭಾರತದ ಕಂಪನಿಗಳಿಗೆ ತಾವಾಗಿ ಯಾವುದೇ ಟೆಂಡರ್ ಕೊಡಲಾಗುತ್ತಿಲ್ಲ. ಇತ್ತೀಚೆಗೆ ಬಿ.ಹೆಚ್.ಇ.ಎಲ್. ಮತ್ತು ಸೀಮನ್ಸ್ ಕಂಪೆನಿ ಒಟ್ಟಾಗಿ ಭಾರತ ಸರಕಾರಕ್ಕೆ ಜಂಟಿಯಾಗಿ ಟೆಂಡರ್ ಸಲ್ಲಿಸಿದವು. ಆದರೂ ಭಾರತ ಸರಕಾರ ಕಾಂಟ್ರಾಕ್ಟನ್ನು ಸೀಮೆನ್ಸ್ ಕೊಟ್ಟಿತು. ಬಿ.ಹೆಚ್.ಇ.ಎಲ್.ಗೆ ಕೊಡಲಿಲ್ಲ. ತನ್ನದೇ ಸಾರ್ವಜನಿಕ ವಲಯಕ್ಕೆ ಸರಕಾರ ಹೊಡೆತ ನೀಡುವ ರೀತಿಯಿದು.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಉದಾಹರಣೆಯನ್ನು ಕೊಡಬಲ್ಲೆ. ಐದು ವರ್ಷಗಳ ಹಿಂದೆಯೇ ತಾನು ಬಣ್ಣದ ಟೆಲಿವಿಷನ್ ತಯಾರಿಸುವುದಾಗಿ ಅದು ಕೇಳಿತು. ಎಲ್ಲಾ ಬಿಡಿ ಭಾಗಗಳನ್ನು ತಯಾರಿಸುವ ಸಾಮರ್ಥ್ಯ ಅದಕ್ಕಿತ್ತು. ಸರಕಾರ ಪರವಾನಿಗೆ ನೀಡಲಿಲ್ಲ. ಆದರೆ ವಿದೇಶಗಳಿಂದ ಟೆಲಿವಿಶನ್ ಕಿಟ್‌ಗಳನ್ನು ಆಮದು ಮಾಡಲು ಮುಕ್ತ ಅವಕಾಶ ನೀಡಿತು.

ಭಾರತೀಯ ಟೆಲಿಫೋನ್ ಕಾರ್ಖಾನೆ ಐ.ಟಿ.ಐ.ನ ಉದಾಹರಣೆಯನ್ನೇ ತಗೊಳ್ಳಿ. ತನ್ನೆಲ್ಲಾ ಬಿಡಿ ಭಾಗಗಳನ್ನು ಇದು ತಾನೇ ಉತ್ಪಾದಿಸುತ್ತದೆ. ಆದರೆ ಖಾಸಗೀ ಟೆಲಿಫೋನ್ ಕಂಪನಿಗಳು ಎಲ್ಲಾ ಬಿಡಿ ಭಾಗಗಳನ್ನು ವಿದೇಶಗಳಿದ ಆಮದು ಮಾಡಿ ಅವನ್ನು ಜೋಡಿಸುತ್ತವಷ್ಟೆ. ಈ ಕಂಪೆನಿಗಳು ತಮ್ಮ ಕಾರ್ಮಿಕರಿಗೆ ಅತೀ ಕಮ್ಮಿ ಸಂಬಳ ಕೊಡುತ್ತವೆ. ಐ.ಟಿ.ಐ. ಕೊಡುವ ಸಂಬಳ ಕಾಲುಭಾಗ

"ಹೊಸ ಆರ್ಥಿಕ ನೀತಿಯನ್ನು ನಿಧಾನಗೊಳಿಸಿದ್ದೇವೆ ನಿಲ್ಲಿಸಲು ಇನ್ನೂ ಆಗಿಲ್ಲ ಇನ್ನಷ್ಟು ಒತ್ತಡ ಅಗತ್ಯ"

• ಉದ್ಯೋಗಾವಕಾಶಗಳು ಈ ನೀತಿಗಳಿಗೆ ಬಲಿಯಾಗಿವೆ ಎಂದು ನೀವು ಹೇಳಿದ್ದೀರಿ. ಕಳೆದೆರಡು ವರ್ಷಗಳಲ್ಲಿ ಕನಿಷ್ಠ ಮೂರು ಸಂದರ್ಭಗಳಲ್ಲಿ ಕಾರ್ಮಿಕ ಸಂಘಗಳು ಈ ನೀತಿಗಳ ವಿರುದ್ಧ ಪ್ರತಿಭಟಿಸಲು ಪ್ರಯತ್ನಿಸಿದವು. ಜೂನ್ 16, 1992 ಹಾಗೂ ಸೆಪ್ಟೆಂಬರ್ 9, 1993 ರಂದು ಕಾರ್ಮಿಕ ವರ್ಗದೊಳಗೆ ಮಧ್ಯಮ ವರ್ಗದ ನೌಕರರಿಂದ ಈ ಮುಷ್ಕರದ ಕರೆಗೆ ಸ್ಪಂದನ ದೊರೆಯಿತು. ಆದರೆ ಅದರಾಚೆಗೆ ಈ ಪ್ರಶ್ನೆಯಲ್ಲಿ ವಿಶಾಲ ಜನಸಮೂಹಗಳು ಒಳಗೊಂಡಂತೆ ಇಲ್ಲವಲ್ಲ. ಕಾರ್ಮಿಕ ಸಂಘಗಳು ಬಹಳಷ್ಟು ಜನಗಳನ್ನು ತಲುಪಲು ಸಮರ್ಥವಾಗಲಿಲ್ಲ ಎಂಬುದರಿಂದಾಗಿ ಹೀಗಾಯಿತೆ?

ಡಾ. ಫಂದೆ: ಈ ಬಾರಿ (ಸೆಪ್ಟೆಂಬರ್ 9) ಏನಾಯಿತೆಂದರೆ ಬಿಜೆಪಿ ಮತ್ತು ಕಾಂಗ್ರೆಸ್ ಬಹಿರಂಗವಾಗಿ ಬಂದ್ ಕರೆಯನ್ನು ವಿರೋಧಿಸಿದವು. ಆದರೆ ಸಾಕಷ್ಟು ಇಂಟಕ್ ಕಾರ್ಮಿಕರು ವಾಸ್ತವವಾಗಿ ಮುಷ್ಕರದಲ್ಲಿ ಭಾಗವಹಿಸಿದರು. ಹಲವು ಇಂಟಕ್ ಮತ್ತು ಬಿ.ಎಂ.ಎಸ್. ಯೂನಿಯನ್‌ಗಳೂ ಮುಷ್ಕರದ ನೋಟೀಸ್ ನೀಡಿದರು.

• ಅವರುಗಳ ಮುಖಂಡತ್ವವನ್ನು ಎದುರಿಸಿ?

ಡಾ. ಪಂಧೆ:ನಿಜವಾಗಿ ಇಂಟಕ್ ಮುಖಂಡತ್ವ ಇದನ್ನು ವಿರೋಧಿಸಲಿಲ್ಲ. ಈ ಬಾರಿ ಇಂಟಕ್‌ನ ವಿರೋಧ ಬಹಳ ಗಮನಾರ್ಹವಾಗಿರಲಿಲ್ಲ. ಏಕೆಂದರೆ ಅವರೂ ಈ ಆರ್ಥಿಕ ನೀತಿಗಳನ್ನು ಟೀಕಿಸುತ್ತಾರೆ. "ನಾವೆತ್ತಿರುವ ಇಪ್ಪತ್ತು ಅಂಶಗಳಲ್ಲಿ ನೀವು ಯಾವುದನ್ನಾದರೂ ವಿರೋಧಿಸುತ್ತೀರಾ?" ಎಂದು ಅವರನ್ನು ಕೇಳಿದಾಗ "ಇಲ್ಲ, ನಾವು ಯಾವ ಅಂಶವನ್ನು ವಿರೋಧಿಸುವುದಿಲ್ಲ" ಎಂದರು. ಬಿ.ಎಂ.ಎಸ್. ನಮ್ಮೊಡನೆ ಭಿನ್ನಾಭಿಪ್ರಾಯ ಇರಲಿಲ್ಲ. ಒಂದೇ ಸಂಗತಿಯೆಂದರೆ ರಾಜಕೀಯ ಕಾರಣದಿಂದಾಗಿಯೇ ಅವರಿಗೆ ಯಾವುದೇ ಕಾರ್ಯಾಚರಣೆ ಬೇಡವಾಗಿತ್ತು.

ನಾನು ಕಟಕ್‌ನಲ್ಲಿ ನಡೆದ ಇಂಟಕ್‌ನ ಕಳೆದ ಸಮ್ಮೇಳನದಲ್ಲಿ ಹಾಜರಿದ್ದೆ. ಪ್ರಧಾನಮಂತ್ರಿಗಳು ಆ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಆರ್ಥಿಕ ನೀತಿಯ ವಕಾಲತ್ತು ಮಾಡುತ್ತಾ ಎಕ್ಸಿಟ್ ನೀತಿಯೆಂಬುದೊಂದು ಇಲ್ಲವೇ ಇಲ್ಲ. ಜನ ಸುಮ್ಮನೆ ಕೂಗೆಬ್ಬಿಸುತ್ತಾರೆ ಎಂದರು. ಆದರೆ ಮರುದಿನ ಅದೇ ಇಂಟಕ್ ಎಕ್ಸಿಟ್ ನೀತಿಗಳನ್ನು ಖಂಡಿಸಿ ಒಂದು ನಿರ್ಣಯಗಳಲ್ಲಿ ಅಂಗೀಕರಿಸಿತು! ಇಂಟಕ್‌ನ ಕಟಕ್ ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯಗಳಲ್ಲಿ ಅವರು ಎಕ್ಸಿಟ್‌ನೀತಿ, ಉದಾರೀಕರಣ, ಬಹುರಾಷ್ಟ್ರೀಯ ಕಂಪೆನಿಗಳಿಗೆ ರಿಯಾಯ್ತಿ ಇತ್ಯಾದಿಗಳನ್ನು ವಿರೋಧಿಸಿದ್ದಾರೆ. ಆರ್ಥಿಕ ನೀತಿಗಳನ್ನು ವಿರೋಧಿವಲ್ಲಿ ಸುಮಾರಾಗಿ ಎಲ್ಲಾ ಪ್ರಶ್ನೆಗಳಲ್ಲೂ ಅವು ನಮ್ಮ ಜತೆಗೇ ಇದ್ದಾರೆ.

• ನನ್ನ ಪ್ರಶ್ನೆ ತುಸು ಬೇರೆ. ಸಂಘಟಿತ ಕಾರ್ಮಿಕ ವರ್ಗದ ಒಳಗೆ, ಮಧ್ಯಮ ವರ್ಗದ ನೌಕರರ ನಡುವೆ ನಿಮಗೆ ಹೊಸ ಆರ್ಥಿಕ ನೀತಿಗಳ ವಿರುದ್ಧ ಸಾಕಷ್ಟು ವ್ಯಾಪಕ ಬೆಂಬಲವಿದೆ. ನಮ್ಮ ಪ್ರಶ್ನೆ, ಇಂತಹ ಒಂದು ವಿರೋಧ ಗ್ರಾಮೀಣ ಪ್ರದೇಶಗಳಲ್ಲಿ ವಿಶಾಲ ಜನವಿಭಾಗಗಳಲ್ಲಿ ಏಕೆ ಬೆಳೆಯುತ್ತಿಲ್ಲ? ಗ್ರಾಮೀಣ ಪ್ರದೇಶಗಳಲ್ಲಿ ಈ ನೀತಿಗಳ ನಕಾರಾತ್ಮಕ ಪ್ರಭಾವ ಇಲ್ಲವೆಂದೋ ಅಥವಾ ಜನಗಳಿಗೆ ಈ ಬಗ್ಗೆ ಶಿಕ್ಷಣ ನೀಡಲಾಗಿಲ್ಲ ಎಂದೋ?

: ಡಾ ಪಂಧೆ:ಎರಡನೇ ಉತ್ತರ ಸರಿ. ಈ ಬಾರಿ ನಾವು ಗ್ರಾಮೀಣ ಪ್ರದೇಶಗಳನ್ನೂ ಪ್ರವೇಶಿಸಲು ಪ್ರಯತ್ನಿಸಿದ್ದೇವೆ. ಆದರೆ ದೇಶಾದ್ಯಂತ ಪರಿಣಾಮಕಾರಿಯಾಗಿ ಪ್ರಚಾರ ನಡೆಸಲು ನಮಗಾಗಿಲ್ಲ. ಮತ್ತು ನಮ್ಮ ಆಂದೋಲನ ಇನ್ನೂ ಅಂಗಡಿಕಾರರನ್ನು, ಇತರ ಸ್ತರಗಳನ್ನು ಇನ್ನೂ ತಲುಪಿಲ್ಲ.

• ಗ್ರಾಮೀಣ ಜನಸಮೂಹಗಳಲ್ಲಿ ಒಂದು ದೊಡ್ಡ ಕೂಲಿ ಮಾಡಿ ಬದುಕುವ ವಿಭಾಗವಿದೆ. ರೈತಾಪಿ ಜನಗಳ ದೊಡ್ಡ ವಿಭಾಗವಿದೆ. ಈ ಹೊಸ ನೀತಿಗಳು ಆ ವಿಭಾಗಗಳ ಮೇಲೆ ಎಂತಹ ಪ್ರಭಾವ ಬೀರಿವೆ ಎಂದು ವಿಶ್ಲೇಷಿಸಲು ಕಾರ್ಮಿಕ ಸಂಘಟನೆ ಏನಾದರೂ ಪ್ರಯತ್ನ ನಡೆಸಿದೆಯೇ? ನೀವು ಯಾವ ಕಾರ್ಯತಂತ್ರದ ಬಗ್ಗೆ ಯೋಚಿಸಿದ್ದೀರಿ?

ಡಾ. ಪಂಧೆ: ಅವರ ಮೇಲೆ ಕೈಗಾರಿಕಾ ಕಾರ್ಮಿಕ ವರ್ಗಕ್ಕಿಂತಲೂ ಗಂಭೀರ ಪರಿಣಾಮವಾಗುತ್ತಿದೆ. ಯೋಜನಾ ಆಯೋಗದ ಅಧ್ಯಯನದ ಪ್ರಕಾರ ಕಳೆದ 10 ವರ್ಷಗಳಲ್ಲಿ ಕೃಷಿ ಕಾರ್ಮಿಕರ ಕೂಲಿ 40 ಶೇ.ರಷ್ಟು ಇಳಿದಿದೆ. ಇಷ್ಟೊಂದು ಇಳಿದರೂ ಬಹಳ ಸಂಘಟನೆಯೇನೂ ಆಗಿಲ್ಲ. ಇಂದು ಸಂಘಟಿತರಾದ ಕೃಷಿ ಕಾರ್ಮಿಕರ ಸಂಖ್ಯೆ ಕೈಗಾರಿಕಾ ಕಾರ್ಮಿಕರೊಂದಿಗೆ ಹೋಲಿಸಿದರೆ ಒಂದು ಅಥವಾ ಎರಡು ಶೇಕಡವೂ ಆಗುವುದಿಲ್ಲ. ಕಾರ್ಮಿಕ ಆಂದೋಲನ ಗ್ರಾಮೀಣ ಕಾರ್ಮಿಕರು ಹಾಗೂ ಗ್ರಾಮೀಣ ಜನಸಮೂಹಗಳ ನಡುವೆ ಕೆಲಸ ಮಾಡುವಲ್ಲಿ ಹೆಚ್ಚು

> ಇಂಟಕ್‌ನ ಕಟಕ್ ಸಮ್ಮೇಳನದಲ್ಲಿ ಪ್ರಧಾನಮಂತ್ರಿಗಳು ಎಕ್ಸಿಟ್ ನೀತಿಯೆಂಬುದೇ ಇಲ್ಲ, ಜನ ಸುಮ್ಮನೇ ಕೂಗೆಬ್ಬಿಸುತ್ತಾರೆ ಎಂದರು. ಆದರೆ ಮರುದಿನ ಅದೇ ಇಂಟಕ್ ಎಕ್ಸಿಟ್ ನೀತಿಗಳನ್ನು ಖಂಡಿಸಿ ಒಂದು ನಿರ್ಣಯವನ್ನು ಅಂಗೀಕರಿಸಿದರು.

ಆಸಕ್ತಿ ವಹಿಸಬೇಕಾಗಿದೆ.- ಇದು ಅತೀ ಅತೀ ಅಗತ್ಯ ಕರ್ನಾಟಕದಲ್ಲಿ ರೈತ ಸಂಘ ರೈತರನ್ನು ಅಣಿನೆರೆಸುವಲ್ಲಿ ತುಂಬಾ ಒಳ್ಳೆಯ ಕೆಲಸ ಮಾಡಿದೆ. ಗುಜರಾತ್‌ದಲ್ಲೂ ಒಂದು ಆಂದೋಲನ ಕಾರ್ಗಿಲ್ ಕಾರ್ಯವನ್ನು ನಿಲ್ಲಿಸಿತು. ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಆಂದೋಲನಗಳು ಮೂಡಿ ಬಂದರೆ ರೈತರ, ಕೃಷಿ ಕಾರ್ಮಿಕರ ಆಂದೋಲನಗಳನ್ನು ಮೂಡಿ ಬಂದರೆ ಕಾರ್ಮಿಕ ವರ್ಗದ ಆಂದೋಲನಗಳು ಗ್ರಾಮೀಣ ಪ್ರದೇಶಗಳಿಗೆ ಹೋದರೆ ಬಹುಶಃ ಗ್ರಾಮೀಣ ಜನಸಮೂಹಗಳಲ್ಲಿ ಸ್ವಲ್ಪ ಜಾಗೃತಿ ಮೂಡಬಹುದು. ಆಗ ಆಂದೋಲನ ಬಹಳ ವ್ಯಾಪಕವಾಗುತ್ತದೆ. ಬಹಳ ಜನ ನಮಗೆ ಹೇಳುತ್ತಾರೆ-

...ಟ್ಟಲಾರಂಭಿಸಿರುವ ಆರ್ಥಿಕ ಸುಧಾರಣೆ!

...ಸರಕಾರವೂ ಅದಕ್ಕೆ ಅವಕಾಶ ...ಯ ಅನ್ಯಾಯದ ಸ್ಪರ್ಧೆಗಿಳಿಯಲು ...ಯದ ಮೇಲೆ ಒತ್ತಡ ಹಾಕುತ್ತದೆ. ...ಪೆನಿಗಳ ಕಾರ್ಮಿಕರಿಗೆ ವಸತಿ ಸೌಲ ...ಯ ಸೌಲಭ್ಯಗಳಿಲ್ಲ, ಅವರ ಮಕ್ಕ ...ಸೌಲಭ್ಯವಿಲ್ಲ.

...ರ್ಥಿಕ ನೀತಿಗಳು ಬರುವ ಮೊದಲು

...ಣಕಾಸು ಮಂತ್ರಿ ಮನಮೋ- ...ರನ್ನು ಭೇಟಿಯಾದಾಗ ಅದು ...ದ್ ನಡೆಸುತ್ತೀರಿ, ಮುಷ್ಕರ -ಇದರಿಂದಾಗಿ ಅಂತರ್ರಾ- ...ದಾಯಕ್ಕೆ ತಪ್ಪು ಸಂಕೇತ ನೀಡಿ- ಎಂದರು ಅದಕ್ಕೆ ನಾನಂದೆ - ಉದ್ದೇಶವಾಗಿತ್ತು. ಅವರು ...ಬಾರದು ಎಂಬ ಸರಿಯಾದ ...ವರಿಗೆ ದೊರೆಯಬೇಕೆಂಬುದೇ ... ಭಾರತಕ್ಕೆ ಅವರಿಗೆ ಸ್ವಾಗತ-

...ಲೇಥ್‌ಗಳು ಅಮೇರಿಕಾ, ಜರ್ಮ ...ಗಳಲ್ಲಿ ಮಾರಾಟವಾಗುತ್ತಿದ್ದವು. ...ನಿಂತಿದೆ. ಹೆಚ್.ಎಂ.ಟಿ. ತಯಾ ... ಉಪಕರಣಗಳನ್ನು ಆಮದು ...ರ ಅವಕಾಶ ನೀಡಿದೆ. ಹೊರ ...ದ ಸರಕುಗಳ ಆಮದಿನಿಂದಾಗಿ ... ಕೆಲವು ವಿಭಾಗಗಳನ್ನು ಮುಚ್ಚು

...ಯ ಕಂಪೆನಿಗಳಿಗೆ ದೊಡ್ಡ ...ವಕಾಶ ನೀಡಲಾಗುತ್ತಿದೆ. ಆದರೆ ...ರೀಕ್ಷಿಸಿದ ಮಟ್ಟದಲ್ಲಿ ಅವು ಬರು ... ಕಳೆದ ಬಾರಿ ನಾವು ಹಣ ...ನಮೋಹನ್ ಸಿಂಗ್‌ರನ್ನು ಭೇಟಿ ... "ನೀವು ಬಂದ್ ನಡೆಸುತ್ತೀರಿ, ...ತ್ತೀರಿ -ಇದರಿಂದಾಗಿ ಅಂತರ್ರಾ ...ಾಯಕ್ಕೆ ತಪ್ಪು ಸಂಕೇತ ನೀಡಿದಂ ... ಅದಕ್ಕೆ ನಾನಂದೆ -"ಇದೇ ನಮ್ಮ ... ಅವರು ಭಾರತಕ್ಕೆ ಬರಬಾರದು ... ಸಂಕೇತವೇ ಅವರಿಗೆ ದೊರೆಯ ...ಮ್ಮ ಉದ್ದೇಶ. ಭಾರತಕ್ಕೆ ಅವರಿಗೆ ...ರೆಂದರು- "ನಾವು ಒಂದು ವರ್ಷ ...ೋಟಿ ರೂ. ಬಂಡವಾಳ ನಿರೀಕ್ಷಿಸಿ ...ದಲ ವರ್ಷದಲ್ಲಿ 300 ಕೋಟಿ ...ತು. ನೀವು ವಿದೇಶೀ ಬಂಡವಾಳ

ಭಾರತಕ್ಕೆ ಬರಲು ಬಿಡುತ್ತಿಲ್ಲ" "ನಾವು ಆ ಬಂಡವಾಳವನ್ನು ವಿರೋಧಿಸುತ್ತೇವೆ" ಎಂದು ನಾನು ಉತ್ತರಿಸಿದೆ.

ಈಗ ಏನಾಗುತ್ತಿದೆ? ವಿದೇಶೀ ಕಂಪೆನಿಗಳು ನಮ್ಮಲ್ಲಿಲ್ಲದ ತಂತ್ರಜ್ಞಾನವನ್ನು ತರುತ್ತಿದ್ದರೆ ನನಗೆ ಅರ್ಥವಾಗುತ್ತದೆ. ಆದರೆ ನಾವು ಈಗಾಗಲೇ ಸಾಕಷ್ಟು ಸಮಯದಿಂದ ಪಡೆದಿರುವ ತಂತ್ರಜ್ಞಾನವನ್ನೇ ಅವು ತರುತ್ತಿವೆ. ಇದರಿಂದ ಭಾರತದ ಬಂಡವಾಳ ಸರಕು ಉದ್ದಿಮೆಗಳಿಗೆ ಭಾರೀ ಪೆಟ್ಟು ಬಿದ್ದಿದೆ. ಬಂಡವಾಳ ಸರಕುಗಳ ಯಾವುದೇ ಉತ್ಪಾದಕರನ್ನು ಕೇಳಿದರೂ ಅವರು ಹೊಸ ಆರ್ಥಿಕ ನೀತಿಗಳನ್ನು ಬಲವಾಗಿ ಟೀಕಿಸುತ್ತಾರೆ.

ಬಟ್ಟೆ ತಯಾರಿಕೆಯ ಯಂತ್ರಗಳ ಆಮದಿಗೆ ಪೂರ್ಣ ಅವಕಾಶ ನೀಡಿರುವುದರಿಂದ ಭಾರತದ ಬಟ್ಟೆ ತಯಾರಿಕಾ ಯಂತ್ರದ ಕಾರ್ಖಾನೆಗಳು ತಮ್ಮ ಉತ್ಪಾದನಾ ಸಾಮರ್ಥ್ಯದ 28 ಶೇ. ರಷ್ಟು ಮಾತ್ರ ಕೆಲಸ ಮಾಡಲು ಸಾಧ್ಯವಾಗಿದೆ. ಉದಾಹರಣೆಗೆ ಬಿರ್ಲಾ ಗುಂಪಿನ ಟೆಕ್ಸ್ ಮಾಕೋ ಬೇಡಿಕೆಯಿಲ್ಲದ್ದರಿಂದ ತನ್ನ ಕೆಲವು ಘಟಕಗಳನ್ನು ಮುಚ್ಚಬೇಕಾಗಿ ಬಂತು.

ಟಾಟಾ ಆಯಿಲ್ ಬಹುರಾಷ್ಟ್ರೀಯ ಹಿಂದುಸ್ಥಾನ್ ಲೀವರ್‌ನೊಂದಿಗೆ ವಿಲೀನಗೊಂಡಿತು. ಗೋಡ್ರೆಜ್ ಬಹುರಾಷ್ಟ್ರೀಯ ಪ್ರೋಕ್ಟರ್ ಅಂಡ್ ಗ್ಯಾಂಬಲ್ ಕಂಪನಿ ನಡುವೆ ಅಸಮಾನ 'ಸಹಕಾರ' ಏರ್ಪಟ್ಟಿದೆ. ನಮ್ಮ ಒಂದು ಪ್ರಮುಖ ಬಳಕೆದಾರ ಸರಕು ವಲಯವಾದ ಸಾಬೂನು ತಯಾರಿಕಾ ಉದ್ದಿಮೆಯಲ್ಲಿ ಶೀಘ್ರವೇ ಕೇವಲ ಎರಡೇ ಕಂಪೆನಿಗಳು ಉಳಿದಿರುತ್ತವೆ. ಲೀವರ್ ಮತ್ತು ಪ್ರೋಕ್ಟರ್ ಅಂಡ್ ಗ್ಯಾಂಬಲ್ ಅವೆರಡೂ ಬಹುರಾಷ್ಟ್ರೀಯ ಕಂಪೆನಿಗಳು. ಈ ರೀತಿ ತಮ್ಮ ಮಾರುಕಟ್ಟೆಗಳ ಮೇಲೆ ಧಾಳಿ ನಡೆಯುತ್ತಿರುವಾಗ ನಮ್ಮ ದೊಡ್ಡ ಉದ್ಯಮಿಗಳು ಹೊಸ ಆರ್ಥಿಕ ನೀತಿಗಳನ್ನು ವಿರೋಧಿಸುತ್ತಾರೆ ಎಂದು ನೀವು ಯೋಚಿಸುತ್ತೀರಾ?

ಇತ್ತೀಚೆಗೆ ಮುಂಬೈಯಲ್ಲಿ ನಡೆದ ಅವರ ಸಭೆಯೊಂದರಲ್ಲಿ ಹಾಗೂ ದಿಲ್ಲಿಯಲ್ಲಿ ನಡೆದ ಅಸೋಚಾಮ್‌ನ ವಿಚಾರ ಸಂಕಿರಣದಲ್ಲಿ ದೊಡ್ಡ ಕೈಗಾರಿಕೋದ್ಯಮಿಗಳು ಹೇಳಿದ್ದೇನು ಗೊತ್ತೆ? - " ನಾವು ನಿಜವಾಗಿಯೂ ಬದುಕುಳಿಯಬೇಕಾದರೆ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಕೈಮಿಲಾಯಿಸಬೇಕು! ಪೆಪ್ಸಿಕೋಲಾದ ಉದಾಹರಣೆ ತಗೊಳ್ಳಿ. ಎರಡು ಮೂರು ವರ್ಷಗಳಲ್ಲಿ ಅವರು 30 ಶೇ. ಮಾರುಕಟ್ಟೆಗಿಟ್ಟಿಸಿದರು. ಪಾರ್ಲೆ ಕಂಪೆನಿಯ ಚೇರ್‌ಮನ್ ಬಹಿರಂಗವಾಗಿಯೇ ಹೇಳಿದ- ಪೆಪ್ಸಿಕೋಲಾದೊಂದಿಗೆ ಪಾರ್ಲೆ ಕಂಪೆನಿ ಸ್ಪರ್ಧೆಗಿಳಿಯಲು ಸಾಧ್ಯವಿಲ್ಲ ಏಕೆಂದರೆ ಪೆಪ್ಸಿಕೋಲಾ ಜಾಹೀರಾತಿಗೆಂದೇ ಮೀಸಲಿಟ್ಟಿರುವ ಹಣ ಪಾರ್ಲೆ ಕಂಪೆನಿಯ ಒಟ್ಟು ಬಂಡವಾಳಕ್ಕಿಂತ ಹೆಚ್ಚು. ಆದ್ದರಿಂದ ಪಾರ್ಲೆ ಕಂಪೆನಿ ಪೆಪ್ಸಿಕೋಲಾದೊಂದಿಗೆ ಸ್ಪರ್ಧೆ ನಡೆಸಲು ಇನ್ನೊಂದು ಬಹುರಾಷ್ಟ್ರೀಯ ಕಂಪೆನಿ ಕೋಕಾ- ಕೋಲಾದೊಂದಿಗೆ ಕೈಮಿಲಾಯಿಸುತ್ತಿದೆ"!

● ಮೊದಲು ಕೂಡಾ ರಫ್ತಿನಲ್ಲಿ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳ ಕೊಡುಗೆ ಸ್ಥಳೀಯ ಕಂಪೆನಿಗಳಿಗಿಂತ ಕಡಿಮೆಯೇ ಇತ್ತು.

ಪಂಧೆ: ಹಿಂದೆ ಸರಕಾರ "ನೀವು ರಫ್ತು ಮಾಡಲೇಬೇಕು ಎಂದು ಅವರಿಗೆ ಹೇಳುತ್ತಿತ್ತು. ಉದಾಹರಣೆಗೆ ಪೆಪ್ಸಿಕೋಲಾಕ್ಕೂ ಇಂತಿಷ್ಟು ರಫ್ತು ಮಾಡಲೇಬೇಕು ಎಂದು ನಿಗದಿ ಮಾಡಲಾಗಿತ್ತು ಆದರೆ ಅವರೇನು ರಫ್ತು ಮಾಡುತ್ತಿದ್ದರು ಗೊತ್ತೆ? ಇಲ್ಲಿಯೇ ಅಕ್ಕಿ ಖರೀದಿಸಿ ಅದನ್ನು ರಫ್ತು ಮಾಡುತ್ತಿದ್ದರು- ಕೋಲಾವನ್ನಲ್ಲ! ಪೆಪ್ಸಿ ಕೋಲಾ ರಫ್ತು ಮಾಡುವ ವಚನವನ್ನು ಪಾಲಿಸಲೇ ಇಲ್ಲ.

ರಫ್ತುಉತ್ಪಾದನಾ ವಲಯ(E.P.7)ದ್ದು ಇನ್ನೊಂದು ಗೋಲ್‌ಮಾಲ್. ಅವು ತಮ್ಮ ಉತ್ಪಾದನೆಯನ್ನೆಲ್ಲಾ ರಫ್ತು ಮಾಡಲೇಬೇಕು. ಆದರೆ ಅವರು ಭಾರತದೊಳಗೆ ಕಳ್ಳ ಮಾಲು ತರುತ್ತಿದ್ದರಷ್ಟೆ. ರಫ್ತಿನ ಹೆಸರಲ್ಲಿ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡಲಾಗುತ್ತಿತ್ತು. ಅವರಿಗೆ ತೆರಿಗೆಗಳಿಲ್ಲ, ಕಾರ್ಮಿಕರಿಗೆ ಯಾವುದೇ ಸೌಲಭ್ಯ ಕೊಡಬೇಕಾಗಿಲ್ಲ. ಆದರೆ ಅವರು ಈ ಎಲ್ಲಾ ಸೌಲಭ್ಯಗಳನ್ನು ಗಿಟ್ಟಿಸಿಕೊಂಡು ರಫ್ತೇನೂ ಮಾಡುತ್ತಿಲ್ಲ. ಭಾರತದೊಳಗೇ ಮಾರಾಟ ಮಾಡುತ್ತಾರೆ.

● ನಾವು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳ ಪಾಲುದಾರರಾಗದೆ ಬೇರೆ ದಾರಿಯಿಲ್ಲ ಎಂದು ದೊಡ್ಡ ಉದ್ಯಮಿಗಳು ಭಾವಿಸುತ್ತಾರೆ ಎಂದಿರಿ. ಆದರೆ ದೊಡ್ಡ ಉದ್ಯಮಿಗಳ ನಡುವೆಯು ಹೊಸ ನೀತಿಗಳಿಗೆ ವಿರೋಧ ಕಾಣಲಾರಂಭಿಸಿದೆಯಲ್ಲಾ, ಈ ಬಗ್ಗೆ ವಿವರಿಸುತ್ತೀರಾ?

ಡಾ. ಪಂಧೆ: ಸ್ವಲ್ಪ ವಿರೋಧ ಬೆಳೆಯುತ್ತಿದೆ. ಏಕೆಂದರೆ ಎಲ್ಲರಿಗೂ ವಿದೇಶೀ ಸಹಕಾರ ಗಿಟ್ಟಿಸಲು ಸಾಧ್ಯವಾಗುತ್ತಿಲ್ಲ. ಅವರು ಸಹಕಾರ ಪಡೆಯಬಯಸುವ ವಿದೇಶಿ ಕಂಪೆನಿಗಳ ಕಠಿಣ ಶರತ್ತುಗಳು ಇದಕ್ಕೊಂದು ಕಾರಣ. ಈ ಬಗ್ಗೆ ಟೀಕೆ ಮಾಡಲಾರಂಭಿಸಿದ್ದಾರೆ. ಏಕೆಂದರೆ ಮೊದಲಬಾರಿಗೆ ಅವರೂ ನಷ್ಟ ಅನುಭವಿಸಲಾರಂಭಿಸಿದ್ದಾರೆ. ಟೆಲ್ಕೋ ಮೊದಲು ಪ್ರತಿದಿನ 120 ಟ್ರಕ್ ಉತ್ಪಾದಿಸುತ್ತಿತ್ತು. ಈಗ ಅದು 15-20ಕ್ಕಿಳಿದಿದೆ. ಕಾರಣ, ಆಮದು ಮಾಡಿದ ಬಿಡಿ ಭಾಗಗಳಿಗೆ ವಿಪರೀತ ಖರ್ಚು ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಇಳಿತ.

ಇಂದು ಬಹಳಷ್ಟು ಕೈಗಾರಿಕೋದ್ಯಮಿಗಳು ಕಸಿವಿಸಿ ಪಡುತ್ತಿದ್ದಾರೆ. ಆದರೆ ಅದನ್ನು ಬಹಿರಂಗವಾಗಿ ಹೇಳಲು ಅವರಿಗೆ ಆಗುತ್ತಿಲ್ಲ. ಅಸೋಚಾಮ್ ವಿಚಾರಸಂಕಿರಣದಲ್ಲಿ ನಾನು ಹೇಳಿದೆ. -"ನೀವು ಇಷ್ಟೊಂದು ನನಗೆ ಹೇಳುತ್ತಿದ್ದೀರಿ. ಅದನ್ನು ಬಹಿರಂಗವಾಗಿ ಏಕೆ ಹೇಳುತ್ತಿಲ್ಲ?" "ಸರಕಾರ ಏನು ಹೇಳುತ್ತದೋ ಅದನ್ನು ನಾವು ಸ್ವಾಗತಿಸಬೇಕು. ಅದು 'ಸಮಾಜವಾದ' ಎಂದರೂ ನಾವು ಬೆಂಬಲಿಸುತ್ತೇವೆ. ಆದರೆ ಈಗ ದಾರಿಕಾಣದಂತಾಗಿದೆ. ನಾವದನ್ನು ಬಹಿರಂಗವಾಗಿ ಹೇಳುವಂತಿಲ್ಲ. ಏಕೆಂದರೆ ಸರಕಾರಕ್ಕೆ ನಮ್ಮ ಹಲವು ದೌರ್ಬಲ್ಯಗಳು ಗೊತ್ತು ನಮ್ಮ ವಿರುದ್ಧ ಕ್ರಮ ಕೈಗೊಳ್ಳುತ್ತದೆ." ಇದು ಅವರ ಉತ್ತರ.

● ನೀವು ಬಿರ್ಲಾಗಳ ಟೆಕ್ಸ್‌ಮಾಕೋ ಹಾಗೂ ಟಾಟಾಗಳ ಟೆಲ್ಕೋದ ನೀತಿ ಬಗ್ಗೆ ಹೇಳಿದ್ದೀರಿ. ಆ ಮಟ್ಟದಲ್ಲೇ ಅಷ್ಟೊಂದು ಅತೃಪ್ತಿಯಿದ್ದರೆ ಅದು ರಾಜಕೀಯ ರೂಪ ಪಡೆಯದೇ ಇರುತ್ತದೆಯೇ?

ಡಾ. ಪಂಧೆ: ನನಗನಿಸುತ್ತಿದೆ ಈಗಾಗಲೇ ರಾಜಕೀಯ ರೂಪ ಪಡೆಯುತ್ತಿದೆ. ವಿವಿಧ ವೇದಿಕೆಗಳನ್ನು ಅವರು ಸರಕಾರದ ಧೋರಣೆಗಳನ್ನು ಟೀಕಿಸಲಾರಂಭಿಸಿದ್ದಾರೆ. ಉದಾಹರಣೆಗೆ ಟೆಲ್ಕೋದವರು ನೀತಿಗಳನ್ನು ಬದಲಿಸಿ ಎಂದು ಸರಕಾರಕ್ಕೆ ಮನವಿ ಮಾಡಿದ್ದಾರೆ. ಮೆಶಿನರಿ ತಯಾರಕರು ಕನಿಷ್ಟ ಬಂಡವಾಳ ಸರಕುಗಳ ವಲಯದಲ್ಲಾದರೂ ಸೀಮಾ ಸುಂಕ (ಆಮದು ಸುಂಕ) ವನ್ನು ಮತ್ತೆ ಹಾಕಿ ಎಂದು ಸರಕಾರವನ್ನು ಕೇಳಿದ್ದಾರೆ ಎಂದು ತಿಳಿದು ಬಂದಿದೆ.

...ಕ ನೀತಿಗಳನ್ನು ಮುಂದುವರಿಸು ...ಳಬಹುದಾದದ್ದು ಇಷ್ಟೇ - ನಾವು ... ನಿಧಾನಗೊಳಿಸಿದ್ದೇವೆ. ಆದರೆ ...ನಮಗಾಗಿಲ್ಲ. ಇನ್ನಷ್ಟು ಒತ್ತಡ

...ರ ಸಮ್ಮೇಳನದಲ್ಲಿ ನೀವು ಸಿಐಟಿಯು ...ರ ನಡುವೆ ಸಂಘಟನೆ ನಡೆಸುವ ಕರೆ ... ವರ್ಷಗಳಲ್ಲಿ ಕಾಂಟ್ರಾಕ್ಟ್ ಕಾರ್ಮಿ- ...ಸಿಐಟಿಯು ಸ್ವಲ್ಪ ಕೆಲಸ ಮಾಡಿದೆ. ...ಂಟ್ರಾಕ್ಟ್, ಕ್ಯಾಶುವಲ್ ಕಾರ್ಮಿಕರನ್ನು ... ಇತ್ತೀಚೆಗೆ ಸಾಕಷ್ಟು ಗಮನ ದೊರೆ-

... : ಈ ದಿಕ್ಕಿನಲ್ಲಿ ನಾವು ಕೆಲವು ... ಆದರೆ ಅಸಂಘಟಿತ ವಲಯದ ... ನಮ್ಮ ಪ್ರಯತ್ನ ಕೇವಲ ಸಾಂಕೇ ...ಇಂದು ಅಸಂಘಟಿತ ಕಾರ್ಮಿಕರು ...ಮೂಹದಲ್ಲಿ ಶೇ. 85 ಇದ್ದಾರೆ. ...ಮೂಹ ತುಂಬಾ ಸಣ್ಣ ವಿಭಾಗ. ...ಈ ಸಮಸ್ಯೆಯ ಅಂಚನ್ನು ತಲುಪಿ

...ತ್ತು ಮಧ್ಯಮ ಪ್ರಮಾಣದ ಉದ್ದಿ- ...ಆರ್ಥಿಕ ನೀತಿ ತುಂಬಾ ನಕಾರಾತ್ಮಕ ...ದ್ದ ಉದ್ದಿಮೆಗಳು ಹಿಂದೆ- ಮುಂದ ...ಂದು ನೀವು ಈ ಮೊದಲು ಹೇಳಿ- ...ಣದ ಪ್ರಮಾಣದ ಉದ್ಯಮಿಗಳನ್ನು ...ು ಏನು ಮಾಡಿದೆ?


... : *ಸಣ್ಣ ಉದ್ಯಮಿಗಳು ಕೆಲವು ...ು ಚಟುವಟಿಕೆಗಳಲ್ಲೂ ಪಾತ್ರವಹಿ...*

...ಸಲಾರಂಭಿಸಿದ್ದಾರೆ. ದಿಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳ ಉತ್ಪಾದಕರ ಸಂಘದ ಒಂದು ನಿರ್ಣಯ ನಮಗೆ ಒಂದು ಆಶ್ಚರ್ಯದ ಸುದ್ದಿಯಾಗಿತ್ತು. ದಿಲ್ಲಿಯಲ್ಲಿ ಸೆಪ್ಟೆಂಬರ್ 9ರ ಚಳುವಳಿಯಲ್ಲಿ ಅವರೂ ಸೇರಿದ್ದರು. ತಮ್ಮ ಪ್ರತಿಭಟನೆ ವಿದ್ಯುತ್ ತೊಂದರೆ ಇತ್ಯಾದಿಗಳ ಬಗ್ಗೆ ಎಂದು ಅವರು ಹೇಳಿಕೊಂಡರೂ ನಮ್ಮ ಬಂದ್‌ನೊಂದಿಗೆ ಅವರು ತಮ್ಮ ಕಾರ್ಯಾಚರಣೆಯನ್ನು ಸೇರಿಸಿಕೊಂಡರು. ನಾವಿಂದು ಕೈಗಾರಿಕೋದ್ಯಮಿಗಳಿಂದ ಅವರ ಸಮಸ್ಯೆಗಳ ಬಗ್ಗೆ ಬಹಳ ಮನವಿಗಳನ್ನು ಪಡೆಯುತ್ತಿದ್ದೇವೆ. ಸಣ್ಣ ಪ್ರಮಾಣದ ಚಟುವಟಿಕೆಗಳಲ್ಲಿನ ಇಳಿಮುಖತೆಯನ್ನು ನಿಲ್ಲಿಸಲು ಏನಾದರೂ ಮಾಡಬೇಕು ಎಂಬ ಭಾವನೆ ಬೆಳೆಯುತ್ತಿದೆ.

ಅಸ್ಸೋಚಾಮ್ ವಿಚಾರ ಸಂಕಿರಣದಲ್ಲಿ ನಾನು ಈಗ ಪರಿಸ್ಥಿತಿ ಉದ್ದಿಮೆಗೂ, ಕಾರ್ಮಿಕರಿಗೂ ತುಂಬಾ ಗಂಭೀರವಾಗುತ್ತಿರುವುದರಿಂದ ಉದ್ದಿಮೆಗಳು ಹಾಗೂ ಕಾರ್ಮಿಕ ಸಂಘಗಳು ಹತ್ತಿರ ಸರಿದು ವಿಶ್ವ ಬ್ಯಾಂಕ್ ನೀತಿಗಳಿಗೆ ಪರ್ಯಾಯವಾದ ನೀತಿಗಳನ್ನು ತಯಾರಿಸಬೇಕಾದ ಸಮಯ ಬಂದಿದೆ, ಈ ಮೂಲಕ ನಮ್ಮ ಆರ್ಥಿಕವನ್ನು ಉಳಿಸಬಹುದು, ಸ್ವತಂತ್ರ ಆರ್ಥಿಕ ಬೆಳವಣಿಗೆಯನ್ನು ಉಳಿಸಿಕೊಳ್ಳಬಹುದು ಎಂಬ ಪ್ರಸ್ತಾಪವನ್ನು ಮುಂದಿಟ್ಟೆ. "ನಾಳೆ ಇದೇ ಬಹುರಾಷ್ಟ್ರೀಯ ಕಂಪೆನಿಗಳು ನಿಮ್ಮನ್ನು ಉಳಿಯಗೊಡುವುದಿಲ್ಲ. ನಾವು ಒಟ್ಟಾಗಿ ಕೆಲವು ಪರ್ಯಾಯಗಳನ್ನು ರೂಪಿಸಿ ಸರಕಾರದೊಡನೆ ಅದನ್ನು ಎತ್ತೋಣ. ಸರಕಾರದ ಮೇಲೆ ಒತ್ತಡ ತರೋಣ" ಎಂದೆ. ಹಲವು ಉದ್ಯಮಿಗಳು ಈ ಸೂಚನೆಯನ್ನು ಸ್ವಾಗತಿಸಿ ಈ ದಿಕ್ಕಿನಲ್ಲಿ ಪ್ರಯತ್ನಿಸಬಹುದು ಎಂದರು.

ಬ್ಯಾಂಕುಗಳು ಮಾರಾಟಕ್ಕಿವೆ!!

-- ಜಿ.ಎಸ್.ಮಣಿ



ನರಸಿಂಹರಾವ್ ಸರಕಾರದ 30ನೇ ತಿಂಗಳಲ್ಲಿ

ರಾಷ್ಟ್ರೀಕೃತ ಬ್ಯಾಂಕುಗಳು ಮಾರಾಟಕ್ಕಿವೆ. ಮಾರಾಟಗಾರರು: *ಭಾರತ ಸರ್ಕಾರ.ಕೊಳ್ಳುವವರು: ಬಂಡವಾಳಿಗರು.* ಇದು ಇಂದಿನ ಬಿಸಿ ಸುದ್ದಿ.

ಜಗತ್ತಿನಲ್ಲೇ ಅತಿ ದೊಡ್ಡ ಶಾಖಾ ಜಾಲವುಳ್ಳ ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ಶೇರುಗಳ ಮಾರಾಟ ಪ್ರಾರಂಭಿಸಿದೆ. ಸಾರ್ವಜನಿಕರಿಗೆ ಶೇರುಗಳನ್ನು ಮಾರಿ ತನ್ನ ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತಿರುವ ಪ್ರಥಮ ರಾಷ್ಟ್ರೀಕೃತ ಬ್ಯಾಂಕ್ ಇದು. ಇದಕ್ಕಾಗಿ ಲೋಕಸಭೆಯಲ್ಲಿ ಭಾರತೀಯ ಸ್ಟೇಟ್‌ಬ್ಯಾಂಕ್‌ನ ಕಾಯಿದೆಯನ್ನೆಲ್ಲಾ ಮಾರ್ಪಾಡು ಮಾಡಲಾಗುತ್ತಿದೆ.

ಹೀಗೆ ಬ್ಯಾಂಕಿಂಗ್ ವಲಯದ ಸುಧಾರಣೆ, ಅರ್ಥಾತ್ ಖಾಸಗೀಕರಣ ನಮ್ಮ ಆರ್ಥಿಕದೊಳಗೆ ಬರುತ್ತಿದೆ. ಹಣಕಾಸು ವಲಯದ ಉದಾರೀಕರಣದ ಪ್ರಾರಂಭ ಮಾತ್ರವಾಗಿರುವ ಈ ಕ್ರಮದ ಹಿಂದೆಯೇ ಇನ್ನೂ ಹಲವು ಕ್ರಮಗಳು ಬರಬಹುದು. ದೇಶದ ಬಡಜನತೆಯ ಅವಶ್ಯಕತೆಗಳನ್ನು ಗಮನಿಸುತ್ತಿದ್ದ ಬ್ಯಾಂಕುಗಳು ಶ್ರೀಮಂತರ ಸೊತ್ತಾಗುತ್ತ ನಡೆದಿವೆ.

ಈಗ ಭಾರತೀಯ ಸ್ಟೇಟ್ ಬ್ಯಾಂಕಿನ ರೂ. 1,240 ಕೋಟಿ ಬಂಡವಾಳ ಬಹುತೇಕವಾಗಿ ಶ್ರೀಮಂತರಿಂದಲೇ ಬರಬಹುದೆ?

ಮಾರುಕಟ್ಟೆಯನ್ನೇ ಕೊಳ್ಳುವ ಪ್ರಯತ್ನ

ವಸ್ತುಗಳನ್ನು, ಸೇವೆಯನ್ನು ಕೊಳ್ಳುವುದು ಸಹಜವಾದದ್ದು. ಆದರೆ ಮುಕ್ತ ಮಾರುಕಟ್ಟೆಯತ್ತ ಸಾಗುತ್ತಿರುವ ಕಡೆ ಮಾರುಕಟ್ಟೆಯನ್ನೇ ಕೊಳ್ಳುವ ಪ್ರಯತ್ನಗಳು ನಡೆಯುತ್ತವೆ. ಹಣಕಾಸು ವಲಯ ಆರ್ಥಿಕದಲ್ಲೇ ದೊಡ್ಡ ವಲಯ. ಇಲ್ಲಿ ಬ್ಯಾಂಕುಗಳ ಮಾರಾಟ ಈಗ ನಡೆಯಲಾರಂಬಿಸಿದೆ.

ಕೆಲವು ತಿಂಗಳುಗಳ ಹಿಂದೆ ವೈಶ್ಯ ಬ್ಯಾಂಕ್ ಎಂಬ ಖಾಸಗೀ ಬ್ಯಾಂಕೊಂದನ್ನು ಕೊಳ್ಳುವ ಪ್ರಯತ್ನ ನಡೆದಿತ್ತು. ಆದರೆ ಕೆಲವು ಕಾರಣಗಳಿಂದಾಗಿ ಅದು ಸಾಧ್ಯವಾಗಲಿಲ್ಲ.

ಈಗ ಕೇರಳದ 'ಸಿರಿಯನ್ ಕ್ರಿಶ್ಚಿಯನ್ ಬ್ಯಾಂಕ್' ಎಂಬ ಬ್ಯಾಂಕಿನ ಖರೀದಿಗೆ ಹಲವು ಪ್ರಯತ್ನಗಳು ನಡೆದಿವೆ. ಹಿಂದೆ ಕಂಡು ಕೇಳರಿಯದ ಘಟನೆಗಳು. ಆದರೆ ಪಾಶ್ಚಾತ್ಯ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಇದು ಸರ್ವೆ ಸಾಮಾನ್ಯವಂತೆ. ಈಗ ಉದಾರೀಕರಣದ ಜೊತೆಗೇ ಬಂಡವಾಳಿಗರ ನಡುವೆ ಇಂತಹ ಹಣಾಹಣಿ ಪ್ರಾರಂಭವಾಗಿದೆ. ಇದು ವ್ಯಾಪಾರ ಯುದ್ಧ. ಆದರೆ ಈ ಯುದ್ಧಗಳಡಿ ಸಿಕ್ಕು ನರಳಿ ನೋವನ್ನನು ಭಫಿಸುವ ದುಡಿಯುವ ಜನತೆಯ ಪಾಡು?

ಉದಾರೀಕರಣದೊಂದಿಗೆ ಇಂತಹ ಯುದ್ಧಗಳು ಮತ್ತು ಅದರ ಪರಿಣಾಮಗಳು ಹೆಚ್ಚಾಗಲಿವೆ.

ರಕ್ಕಸರ ಯುದ್ಧ

ರಾಕ್ಷಸ ರಾಕ್ಷಸರ ನಡುವೆ ಯುದ್ಧವಾದಾಗ ಎದ್ದ ಹೊಗೆ ದೇವಲೋಕದವರನ್ನು ಕಂಗಡಿಸಿತು ಎಂದೆಲ್ಲ ನಮ್ಮ ಪುರಾಣಗಳು ಹೇಳುತ್ತವೆ ಈಗಲೂ ಅಂತಹ ಯುದ್ಧಗಳು ನಡೆದಿವೆ ಎಂದರೆ ನಂಬುತ್ತೀರಾ?

ಭಾರತದೊಳಗೆ ಎರಡು ಬಹುರಾಷ್ಟ್ರೀಯ ಕಂಪನಿಗಳಾದ ಕೋಕಾ ಕೋಲಾ ಮತ್ತು ಪೆಪ್ಸಿ ಕೋಲಾ ಇವುಗಳ ನಡುವೆ ಘೋರ ಯುದ್ಧ. ಕಾರಣ? ಅವು ತಯಾರಿಸುವ ಪಾನೀಯಗಳನ್ನು ಯಾವ ಅಳತೆಯ ಬಾಟಲಿಯೊಳಗೆ ತುಂಬಬೇಕೆಂಬ ವಿವಾದದಿಂದಾಗಿ ಸರ್ಕಾರದ ಲೈಸನ್ಸ್ ಹೊಂದಬೇಕಾಗಿರುವ. ಅದಕ್ಕಾಗಿ ಮಾಡುತ್ತಿರುವ ಯುದ್ಧದಿಂದಾಗಿ ಕೇಂದ್ರ ಸಚಿವಾಲಯವೇ ಬೇಸತ್ತಿದೆಯಂತೆ.

ಹೇಗಿದೆ ಈ ಘೋರ ಯುದ್ಧ?

ರಫ್ತು ಮಂತ್ರದಡಿ ನರಳುತ್ತಿರುವ ದೇಶ

ಕೇಂದ್ರ ಸರ್ಕಾರ ಐ.ಎಂ.ಎಫ್. -ವಿಶ್ವ ಬ್ಯಾಂಕ್‌ಗಳ ಹುಕುಮಿನಂತೆ ಆರ್ಥಿಕವನ್ನು ಉದಾರೀಕರಿಸುತ್ತ ಸಾಮ್ರಾಜ್ಯಶಾಹಿಗಳಿಗೆ ದೇಶವನ್ನೇ ನುಂಗಿ ನೀರು ಕುಡಿಯಲು ಅನುವು ಮಾಡಿಕೊಟ್ಟಿದೆ. ಈಗ ನಾವು ಪಡೆದಿರುವ ಸಾಲಗಳ ಮರುಪಾವತಿ ಮಾಡಬೇಕು. ಜೊತೆಗೇ ನಮ್ಮ ವಿದೇಶೀ ವ್ಯಾಪಾರವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಇದಕ್ಕೆ ವಿದೇಶೀ ವಿನಿಮಯದ ಕೊರತೆ ಇರಬಾರದು.

ಸರ್ಕಾರ ಅದನ್ನು ಸಾಧಿಸಲೆಂದೇ ಈ ರಫ್ತು ಮಂತ್ರ ಜಪಿಸುತ್ತಿದೆ. ರಫ್ತು ಮಾಡುವವರಿಗೆ ವಿಶೇಷ ಸವಲತ್ತುಗಳು ಅದು ಆಗಲೇ ಘೋಷಿಸಿದೆ. ಆದರೆ ಈಗ ಅದರ ಜೊತೆಗೇ ಕೇಂದ್ರ ಸರ್ಕಾರ ರಾಜ್ಯಸರ್ಕಾರಗಳಿಗೆ ಬೆದರಿಕೆಯನ್ನು ಹಾಕುತ್ತಿದೆ. 'ರಫ್ತು ಉದ್ದೇಶಿತ ಉದ್ಯಮಗಳಿಗೆ ನೆರವು ನೀಡಿ ಇಲ್ಲವಾದರೆ ನಿಮಗೆ ಕೇಂದ್ರ ಸರ್ಕಾರದ ನೆರವು ಇರದು' ಎಂದು.

ಆದರೆ ರಫ್ತಿಗೆ ಬೇಕಾಗುವ ತಂತ್ರಜ್ಞಾನ ಮತ್ತು ಸೌಲಭ್ಯಗಳೇ ಇಲ್ಲದೆ ನಮ್ಮ ಘಟಕಗಳು ಹೇಗೆ ರಫ್ತು ಮಾಡಿಯಾವು? ಆದರೆ ಕೇಂದ್ರ ಸರ್ಕಾರ ತನ್ನ ಗುಲಾಮಿಕೆಯಲ್ಲಿ ಈ ವಿವೇಚನೆಯನ್ನು ಕಳೆದುಕೊಂಡಿದೆ.

ಕೇಂದ್ರ ಸರ್ಕಾರದ ಈ ರಫ್ತು ಮಂತ್ರಕ್ಕೆ ಮಾವಿನಕಾಯಿ ಉದುರದು ಅಲ್ಲವೆ?

ಬ್ಯಾಂಕ್ ಶಾಖೆಗಳ ಮುಚ್ಚುವಿಕೆ

ಇದು ದಿನ ನಿತ್ಯದ ಸುದ್ದಿಯಾಗಿಬಿಟ್ಟಿದೆ. ಭಾರತದಾದ್ಯಂತ ನಾಲ್ಕು ಸಾವಿರ ನಷ್ಟ ಅನುಭವಿಸುವ ಬ್ಯಾಂಕ್ ಶಾಖೆಗಳನ್ನು ಮುಚ್ಚಲಾಗುವುದೆಂಬ ಸುದ್ದಿ ಆಗಲೇ ದಿನ ಪತ್ರಿಕೆಗಳಲ್ಲಿ ಬಂದಿದೆ. ಇದಲ್ಲದೆ ಪ್ರತಿ ಬ್ಯಾಂಕಿನಲ್ಲಿ ಹಾನಿ ತೋರುತ್ತಿರುವ ಶಾಖೆಗಳ ಸಂಖ್ಯೆ ಇತ್ಯಾದಿಗಳು ಬರುತ್ತಲೇ ಇವೆ.

ಉದಾರೀಕರಣದ ಕತ್ತಿ ಈಗ ಹಣಕಾಸು ವಲಯದ ಮೇಲೆ ಪ್ರಹಾರ ನಡೆಸುತ್ತಿದೆಯೆಂಬುದು ಸ್ಪಷ್ಟ. ಆದರೆ ಈ ಶಾಖೆಗಳ ನೌಕರರ ಪರಿಸ್ಥಿತಿಯೇನು ಆಯಾ ಪ್ರದೇಶಗಳ ಜನತೆಯ ತೊಂದರೆಗಳ ಬಗೆಗೆ ಯಾವ ಯೋಚನೆಗಳೂ ಬರುವಂತೆ ಕಾಣುತ್ತಿಲ್ಲ. ಇವರ ಭವಿಷ್ಯವೇನು.

ಶೇರು ಹಗರಣ

ಜಂಟಿ ಸಂಸದೀಯ ಸಮಿತಿ ಲೋಕಸಭೆಯಲ್ಲಿ ತನ್ನ ವರದಿಯನ್ನು ಈ ತಿಂಗಳಿನಲ್ಲೇ ಮಂಡಿಸಲಿದೆಯಂತೆ. ವರದಿಯ ಕರಡು ತಯಾರಾಗಿದ್ದು ಸಮಿತಿಯಲ್ಲಿ ಸರ್ಕಾರದ ಪರ/ವಿರೋಧವೆಂಬ ಎರಡು ವಿಭಾಗಗಳು ಕಂಡು ಬಂದಿವೆಯಾದ್ದರಿಂದ ಕರಡಿನ ಮೇಲೆ ಒಮ್ಮತ ಸಾಧ್ಯವಿಲ್ಲದಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಕರಡಿನ ವಿವಿಧ ಭಾಗಗಳ ಬಗೆಗೆ ಮತಗಣನೆ ಮಾಡಿ ತೀರ್ಮಾನ ಕೈಗೊಳ್ಳಲಾಗುತ್ತದಂತೆ.

ಕಾಂಗ್ರೆಸ್ಸಿನ ಸಂಸದರು ಸರ್ಕಾರ ಅದರಲ್ಲೂ ಹೆಚ್ಚಾಗಿ ಮನಮೋಹನಸಿಂಗರ ಮೇಲಿರುವ ಟೀಕೆಯನ್ನು ತೆಗೆದು ಹಾಕುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದರೆಂದು ತಿಳಿದು ಬಂದಿದೆ.

ಹೊಸ ಸದಸ್ಯರ ಸೇರ್ಪಡೆ

ರಾಜ್ಯ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ ಯಶವಂತಸಿನ್ಹಾರ ಬದಲಿಗೆ ಜನತಾದಳ (ಎಸ್.) ನ ದಿಗ್ವಿಜಯ ಸಿಂಗ್‌ರನ್ನು ನೇಮಕ ಮಾಡಿಕೊಳ್ಳಲಾಗಿದೆ.



ಹರ್ಯಾಣ ಸರ್ಕಾರಿ ನೌಕರರ ಮೇಲೆ ಪೋಲೀಸರ ಅತ್ಯಾಚಾರ ಸಿಐಟಿಯು ಖಂಡನೆ

ಹರ್ಯಾಣದಲ್ಲಿ ಮುಷ್ಕರದಲ್ಲಿ ತೊಡಗಿರುವ ರಾಜ್ಯ ಸರಕಾರಿ ನೌಕರರ ಪೈಕಿ ಸಾವಿರಾರು ಜನರನ್ನು ಅಲ್ಲಿನ ಸರಕಾರ ಸೇವೆಯಿಂದಲೇ ವಜಾ ಮಾಡಿದೆ.

ಪಂಜಾಬ್ ರಾಜ್ಯ ಸರಕಾರಿ ನೌಕರರಿಗೆ ಸಮಾನವಾದ ವೇತನವನ್ನು ಕೊಡಬೇಕೆಂಬುದು ಹರ್ಯಾಣ ನೌಕರರ ಪ್ರಮುಖ ಬೇಡಿಕೆ. ಈ ಕೇಳಿಕೆಯನ್ನು ಮುಂದಿಟ್ಟುಕೊಂಡು ಅವರು ಚಳುವಳಿ ಆರಂಭಿಸಿದ್ದಾರೆ.

ಹರ್ಯಾಣದ ಕಾಂಗ್ರೆ ಸರಕಾರದ ಕ್ರಮ ಸಂಘಟನೆ ಹಾಗೂ ಹೋರಾಟದ ಹಕ್ಕಿನ ನಿರಾಕರಣೆಯಾಗಿದೆ. ಇದು ಖಂಡನಾರ್ಹ ಹಾಗೂ ಸರ್ವಾಧಿಕಾರಿ ನಡೆಯಾಗಿದೆ.

ಹರ್ಯಾಣ ನೌಕರರ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ಸೆಪ್ಟೆಂಬರ್ ತಿಂಗಳಲ್ಲಿ ಚಳುವಳಿ ನಡೆದಿತ್ತು. ಸರಕಾರ ಅದನ್ನು ಉಪೇಕ್ಷಿಸಿದುದರಿಂದಾಗಿ ನವೆಂಬರ್ 23 ರಿಂದ ಅಲ್ಲಿಯ ಸರ್ಕಾರಿ ನೌಕರರು ತಮ್ಮ ಮನೆಯಿಂದ ಕೆಲಸದ ಜಾಗಗಳಿಗೆ ಹೋಗದಂತೆ ಬಲವಂತದಿಂದ ತಡೆಯಲು, ಭಿವಾನಿ, ದಾದ್ರಿ, ಹೌಸಿ ಮುಂತಾದ ಕಡೆ ನೌಕರರನ್ನು, ಅವರ ಮುಖಂಡರನ್ನು ಬಲವಂತದಿಂದ ರೈಲಿನಿಂದ ಇಳಿಸಲಾಯಿತು. ಈ ರೈಲು ನಿಲ್ದಾಣಗಳು ಪೋಲೀಸು ಡೇರೆಗಳಾಗಿ ಬಿಟ್ಟವು. ವಿವಿಧ ರೈಲ್ವೇ ಸ್ಟೇಶನುಗಳಲ್ಲಿ ನವೆಂಬರ್ 23 ರಂದು ಒಟ್ಟು 5000 ನೌಕರರನ್ನು ಬಂಧಿಸಲಾಯಿತು. ಸರ್ಕಾರಿ ನೌಕರರ ಹಿರಿಯ ಮುಖಂಡರನ್ನೆಲ್ಲಾ ಎಫ್.ಎಸ್.ಎಮ್.ಎ. ಕಾಯ್ದೆಯಡಿ ಬಂಧಿಸಿ ಕೇಸು ಹಾಕಲಾಗಿದೆ.

ಈ ದಮನ ಚಕ್ರವನ್ನು ಎದುರಿಸಿ ಹೋರಾಡುತ್ತಿರುವ ಹರ್ಯಾಣಾ ಸರ್ಕಾರಿ ನೌಕರರನ್ನು ಸಿಐಟಿಯು ಅಭಿನಂದಿಸಿದೆ. ಹರ್ಯಾಣಾ ಸರ್ಕಾರದ ಇಂತಹ ದಮನ ಕ್ರಮಗಳನ್ನು ಬಲವಾಗಿ ಖಂಡಿಸುತ್ತಾ ತಕ್ಷಣ ಹರ್ಯಾಣಾ ಸರ್ಕಾರ ಎಲ್ಲಾ ಯೂನಿಯನ್ ಮುಖಂಡರನ್ನೂ ಬಿಡುಗಡೆ ಮಾಡಿ ನೌಕರರ ಬೇಡಿಕೆಗಳ ಮೇಲೆ ಮಾತುಕತೆ ನಡೆಸಬೇಕು ಎಂದು ಒತ್ತಾಯಿಸಿದೆ. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ತನ್ನ ನೌಕರರ ಮೇಲೆ ಹರ್ಯಾಣ ಸರ್ಕಾರದ ಹುಚ್ಚು ವರ್ತನೆಗಳಿಗೆ ಕಡಿವಾಣ ಹಾಕಬೇಕೆಂದು ಸಿಐಟಿಯು ಆಗ್ರಹಪಡಿಸಿದೆ.

ದೂರದರ್ಶನ ಪಕ್ಷಪಾತಕ್ಕೆ ಪ್ರತಿಭಟನೆ

ದೂರದರ್ಶನ ಸುದ್ದಿ ಪ್ರಸಾರದಲ್ಲಿ ಪಕ್ಷಪಾತ ತೋರುತ್ತಿದೆ ಎಂದು ಬಿಹಾರ ಜನತಾದಳ ಆರೋಪಿಸಿದೆ. ಎಲೆಕ್ಟ್ರಾನಿಕ್ ಮಾಧ್ಯಮದ ಈ ನಿಲುವನ್ನು ಪ್ರತಿಭಟಿಸಿ ಅದರ ಕಾರ್ಯಕರ್ತರು ಡಿಸೆಂಬರ್ ಎರಡರಂದು ಪಾಟ್ನಾ ದೂರದರ್ಶನ ಕೇಂದ್ರದ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಅಲ್ಲದೆ ಕೇಂದ್ರದೊಳಗೆ ನುಗ್ಗಿ ಹಾನಿ ಮಾಡಿದರು ಎಂದು ವರದಿಗಳು ತಿಳಿಸಿವೆ.

ದಳ ಕಾರ್ಯಕರ್ತರ ದಾಂಧಲೆ ನಡೆಸುತ್ತಿದ್ದರೂ ಪೋಲೀಸರು ಸುಮ್ಮನೆ ನಿಂತು ನೋಡುತ್ತಿದ್ದರು ಎಂದು ದೂರದರ್ಶನ ಕೇಂದ್ರ ನಿರ್ದೇಶಕರು ಆಪಾದಿಸಿದ್ದಾರೆ.

ಕಾಂಗ್ರೆ ಚಳುವಳಿ: ಈ ಮಧ್ಯೆ ಬಿಹಾರದ ಜನತಾದಳ ಸರಕಾರ ದುರಾಡಳಿತ ನಡೆಸುತ್ತಿದೆ ಎಂದು ಆಪಾದಿಸಿರುವ ಕಾಂಗ್ರೆಸ್ (ಐ), ಲಾಲೂ ಪ್ರಸಾದ್ ನೇತೃತ್ವದ ಸರಕಾರದ ಉಚ್ಚಾಟನೆಗಾಗಿ ಚಳುವಳಿ ಆರಂಭಿಸಿದೆ.

ಅದರ ಅಂಗವಾಗಿ ಡಿಸೆಂಬರ್ 3 ರಂದು ಕಾಂಗ್ರೆ ಕಾರ್ಯಕರ್ತರು ರಾಜ್ಯದಾದ್ಯಂತ ಜೈಲ್ ಭರೋ ಚಳುವಳಿ ನಡೆಸಿದರು.

ಸರಕಾರಿ ನೌಕರರ ನಿವೃತ್ತಿ ವಯಸ್ಸು ಏರಿಕೆಗೆ ವಿರೋಧ

ರಾಜ್ಯ ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಏರಿಸುವ ಯಾವುದೇ ಪ್ರಯತ್ನವನ್ನು ತಾನು ದೃಢವಾಗಿ ವಿರೋಧಿಸುವುದಾಗಿ ಡಿ.ವೈ.ಎಫ್.ಐ ಕೇರಳ ರಾಜ್ಯ ಸಮಿತಿ ಹೇಳಿದೆ.

ರಾಜ್ಯ ಸರಕಾರ, ಸ್ಥಳೀಯ ಸಂಸ್ಥೆಗಳು, ಮಂಡಳಿಗಳು ಮೊದಲಾದವುಗಳ ನೌಕರರ ಹಾಲಿ ನಿವೃತ್ತಿ ವಯಸ್ಸು 55. ನೌಕರರ ನಿವೃತ್ತಿ ಸೌಲಭ್ಯಗಳನ್ನು ಮೂರು ವರ್ಷ ಮುಂದಕ್ಕೆ ಹಾಕುವ ಸಲುವಾಗಿ ನಿವೃತ್ತಿ ವಯಸ್ಸನ್ನು 58 ಕ್ಕೆ ಏರಿಸುವ ಒತ್ತಡಕ್ಕೆ ಸರಕಾರ ಒಳಗಾಗಿದೆ. ಆ ನಿಟ್ಟಿನಲ್ಲಿ ಯೋಚಿಸುತ್ತಿದೆ ಕೂಡ.

ರಾಜ್ಯ ಲೋಕಸೇವಾ ಆಯೋಗ (ಪಿ.ಎಸ್.ಸಿ.) ಮತ್ತು ಇತರ ಸಂಸ್ಥೆಗಳ ಮೂಲಕ ನೇಮಕ ಮಾಡಿಕೊಳ್ಳುವ ಪ್ರಮಾಣ ಈಗಾಗಲೇ ವರ್ಷವೊಂದಕ್ಕೆ 25 ಸಾವಿರದಿಂದ 10 ಸಾವಿರಕ್ಕೆ ಇಳಿದಿದೆ. ಉದ್ಯೋಗ ಸೃಷ್ಟಿಗೆ 1,000 ಕೋಟಿ ರೂ. ಯೋಜನೆಯನ್ನು ಜಾರಿಗೊಳಿಸುವುದಾಗಿ ಸರಕಾರ ನೀಡಿದ್ದ ಚುನಾವಣಾ ಆಶ್ವಾಸನೆ ಇನ್ನೂ ಕಾರ್ಯಗತಗೊಂಡಿಲ್ಲ. ಇಂಥ ಸನ್ನಿವೇಶದಲ್ಲಿ, ನಿರುದ್ಯೋಗಿ ಯುವಜನರಿಗೆ ಉದ್ಯೋಗ ಸಿಗುವ ಉಳಿದಿರುವ ಒಂದೇ ಒಂದು ಮಾರ್ಗವನ್ನು ಪೂರ್ಣವಾಗಿ ಮುಚ್ಚುವ ಕ್ರಮವನ್ನು (ಅಂದರೆ ನಿವೃತ್ತಿ ವಯೋಮಿತಿಯ ಏರಿಕೆ) ತಾನು ವಿರೋಧಿಸಿ ವಿಫಲಗೊಳಿಸುವುದಾಗಿ ಡಿ.ವೈ.ಎಫ್.ಐ ಘೋಷಿಸಿದೆ.

ಸಿಕ್ಕಿಂನಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ದಮನ

ಸಿಪಿಐ(ಎಂ) ನಿಯೋಗವೊಂದು ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ನೇತೃತ್ವದಲ್ಲಿ ನವೆಂಬರ್ 27ರಂದು ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾರನ್ನು ಭೇಟಿಯಾಗಿತ್ತು. ಸಿಕ್ಕಿಂನಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ದಮನವಾಗುತ್ತಿರುವುದರತ್ತ ಗಮನ ಸೆಳೆಯುವುದು ಇದರ ಉದ್ದೇಶವಾಗಿತ್ತು. ರಾಜ್ಯದ ಪ್ರಗತಿಗಾಗಿ ಆಗಬೇಕಾದ ಕೆಲಸ ಕಾರ್ಯಗಳನ್ನು ಪಟ್ಟಿ ಮಾಡಿದ ಒಂದು ಮನವಿ ಪತ್ರವನ್ನು ಕೂಡಾ ರಾಷ್ಟ್ರಪತಿಯವರಿಗೆ ಅರ್ಪಿಸಲಾಯಿತು.

ಈಶಾನ್ಯದಲ್ಲಿರುವ ಈ ಪುಟ್ಟ ರಾಜ್ಯದಲ್ಲಿ ಪರಿಮಿತ ಪ್ರದೇಶ ಪರವಾನಗಿಯ ಹೆಸರಿನಲ್ಲಿ ಜನರ ಸಾಮಾಜಿಕ-ರಾಜಕೀಯ ಹಕ್ಕುಗಳನ್ನು ತುಳಿಯಲಾಗುತ್ತಿದೆ ಎಂದು ನಿಯೋಗ ಹೇಳಿತು. ಈ ಎಲ್ಲಾ ಹಕ್ಕುಗಳನ್ನು ಮರಳಿ ಕೊಡಬೇಕೆಂದು ಒತ್ತಾಯಿಸಿದ ನಿಯೋಗ, ವಿಶೇಷವಾಗಿ ಮತದಾರರ ಪಟ್ಟಿಯಿಂದ ತಪ್ಪಿ ಹೋಗಿರುವ ನೇಪಾಳಿ ಮಾತನಾಡುವ ಜನರ ಸಹಿತ, ಭಾರತೀಯ ಪ್ರಜೆಗಳ ಹೆಸರನ್ನು ಪಟ್ಟಿಮಾಡುವಂತೆ ಕೇಂದ್ರ ಸರಕಾರವನ್ನು ಆಗ್ರಹಪಡಿಸಿದೆ.

ನಿಯೋಗದ ವಿವರಣೆಯನ್ನು ಡಾ. ಶರ್ಮ ತಾಳ್ಮೆಯಿಂದ ಕೇಳಿದರು. ನಿಯೋಗದ ಅಭಿಪ್ರಾಯವನ್ನು ಕೇಂದ್ರ ಸರಕಾರಕ್ಕೆ ತಿಳಿಸುವುದಾಗಿ ಆಸ್ವಾಸನೆ ನೀಡಿದರು.

ಭಂಡಾರಿ ಪ್ರಕರಣ: ತ್ರಿಪುರಾ ಕಾಂಗ್ರೆಸ್‌ನಲ್ಲಿ ಭಾರೀ ಒಡಕು

ತ್ರಿಪುರಾ ರಾಜ್ಯಪಾಲ ರಮೇಶ್ ಭಂಡಾರಿ ಇಕ್ಕಟ್ಟಿಗೆ ಸಿಲುಕಿದ್ದಾರೆ. ಅವರನ್ನು ರಾಜ್ಯಪಾಲ ಹುದ್ದೆಯಿಂದ ತೆಗೆದು ಹಾಕಬೇಕೆಂದು ಒತ್ತಾಯಿಸಿ ಎಡರಂಗ ಚಳುವಳಿ ನಡೆಸುತ್ತಿದೆ.

ಭಂಡಾರಿಯವರಿಗೆ ಬೆಂಬಲವನ್ನು ಕ್ರೋಢಿಕರಿಸುವ ವಿಚಾರದಲ್ಲಿ ಕಾಂಗ್ರೆ ಪಕ್ಷದಲ್ಲಿ ಒಡಕು ಉಂಟಾಗಿದೆ. ಪ್ರಕರಣ ನಾಟಕೀಯ ತಿರುವನ್ನೇ ಪಡೆದಿದೆ. ಅದಕ್ಕೆ ಕಾರಣವಾದ ವಿವರ ಹೀಗಿದೆ.

ರಮೇಶ್ ಭಂಡಾರಿಯವರಿಗೆ ಬಲ ಸೂಚಿಸಲು ನವೆಂಬರ್ 30 ರಂದು ಅಗರ್ತಲಾದಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸುವ ಕಾಂಗ್ರೆ-ಟಿ.ಯು.ಜೆ.ಎಸ್. ಕಾರ್ಯಕ್ರಮವನ್ನು ರದ್ದುಪಡಿಸಿತು.

ಆ ದಿನ ತ್ರಿಪುರಾ ಪ್ರದೇಶ ಕಾಂಗ್ರೆ ಅಧ್ಯಕ್ಷ ರಾಧಿಕಾ ರಂಜನ್ ಗುಪ್ತಾ (ಕಾಂಗ್ರೆಸ), ಮಾಜಿ ಮುಖ್ಯಮಂತ್ರಿ ಸಮಿರ್ ರಂಜನ್ ಬರ್ಮನ್ ವಿರುದ್ಧ ಪೋಲೀಸರಿಗೆ ಒಂದು ದೂರನ್ನು ಸಲ್ಲಿಸಿದರು. ಭಂಡಾರಿಗೆ ಬೆಂಬಲ ಸೂಚಿಸುವ ಸಭೆಯನ್ನು ತಾನು (ಗುಪ್ತಾ) ರದ್ದು ಪಡಿಸಿದ್ದರಿಂದ ತನ್ನನ್ನು ಹಾಗೂ ತನ್ನ ಕುಟುಂಬದವರನ್ನು ಕೊಲ್ಲುವುದಾಗಿ ಬರ್ಮನ್ ಬೆದರಿಕೆ ಹಾಕಿದ್ದಾರೆ ಎಂಬುದು ಗುಪ್ತಾ ಸಲ್ಲಿಸಿದ ದೂರಿನ ಸಾರಾಂಶ.

ಬರ್ಮನ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಗುಪ್ತಾ ಪ್ರಕಟಿಸಿದ್ದಾರೆ. ಘಟನೆಯ ಬಗ್ಗೆ ಈಗಾಗಲೇ ಹೈಕಮಾಂಡಿಗೆ ವಿವರಣೆ ನೀಡಿದ್ದಾರೆ.

ಈ ಮಧ್ಯೆ ಗುಪ್ತಾರ ಭದ್ರತಾ ವ್ಯವಸ್ಥೆಯನ್ನು ರಾಜ್ಯ ಪೋಲೀಸರು ಬಿಗಿಗೊಳಿಸಿದ್ದಾರೆ. ಕೊಲೆ ಬೆದರಿಕೆ ಬಗ್ಗೆ ತನಿಖೆಯನ್ನು ಆರಂಭಿಸಿದ್ದಾರೆ.

ಪಂಚಾಯತ್ ರಾಜ್: ಕೇರಳ ಸರಕಾರದ ಅಪ್ರಾಮಾಣಿಕತೆ

ಕೇರಳದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಲುವಲ್ಲಿ ಯು.ಡಿ.ಎಫ್. ಸರಕಾರಕ್ಕೆ ಪ್ರಾಮಾಣಿಕ ಕಾಳಜಿ ಇಲ್ಲವೆ?

'ಇಲ್ಲ'- ಈ ಉತ್ತರ ನೀಡಿದವರು ರಾಜ್ಯ ವಿಧಾನಸಭೆಯ ಪ್ರತಿಪಕ್ಷದ ನಾಯಕ ವಿ. ಎಸ್. ಅಚ್ಯುತಾನಂದನ್.

ಪಂಚಾಯತ್ ರಾಜ್ ವಿಚಾರದಲ್ಲಿ ರಾಜ್ಯ ಸರಕಾರ ಯಾವುದೇ ನಿರ್ದಿಷ್ಟ ನಿರ್ಧಾರವನ್ನು ಕೈಗೊಳ್ಳುತ್ತಿಲ್ಲ. ಅಗತ್ಯ ಕಾನೂನನ್ನು ಅಂಗೀಕರಿಸಲಿಕ್ಕಾಗಿ ವಿಧಾನಸಭೆ ಅದಿವೇಶನವನ್ನು ಕರೆಯುವ ಬಗ್ಗೆಯೇ ಅದು ಇನ್ನೂ ಸ್ಪಷ್ಟ ನಿರ್ಧಾರ ತಳೆದಿಲ್ಲ. ಚುನಾವಣಾ ಆಯೋಗವೊಂದನ್ನು ನೇಮಿಸುವ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಿದ್ದರೂ ಆಯೋಗವನ್ನು ನೇಮಿಸಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯ ಜಾರಿ ಮತ್ತು ತತ್ಪರಿಣಾಮವಾಗಿ ಜಿಲ್ಲೆ ಮತ್ತು ಪಂಚಾಯತ್ ಮಟ್ಟದಲ್ಲಿ ಚುನಾಯಿತ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ ಮಾಡುವಲ್ಲಿ ಯು.ಡಿ.ಎಫ್. ಸರಕಾರಕ್ಕೆ ಕಾಳಜಿ ಇಲ್ಲ ಎಂಬುದನ್ನು ತೋರಿಸುತ್ತದೆ ಎಂದು ಹೇಳಿಕೆಯೊಂದರಲ್ಲಿ ಅಚ್ಯುತಾನಂದನ್ ಅಭಿಪ್ರಾಯ ಪಟ್ಟಿದ್ದಾರೆ.

ಬೌದ್ಧ ಧರ್ಮ ಸೇರಿದ ಸಾವಿರಾರು ದಲಿತರು

ಡಿಸೆಂಬರ್ ಆರರಂದು ಬಿಹಾರ ರಾಜಧಾನಿ ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ಒಂದು ಕಾರ್ಯಕ್ರಮ ನಡೆಯಿತು. ಜಾತೀಯತೆಯಿಂದ ಕೂಡಿದ ಹಿಂದೂ ಧರ್ಮದಲ್ಲಿನ ಸಾಮಾಜಿಕ ದಾಸ್ಯದಿಂದ ವಿಮೋಚನೆ ಹೊಂದಲಿಕ್ಕಾಗಿ ಅನೇಕ ಕೆಳಜಾತಿಗಳ ಸಾವಿರಾರು ಜನರು ಬೌದ್ಧ ಧರ್ಮವನ್ನು ಅಲ್ಲಿ ಸ್ವೀಕರಿಸಿದರು.

ಅಂದು ಬೌದ್ಧಧರ್ಮವನ್ನು ಸ್ವೀಕರಿಸಿದ 25 ಸಾವಿರಕ್ಕೂ ಹೆಚ್ಚು ಜನರಲ್ಲಿ ಬಹುತೇಕ ಮಂದಿ ದುರ್ಬಲ ವರ್ಗಗಳಿಗೆ ಸೇರಿದವರು ಎಂದು ಸಂಘಟಕರು ಹೇಳಿದ್ದಾರೆ.

ಪಾಟ್ನಾದಲ್ಲಿ ನಿಷೇಧಾಜ್ಞೆಯನ್ನು ಹೇರಲಾಗಿತ್ತು. ಅದನ್ನು ಉಲ್ಲಂಘಿಸಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನರು ಮತಾಂತರ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಒಂದು ವೇಳೆ ನಿಷೇಧಾಜ್ಞೆ ಅಲ್ಲದಿದ್ದರೆ ಇನ್ನೂ ತುಂಬಾ ಜನರು ಬರುತ್ತಿದ್ದರು ಎಂದು ಕಾರ್ಯಕ್ರಮ ಸಂಘಟನಾ ಸಮಿತಿಯ ಕಾರ್ಯದರ್ಶಿ ಹೇಳಿದ್ದಾರೆ.

ಕೇಂದ್ರದ ಮಾಜಿ ಸಚಿವೆ ತಾರಕೇಶ್ವರಿ ಸಿನ್ಹ, ರಾಜ್ಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಮೈಕುರಾಮ್, ಜನತಾದಳ ಶಾಸಕ ಶ್ರೀ ಭಗವಾನ್ ಸಿಂಗ್ ಮೊದಲಾದವರು ಬುದ್ಧಧರ್ಮ ಸ್ವೀಕರಿಸಿದ ಪ್ರಮುಖರಲ್ಲಿ ಸೇರಿದ್ದಾರೆ. ಕರ್ನಾಟಕದಿಂದ 'ದಲಿತ ವಾಯ್ಸ್' ಪತ್ರಿಕೆಯ ಸಂಪಾದಕ ವಿ.ಟಿ. ರಾಜಶೇಖರ ಇನ್ನೊಬ್ಬ ಪ್ರಮುಖರು.

ವರದಕ್ಷಿಣೆಗಾಗಿ ಕೊಲೆ ಜೆ.ಎಂ.ಎಸ್. ಖಂಡನೆ

ಗಂಗಾವತಿ: ನಗರದಲ್ಲಿ ನವೆಂಬರ್ 20 ರಂದು ಸಂಗೀತಾ ಎಂಬ ಮಹಿಳೆಯನ್ನು ವರದಕ್ಷಿಣೆಗಾಗಿ ಕೊಲೆ ಮಾಡಿರುವುದನ್ನು ಜನವಾದಿ ಮಹಿಳಾ ಸಂಘಟನೆಯ ತಾಲೂಕು ಸಮಿತಿಯು ಖಂಡಿಸಿದೆ. ಕೊಲೆಯಾದ ಮಹಿಳೆಯ ಅತ್ತೆ, ಮಾವ, ಪತಿ ಹೀಗೆ ಕುಟುಂಬದವರೆಲ್ಲರೂ ಒಟ್ಟುಸೇರಿ ಈ ಹೇಯ ಕೃತ್ಯವನ್ನು ನಡೆಸಿರುವುದು ನಿಜಕ್ಕೂ ಖಂಡನೀಯ ಎಂದು ಸಂಘಟನೆಯು ಹೇಳಿದೆ.

ಸಿಂಧನೂರಿನ ಔಷಧಿ ವ್ಯಾಪಾರಿ ಧನರಾಜ್ ಮಗಳಾದ ಸಂಗೀತಾರನ್ನು ಗಂಗಾವತಿಯ ರಸಗೊಬ್ಬರ ವ್ಯಾಪಾರಿಯಾದ ಉತ್ತಮಚಂದ್‌ರ ಮಗ ಜೈಸಿಕುಮಾರನ ಜೊತೆಯಲ್ಲಿ ಜುಲೈ 7, 90 ರಂದು ಮದುವೆ ಮಾಡಲಾಗಿತ್ತು. ಮದು[illegible]ಯ ಸಮದಲ್ಲಿ 'ವರಪಚಾರ' ನಡೆದಿ[illegible] ಹೆಚ್ಚಿಗೆ ಹಣ ತರುವಂತೆ ಒತ್ತಾಯಿ[illegible]ಾಗುತ್ತಿತ್ತು. ಕೊಲೆಯಾದ ಸಂಗೀತಾಗೆ ಎರಡು ವರ್ಷದ ಹೆಣ್ಣುಮಗುವಿದೆ.

[illegible]ಂಗೀತಾಳ ಕೊಲೆಯನ್ನು ಪ್ರತಿಭ[illegible] ಡಿಸೆಂಬರ್ ಒಂದರಂದು ಬೆಳಿಗ್ಗೆ [illegible] ಕೊಲೆಯಾ[illegible]ದಿಂದ ಪ್ರತಿಭ[illegible] [illegible]ಡಿಸಿ, ಈ ಸಂಬಂಧ [illegible] ಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಪಡಿಸಿದೆ.

ಅಸಂಘಟಿತ ಕಾರ್ಮಿಕರ ಧರಣಿ ಸತ್ಯಾಗ್ರಹ

ಮಂಗಳೂರು : ಅಸಂಘಟಿತ ಕ್ಷೇತ್ರದಲ್ಲಿ ಬರುವ ಬೀಡಿ, ಹೆಂಚು, ಗೇರುಬೀಜ, ಮುದ್ರಣ, ಸಾರಿಗೆ, ಇಂಜಿನಿಯರಿಂಗ್, ಫೌಂಡ್ರಿ, ಅಗರ್‌ಬತ್ತಿ, ತೋಟ, ಕಾಫಿ, ಕ್ಯೂರಿಂಗ್ ಮಾಡುವ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ದಿನಕ್ಕೆ ರೂ. 50.00 ಕ್ಕೆ ಕಡಿಮೆಯಾಗದಂತೆ ಕನಿಷ್ಠ ವೇತನವನ್ನು ಪ್ರಕಟಿಸಬೇಕೆಂದು ಒತ್ತಾಯಿಸಲು ಸಿಐಟಿಯು ರಾಜ್ಯ ಸಮಿತಿಯ ಕರೆಯ ಮೇರೆಗೆ 1993 ನವೆಂಬರ್ 22 ರಿಂದ 25 ರ ತನಕ ರಾಜ್ಯದಾದ್ಯಂತ ಹೋರಾಟ ನಡೆಯಿತು ನವೆಂಬರ್ 25, 1993 ರಂದು ಸಿಐಟಿಯು ನೇತೃತ್ವದಲ್ಲಿ ನೂರಾರು ಕಾರ್ಮಿಕರು ದ.ಕ. ಜಿಲ್ಲಾಧಿಕಾರಿಯವರ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿಯ ಪುನರ್ ವಿಮರ್ಶೆ, ಕಾರ್ಮಿಕ ಕಲ್ಯಾಣ ಯೋಜನೆಗಳ ಜ್ಯಾರಿ, ಬಾಲ ಕಾರ್ಮಿಕರ ಶೋಷಣೆ ತಡೆ, ಕಂಟ್ರಾಕ್ಟ್ ಕಾರ್ಮಿಕರನ್ನು ಖಾಯಂ[illegible]ಳಿಸಲು, ಸಮಾನ ಕೆಲಸಕ್ಕೆ ಸಮಾನ [illegible] ಇವೇ ಮೊದಲಾದ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ನಡೆಸಿತು. ಕೊನೆಗೆ ಮನವಿಯನ್ನು ದ.ಕ. ಜಿಲ್ಲಾಧಿಕಾರಿಯವರಿಗೆ ನೀಡಲಾಯಿತು.

ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ. ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಮೂಸಬ್ಬನವರು ಸರಕಾರ ಕೂಡಲೇ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದಿದ್ದರೆ ಉಗ್ರ ಹೋರಾಟಕ್ಕೆ ತಯಾರಾಗುವಂತೆ ಕರೆ ನೀಡಿದರು.

ಸುದ್ದಿಗಳು

ಧಾರವಾಡ: ಸಿಐಟಿಯು ಧಾರವಾಡ ಜಿಲ್ಲಾ ಸಮಿತಿಯು ಇಂದು ಒಂದು ದಿನದ ಸಾಮೂಹಿಕ ಧರಣಿ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳ ಕಛೇರಿ ಎದುರಿಗೆ ನಡೆಸಿತು. ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯು ಅಸಂಘಟಿತ ವಲಯದ ಕಾರ್ಮಿಕರಿಗೆ ಕನಿಷ್ಠ ವೇತನ ರೂ. 1800 ಸಿಗಲೇಬೇಕು ಎಂಬ ಬೇಡಿಕೆಯೊಂದಿಗೆ ನವೆಂಬರ್ 22 ರಿಂದ ವಿಧಾನಸೌಧದ ಎದುರು ನಡೆಸಿರುವ ಅನಿರ್ದಿಷ್ಟ ಅವಧಿಯ ಸಾಮೂಹಿಕ ಧರಣಿ ಕಾರ್ಯಕ್ರಮಕ್ಕೆ ಬೆಂಬಲಾರ್ಥವಾಗಿ ಈ ಸಾಮೂಹಿಕ ಧರಣಿಯನ್ನು ಹಮ್ಮಿಕೊಂಡಿದೆ. ಅದರೊಂದಿಗೆ ಸ್ಥಳೀಯ ಸಮಸ್ಯೆಗಳಾದ ಸ್ಪಿವನ್ ಕಾರ್ಖಾನೆ, ಪ್ರೈವುಡ್ ಕಾರ್ಖಾನೆ, ಕೈಮಗ್ಗ ನೇಕಾರರ ಇತರ ಸಮಸ್ಯೆಗಳು, ಭಾರತ ಅಬ್ಯುದಯ. ಸೇವಾಸಂಸ್ಥೆ (ಅ) (ಐ.ಡಿ.ಎಸ್.)ದಲ್ಲಿ ಉದ್ಭವಿಸಿರುವ ನೌಕರರ ವಿವಾದಗಳ ಬಗ್ಗೆ ಮತ್ತೊಂದು ಮನವಿ ಕೊಡಲಾಯ್ತು. ಹುಬ್ಬಳ್ಳಿಯ ಬೀಡಿ, ಆಯಿಲ್ ಮಿಲ್, ದೀಪಕ್ ಪ್ಲಾಸ್ಟಿಕ್, ಫೆರೋ ಕಂಪನಿಯ ಕಾರ್ಮಿಕರು ಹಾಗೂ ಧಾರವಾಡದ ಬೀಡಿ ಪ್ಲೈವುಡ್, ಟ್ರೈವಾಕ್, ಸ್ಪಿವನ್ ಕಂಪನಿಯ ಕಾರ್ಮಿಕರು ಧರಣಿಯಲ್ಲಿ ಪಾಲ್ಗೊಂಡಿದ್ದರು. ಇದರ ನೇತೃತ್ವವನ್ನು ಜಿಲ್ಲಾ ಸಮಿತಿಯ ಅಧ್ಯಕ್ಷ ಎಂ.ಬಿ. ಕಟ್ಟಿ ಕಾರ್ಯದರ್ಶಿ. ಡಿ.ಜೆ. ಗೊಂದಕರ, ಉಪಾಧ್ಯಕ್ಷ ಎಂ.ಎಚ್.ಮುಲ್ಲಾ, ಹುರಾಬು ಹುಬ್ಬಳ್ಳಿ, ಹಾಸಿಮ್ ಧಾರವಾಡ ಮುಂದಾವರು ವಹಿಸಿದ್ದರು.

ಕೆಲಸದ ಭದ್ರತೆ, ಕನಿಷ್ಠ ವೇತನ ಜಾರಿಗೆ ಬಸ್ ನೌಕರರ ಮನವಿ

ಮಂಗಳೂರು: ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿಐಟಿಯು) ಹಾಗೂ ಬಸ್ ಮಾಲಕರ ಮಧ್ಯೆ ಆದ ಒಪ್ಪಂದದ ಪ್ರಕಾರ ದಿನಾಂಕ 1.4.1993 ರಿಂದ ಬಸ್ ನೌಕರರಿಗೆ ದಿನಭತ್ಯೆ ಬಿಟ್ಟು ತಿಂಗಳಿಗೆ ರೂ. 1,106-00 ಕನಿಷ್ಟ ವೇತನವನ್ನು ಹಲವು ಬಸ್ ಮಾಲಕರು ನೀಡದಿರುವ ಬಗ್ಗೆ ಹಾಗೂ ಬಸ್ ನೌಕರರಿಗೆ ಕಾನೂನಿನ ಸವಲತ್ತುಗಳನ್ನು ಜ್ಯಾರಿಗೊಳಿಸುವಂತೆ ಒತ್ತಾಯಿಸಲು ಸಿಐಟಿಯು ಕರೆ ನೀಡಿದ ಪ್ರಕಾರ ಬಸ್ ನೌಕರರಿಂದ ಸಹಿ ಸಂಗ್ರಹಿಸಲಾಗಿತ್ತು. ಈ ಸಹಿಗಳ ಮನವಿಯನ್ನು ಸಾರಿಗೆ ನೌಕರರ ಸಮಕ್ಷಮದಲ್ಲಿ ನವೆಂಬರ್ 24, 1993 ರಂದು ಸಹಾಯಕ ಕಾರ್ಮಿಕ ಆಯುಕ್ತರಿಗೆ ಅರ್ಪಿಸಲಾಯಿತು. ಬಸ್ ಮಾಲಿಕರು ತಮ್ಮ ನೌಕರರಿಗೆ ನ್ಯಾಯಯುತವಾಗಿ ಸಲ್ಲತಕ್ಕ ವಾರದ ರಜೆ, ಹಕ್ಕಿನ ರಜೆ, ಯೂನಿಫಾರ್ಮ್ ಮೊದಲಾದ ಸವಲತ್ತುಗಳನ್ನು ನೀಡದೆ ಹಾಜರಿ ಪುಸ್ತಕ, ವೇಜ್ ಸ್ಲಿಪ್ ಇತ್ಯಾದಿ ದಾಖಲೆಗಳನ್ನು ನೀಡದೆ ದುಡಿಸುವ ಬಗ್ಗೆ ಮನವಿಯಲ್ಲಿ ತಿಳಿಸಲಾಗಿದೆ. ಮನವಿಯನ್ನು ಸ್ವೀಕರಿಸಿದ ಸಹಾಯಕ ಕಾರ್ಮಿಕ ಆಯುಕ್ತರು ಒಪ್ಪಂದವನ್ನು ಜ್ಯಾರಿಗೊಳಿಸದ ಮಾಲಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಮನವಿ ಅರ್ಪಿಸುವ ಸಂದರ್ಭದಲ್ಲಿ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಎಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಶ್ರೀ ಕೆ. ಮೂಸಬ್ಬ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ಉಮೇಶ್ ಭಂಡಾರಿ, ಶ್ರೀ ವಾಮನ, ಶ್ರೀ ಕೇಸ್ಟೆಟ್, ಶ್ರೀ ಮಹಮ್ಮದ್, ಶ್ರೀ ಧರ್ನಪ್ಪ ಹಾಗೂ ವಿವಿಧ ಸಾರಿಗೆ ಸಂಸ್ಥೆಗಳ ನೌಕರರು ಭಾಗವಹಿಸಿದ್ದರು. ಈ ಬಗ್ಗೆ ಮುಂದಿನ ಹೋರಾಟಕ್ಕೆ ಕಾರ್ಯಕ್ರಮಗಳನ್ನು ಸಿದ್ಧಪಡಿಸುತ್ತಿದೆ.

ರಶ್ಯನ್ ಜನತೆ 'ನವಝಾರ್'ನ ಪುಕ್ಕ ಕತ್ತರಿಸುವರೇ?

ಲೋಕಕ್ಕೆ ಸಂಚಾರ

-- ಶರತ್ ಚಂದ್ರ

ಡಿಸೆಂಬರ್ 12 ರಶ್ಯದ ಪಾರ್ಲಿಮೆಂಟರಿ ಚುನಾವಣೆಗಳು ನಡೆಯುವ ದಿನ ರಶ್ಯದ 'ಹೊಸ ಝಾರ್' (ಸರ್ವಾಧಿಕಾರಿ ರಾಜನಿಗೆ ರಶ್ಯನ್ ಹೆಸರು) ಅಧ್ಯಕ್ಷ ಯೆಲ್ಟ್‌ಸಿನ್‌ರ ಟ್ಯಾಂಕುಗಳು ಧ್ವಂಸ ಮಾಡಿದ ರಶ್ಯದ ಪಾರ್ಲಿಮೆಂಟ್ (ಸೋವಿಯೆತ್) ಗೆ ಚುನಾವಣೆ ನಡೆಯುವ. ದಿನ ಈಗ ಜಗತ್ತಿಗೆ ಗೊತ್ತಿರುವಂತೆ ಈ 'ಹೊಸ ಝಾರ್' ತನ್ನ ಆಜ್ಞೆಗೆ 'ಜಿ ಹುಜೂರ್' ಎನ್ನುವ ಪಾರ್ಲಿಮೆಂಟನ್ನು ಜನ ಆಯ್ಕೆ ಮಾಡಬೇಕೆಂದು ಎಲ್ಲಾ ವ್ಯವಸ್ಥೆ ಮಾಡಿದ್ದಾನೆ. ಆದರೂ ಆತನಿಗೆ ಸ್ವಲ್ಪ ಅನುಮಾನ ಇದೆ! ಆದ್ದರಿಂದ ಅದೇ ದಿನ ಮತ ಸಂಗ್ರಹಕ್ಕೂ ವ್ಯವಸ್ಥೆ ಮಾಡಿದ್ದಾನೆ. ಇದು ಹಿಂದಿನ ಪಾರ್ಲಿಮೆಂಟು ತಿರಸ್ಕರಿಸಿದ ಸಂವಿಧಾನವನ್ನು ಹೊರಿಸುವ ಪ್ರಯತ್ನ. ಯೆಲ್ಟ್‌ಸಿನ್ನರ ಬಾಲಬುಡುಕರು ತಯಾರಿಸಿದ ಈ ಸಂವಿಧಾನದ ಪ್ರಕಾರ, ಅಧ್ಯಕ್ಷ ಅನಭಿಷಿಕ್ತ ದೊರೆ.

ಪಾರ್ಲಿಮೆಂಟು ಅಧ್ಯಕ್ಷೀಯ ಕಾನೂನುಗಳಿಗೆ ಅಸ್ತು ನೀಡದಿದ್ದರೆ, ಅದನ್ನು ವಿಸರ್ಜಿಸುವ ಹಕ್ಕು ಅಧ್ಯಕ್ಷರಿಗಿದೆ. ಈ ಹೊಸ ಸಂವಿಧಾನದ ಪ್ರಕಾರ ಯೆಲ್ಟ್‌ಸಿನ್ನನ ಪಾಶ್ಚಿಮಾತ್ಯ ಬೋಪರಾಕು ಮಂತ್ರಿ ಸಹ ಈ ಸಂವಿಧಾನ 'ಸರ್ವಾಧಿಕಾರಿ' ಎಂದು ಒಪ್ಪಿಕೊಂಡಿದ್ದಾರೆ. ಅಮೆರಿಕನ್ ಮತ್ತು ಫ್ರೆಂಚ್ ಸಂವಿಧಾನದಲ್ಲಿ ಅಧ್ಯಕ್ಷರಿಗೆ ವಿಪರೀತ ಅಧಿಕಾರವಿದೆ. ಆದರೆ ಅಲ್ಲೂ ಪಾರ್ಲಿಮೆಂಟನ್ನು ಅಧ್ಯಕ್ಷ ವಿಸರ್ಜಿಸುವಂತಿಲ್ಲ. ಅಧ್ಯಕ್ಷರಿಗೆ ವಿಟೋ ಅಧಿಕಾರವಿದ್ದರೂ, ಅದನ್ನು ತಳ್ಳಿಹಾಕುವ ಅಂತಿಮ ಅಧಿಕಾರ ಪಾರ್ಲಿಮೆಂಟಿನದ್ದೇ. ಆದರೆ ಈ ಸಂವಿಧಾನದಲ್ಲಿ ಅಂತಿಮ ಅಧಿಕಾರ ಅಧ್ಯಕ್ಷರದ್ದೇ. ಅಷ್ಟೇ ಅಲ್ಲ ಅಲ್ಲಿನ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು, ಪಬ್ಲಿಕ್ ಪ್ರಾಸಿಕ್ಯೂಟರನ್ನು ನೇಮಿಸುವ ಅಧಿಕಾರ ಸಹ ಅಧ್ಯಕ್ಷರದ್ದೇ. ಹೀಗೆ ಅಧ್ಯಕ್ಷರ ಅಧಿಕಾರಕ್ಕೆ ಶಾಸಕಾಂಗದಿಂದಾಗಲಿ, ನ್ಯಾಯಾಂಗದಿಂದಾಗಲಿ ಕಡಿವಾಣವೇ ಇಲ್ಲ.

ಆದ್ದರಿಂದ ಪಾರ್ಲಿಮೆಂಟಿನ ಚುನಾವಣೆಗಳಿಗಿಂತ ಈ ಸಂವಿಧಾನದ ಪರ-ವಿರುದ್ಧ ಜನಮತ ಸಂಗ್ರಹವೇ ಪ್ರಮುಖ ಕಾಳಗದ ಕಣವಾಗಿದೆ. ಏಕೆಂದರೆ ಯೆಲ್ಟ್‌ಸಿನ್ ಪರ ಶಕ್ತಿಗಳು ಪಾರ್ಲಿಮೆಂಟಿನಲ್ಲಿ ಬಹುಮತ ಪಡೆಯುವ ಸಂಭವ ತೀರಾ ಕಡಿಮೆ. ಆದರೆ ಯೆಲ್ಟ್‌ಸಿನ್ನರ ಸಂವಿಧಾನಕ್ಕೆ ಜನಮತ ದೆಂಬಲ ಸಿಕ್ಕಿದರೆ ಪಾರ್ಲಿಮೆಂಟಿನಲ್ಲಿ ಯಾರಿಗೆ ಬಹುಮತವಿದೆ ಎಂಬುದು ಅಪ್ರಸ್ತುತವಾಗುತ್ತದೆ.

ಚುನಾವಣೆಯಿಂದ ಪ್ರಮುಖ ವಿರೋಧ ಪಕ್ಷಗಳನ್ನು ಹೊರಗಿಡಲು ಎಲ್ಲಾ ಪ್ರಜಾಸತ್ತೆ-ವಿರೋಧಿ ಕ್ರಮಗಳನ್ನು ಸರ್ಕಾರ ಕೈಗೊಂಡಿತ್ತು. ರಶ್ಯದ 'ಶ್ವೇತಭವನ' ಧ್ವಂಸಮಾಡಿ, ಹೆಚ್ಚಿನ ವಿರೋಧ ಪಕ್ಷಗಳ ಮೇಲೆ ನಿಷೇಧ ಹೇರಲಾಗಿತ್ತು. ಹೆಚ್ಚು ಕಡಿಮೆ ಎಲ್ಲಾ ವಿರೋಧಿ ಪತ್ರಿಕೆಗಳ ಮೇಲೆ ನಿಷೇಧ ಹೇರಲಾಗಿತ್ತು. ಚುನಾವಣೆಗೆ ಸ್ವಲ್ಪ ಮೊದಲು ಕೆಲವು ಪಕ್ಷಗಳ ಮೇಲಿನ ನಿಷೇಧ ತೆಗೆಯಲಾಯಿತು. ಅಲ್ಲದೆ ಚುನಾವಣೆಯಲ್ಲಿ ಭಾಗವಹಿಸುವ ಪಕ್ಷಗಳು ರಿಜಿಸ್ಟರ್ ಮಾಡಿಕೊಳ್ಳಲು 'ಕನಿಷ್ಟ ಇಪ್ಪತ್ತು ಸಹಿ ಸಂಗ್ರಹಿಸಬೇಕೆಂದು ಶರತ್ತು ಹಾಕಲಾಯಿತು.'

ರಶ್ಯನ್ ಕಮ್ಯುನಿಸ್ಟ್ ಪಕ್ಷದ ಮೇಲೆ ನಿಷೇಧ ತೆಗೆಯಲಾಯಿತು. ಆದರೆ ಕಮ್ಯುನಿಸ್ಟ್ ವರ್ಕರ್ಸ್ ಪಾರ್ಟಿಯ ಮೇಲಿನ ನಿಷೇಧ ಮುಂದುವರೆದಿದೆ. ಕಮ್ಯುನಿಸ್ಟ್ ಪಕ್ಷಕ್ಕೆ ಸಹಿ ಸಂಗ್ರಹಣೆ ಮಾಡಿ ರಿಜಿಸ್ಟರ್ ಮಾಡಲು ಸಮಯವೇ ಇರಲಿಲ್ಲ. ಆದರೂ ಕಮ್ಯುನಿಸ್ಟ್ ಪಕ್ಷ ಯೆಲ್ಟ್‌ಸಿನ್ನರ ಪಕ್ಷ 'ರಶ್ಯನ್ ಚಾಯ್ಸ್' ಪಕ್ಷಕ್ಕಿಂತ ಎರಡು ಪಟ್ಟು ಸಹಿ ಸಂಗ್ರಹಿಸಿತು. 'ರಶ್ಯನ್ ಚಾಯ್ಸ್' ಪಕ್ಷಕ್ಕೆ ರೇಡಿಯೋ, ಟಿವಿ, ಪತ್ರಿಕೆಗಳಲ್ಲಿ ಭಾರಿ ಪ್ರಚಾರ ದೇರೆ. 'ರಶ್ಯನ್ ಚಾಯ್ಸ್' ಎರಡು ಲಕ್ಷ ಸಹಿ ಸಂಗ್ರಹಿಸಿದರೆ, ಕಮ್ಯುನಿಸ್ಟ್ ಪಕ್ಷ 4.38 ಲಕ್ಷ, ಕೃಷಿಕರ ಪಕ್ಷ 5 ಲಕ್ಷ ಸಹಿಗಳನ್ನು ಸಂಗ್ರಹಿಸಿತು. ಕಮ್ಯುನಿಸ್ಟ್ ಪಕ್ಷಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ರಶ್ಯನ್ ಲೀಗ್ ಪೀಪಲ್ಸ್ ಯೂನಿಯನ್‌ನ ಆಫೀಸಿನ ಮೇಲೆ ಪೋಲೀಸ್ ದಾಳಿ ಮಾಡಿದರು. ಕೆಲವು ಅಪರಾಧಿಗಳನ್ನು ಹುಡುಕುವ ನೆವದಲ್ಲಿ ಪೋಲೀಸ್ ದಾಳಿಯ ನಂತರ 24 ಸಾವಿರ ಸಹಿಗಳು ಕಣ್ಮರೆಯಾಗಿದ್ದವಂತೆ! ಇನ್ನೊಂದು ಪಕ್ಷ 'ಡೈರೆಕ್ಟರ್ ಪಕ್ಷ' ಚುನಾವಣೆಯನ್ನು ಪರೀಕ್ಷಿಸಲು ಅಂತರಾಷ್ಟ್ರೀಯ ಕಮಿಶನ್ ಈಗಾಗಲೇ ಕೆಲಸ ಆರಂಭಿಸಬೇಕೆಂದು ಒತ್ತಾಯಿಸಿದೆ. ಚುನಾವಣೆಯ ದಿನ 'ಬಹಳ ತಡ' ವಾದೀತು ಎಂದು ಆತಂಕ ವ್ಯಕ್ತಪಡಿಸಿದೆ. ಈ ಎಲ್ಲಾ ಪಕ್ಷಗಳು ಯೆಲ್ಟ್‌ಸಿನ್ನರ ಸರ್ವಾಧಿಕಾರಿ ಸಂವಿಧಾನವನ್ನು ವಿರೋಧಿಸಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಪ್ರಮುಖ ಯೆಲ್ಟ್‌ಸಿನ್ ವಿರೋಧಿ ಪತ್ರಿಕೆಗಳ -'ಸೋವಿಯೆಟ್ ಸ್ಕೋಯ್ ರಶ್ಯ' ಮತ್ತು 'ಗ್ಲಾಸ್‌ನೋಸ್ತ್' -ಮೇಲೆ ನಿಷೇಧ ಮುಂದುವರೆದಿದೆ.

ರಶ್ಯನ್ ಜನತೆಯ ಮುಂದೆ ಪ್ರಜಾಪ್ರಭುತ್ವ ಅಥವಾ ಸರ್ವಾಧಿಕಾರದ ನಡುವೆ ಆಯ್ಕೆ ಮಾಡಬೇಕಾಗಿದೆ. ಪಾರ್ಲಿಮೆಂಟನ್ನು ಟ್ಯಾಂಕ್‌ಗಳಿಂದ ಧ್ವಂಸ ಮಾಡಿದ ಮೇಲೆ ಯೆಲ್ಟ್‌ಸಿನ್ನರ ದೆಂಬಲ ಗಣನೀಯವಾಗಿ ಕಡಿಮೆಯಾಗಿದೆ. ಆದ್ದರಿಂದಲೇ ಜೂನ್ 1994 ರಲ್ಲಿ ಅಧ್ಯಕ್ಷೀಯ ಚುನಾವಣೆ ನಡೆಸುವ ಭರವಸೆಯನ್ನು ಯೆಲ್ಟ್‌ಸಿನ್ ಕೈ ಬಿಟ್ಟಿದ್ದಾನೆ.

ಯೆಲ್ಟ್‌ಸಿನರ 'ಪೋಲೀಸ್ ರಾಜ್ಯ' ಧಿಕ್ಕರಿಸಿ ಅಕ್ಟೋಬರ್ ಮಹಾ ಕ್ರಾಂತಿ ವಾರ್ಷಿಕ ಆಚರಣೆ

ಅಕ್ಟೋಬರ್ ಮಹಾ ಕ್ರಾಂತಿಯ 76ನೇ ವಾರ್ಷಿಕೋತ್ಸವ ಯೆಲ್ಟ್‌ಸಿನ್ನರ 'ಪೋಲೀಸ್ ರಾಜ್ಯ'ದ ದಮನದಡಿಯಲ್ಲೂ ಪ್ರತಿಭಟನೆಯ ಮೂಲಕ ಆಚರಿಸಲಾಯಿತು. ಇತರ ಮಾಜಿ ಸೋವಿಯೆಟ್ ಗಣರಾಜ್ಯಗಳಲ್ಲೂ ಇದನ್ನು ಆಚರಿಸಲಾಯಿತು.

ಜಗತ್ತಿನ ಪ್ರಥಮ ಸಮಾಜವಾದಿ ದೇಶದ 76 ವರ್ಷದ ಚರಿತ್ರೆಯನ್ನು ಅಳಿಸಿಹಾಕಲು ಯೆಲ್ಟ್‌ಸಿನ್ ಸರ್ಕಾರ ಎಲ್ಲಾ ಪ್ರಯತ್ನ ನಡೆಸಿತ್ತು. ಮಾಸ್ಕೋವನ್ನು ಭಾರಿ 'ಪೋಲೀಸ್ ಲಾಕಪ್' ಮಾಡಲಾಗಿತ್ತು. ಎಲ್ಲಾ ರೀತಿಯ ಮೆರವಣಿಗೆ, ರ‍್ಯಾಲಿಗಳನ್ನು ನಿಷೇಧಿಸಲಾಗಿತ್ತು. ದೇಶದ ತುಂಬಾ ಸಹ ಇದೇ ರೀತಿಯ ನಿಷೇಧ ಜಾರಿಯಲ್ಲಿತ್ತು. ಆದರೆ ಆ ದಿನದ ರಾಷ್ಟ್ರೀಯ ರಜಾದಿನ ರದ್ದು ಮಾಡುವ ಧೈರ್ಯ ಯೆಲ್ಟ್‌ಸಿನ್ ತೋರಲಿಲ್ಲ.

ಹಿಂದಿನ ದಿನದಿಂದಲೇ ರೇಡಿಯೋ, ಟಿವಿಗಳಲ್ಲಿ ಅಕ್ಟೋಬರ್ ಮಹಾಕ್ರಾಂತಿ ಬಗ್ಗೆ ಅಪಪ್ರಚಾರ ಆರಂಭವಾಗಿತ್ತು. ಯಾವುದೋ ಮೆರವಣಿಗೆ, ರ‍್ಯಾಲಿ ಮುರಿಯಲು ಪೋಲೀಸು ಸೈನ್ಯಗಳ ಕವಾಯತು ತೋರಿಸಲಾಯಿತು. ಎಲ್ಲಾ ಪ್ರಮುಖ ಸಾರ್ವಜನಿಕ ಸ್ಥಳಗಳು, ರೈಲ್ವೇ ಮೆಟ್ರೋ ಸ್ಟೇಶನ್‌ಗಳಲ್ಲಿ ಬಲವಾದ ಪೋಲೀಸ್ ಕಾವಲಿತ್ತು 'ಶ್ವೇತಭವನ ಧ್ವಂಸ ಮಾಡಿದ ಕಹಿ ಅನುಭವದಿಂದ ರಶ್ಯನ್ ಕಮ್ಯುನಿಸ್ಟ್ ಪಕ್ಷ ರ‍್ಯಾಲಿ, ಮೆರವಣಿಗೆಗೆ ಕರೆ ನೀಡಲಿಲ್ಲ.' ಯೆಲ್ಟ್‌ಸಿನ್ನರ ಪೋಲೀಸ್ ರಾಜ್ಯದಲ್ಲಿ ಜನರ ಪ್ರಾಣವನ್ನು ಪಣಕ್ಕಿಡುವ ದುಸ್ಸಾಹಸ ಮಾಡಲಿಲ್ಲ.

ಆದರೂ ಸುಮಾರು 2000 ನಾಗರಿಕರು ಹಳೆ ಅಕ್ಟೋಬರ್ ಚೌಕದ ಬಳಿಯ ಲೆನಿನ್ ಪ್ರತಿಮೆ ಎದುರು ಸೇರಿದ್ದರು. ಆಗಲೇ ಅಲ್ಲಿ ಡಜನ್ ಪೋಲೀಸ್ ವಾಹನಗಳು ಘೇರಾಯಿಸಿದ್ದವು. ಜನ ಕಾಲು ನಡಿಗೆಯಿಂದ ಅಲ್ಲಿ ಬಂದು ಸೇರುತ್ತಿದ್ದಂತೆ ಅವರಿಗೆ ಮೈಕುಗಳ ಮೇಲೆ ಎಚ್ಚರಿಕೆ ನೀಡಿ, ಚದುರಲು ಸಮಯ ಸಹ ಕೊಡದೆ ಹತ್ತಿರ ಮೆಟ್ರೋ ಸ್ಟೇಶನ್‌ಗೆ ಅವರನ್ನು ತಳ್ಳಲಾಯಿತು. ಲೆನಿನ್ ಶರೀರ ಇಟ್ಟಿರುವ ಮ್ಯೂಸಿಯಂನಲ್ಲೂ ದೊಡ್ಡ ದೊಡ್ಡ ಗುಂಪುಗಳಲ್ಲಿ ಜನ ಹೋಗದಂತೆ ತಡೆಯಲಾಯಿತು. ಒಬ್ಬೊಬ್ಬರಾಗಿ ಬಿಡಲಾಯಿತು. ಹೀಗಿತ್ತು ಯೆಲ್ಟ್‌ಸಿನ್ನರ 'ಪೋಲೀಸ್ ರಾಜ್ಯ'ದ ಭೀತಿ ಜನತೆ ಬಗ್ಗೆ

ದಮನವನ್ನು ಧಿಕ್ಕರಿಸಿ ಅಕ್ಟೋಬರ್ ಕ್ರಾಂತಿ ವಾರ್ಷಿಕ ಆಚರಿಸಿದ ವರದಿಗಳು ಇತರ ಪ್ರದೇಶಗಳಿಂದಲೂ, ಇತರ ಗಣರಾಜ್ಯಗಳಿಂದಲೂ ಬಂದಿವೆ. ಪೀಟರ್ಸ್ ಬರ್ಗ (ಅಥವಾ ಲೆನಿನ್‌ಗ್ರಾಡ್) ನಲ್ಲಿ ದೊಡ್ಡ ಪ್ರದರ್ಶನ ನಡೆಸಲಾಯಿತು. ಮೇಯರ್ ನಿಷೇಧ ಇದ್ದಾಗ್ಯೂ ಪ್ರದರ್ಶನ ಕ್ರಾಂತಿಯಲ್ಲಿ ಭಾಗವಹಿಸಿದ ಯುದ್ಧ ಹಡಗು 'ಅರೋರಾ'ದ ಮುಂದೆ ನಡೆಯಿತು.

ಗ್ಯಾಟ್ ಕಛೇರಿ ಮುಂದೆ ರೈತರ ಪ್ರದರ್ಶನ

ಜೆನಿವಾದಲ್ಲಿರುವ ಗ್ಯಾಟ್ ಕಛೇರಿ ಮುಂದೆ ಐದು ಸಾವಿರಕ್ಕೂ ಹೆಚ್ಚು ರೈತರ ಪ್ರದರ್ಶನ ನಡೆಯಿತು. ಪ್ರದರ್ಶನವನ್ನು ಸಂಘಟಿಸಿದ್ದು, ಯುರೋಪಿಯನ್ ರೈತರ ಯೂನಿಯನ್‌ಗಳು ಇದರಲ್ಲಿ ಫ್ರೆಂಚ್ ರೈತರು ಮುಂಚೂಣಿಯಲ್ಲಿದ್ದರು. ಯುರೋಪಿಯನ್ ಕೃಷಿ ಸಬ್ಸಿಡಿ ಕಡಿತ ಬಗ್ಗೆ ಅಮೇರಿಕ ಒತ್ತಡಕ್ಕೆ ಮಣಿಯುತ್ತಿರುವ ಯುರೋಪಿಯನ್ ಸಮುದಾಯದ ನೀತಿ ಬಗ್ಗೆ ಅವರು ಪ್ರತಿಭಟಿಸುತ್ತಿದ್ದರು. ಜಪಾನ್‌ನಲ್ಲೂ ರೈತರು 'ಗ್ಯಾಟ್' ಮಾತುಕತೆಗಳೂ ಅಮೇರಿಕಾದ ಒತ್ತಡಕ್ಕೆ ಮಣಿಯುವುದರ ವಿರುದ್ಧ ಭಾರೀ ಪ್ರದರ್ಶನ ನಡೆಸಿದರು.

ರೈತರ ಸರ್ವಸದಸ್ಯರ ಸಭೆ ನೂತನ ಪದಾಧಿಕಾರಿಗಳ ಆಯ್ಕೆ

ರಾಯಚೂರು: ನವೆಂಬರ್ 17 ರಂದು ತಾಲೂಕಿನ ರಘುನಾಥನ ಹಳ್ಳಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಸರ್ವಸದಸ್ಯರು ಸಭೆ ಸೇರಿ ಈ ಕೆಳಗಿನಂತೆ ಸಮಿತಿಯನ್ನು ಆಯ್ಕೆ ಮಾಡಿದರು.

ಅಧ್ಯಕ್ಷರಾಗಿ ಕಾಂ. ಎಸ್. ತಿಪ್ಪಣ್ಣ, ಉಪಾಧ್ಯಕ್ಷರಾಗಿ ಕಾಂ. ಗಂಗಾಧರಗೌಡ, ಕಾರ್ಯದರ್ಶಿಯಾಗಿ ಕೆ. ಹುಸೇನ್ ಸಾಬ್, ಸಹಕಾರ್ಯದರ್ಶಿಯಾಗಿ ಕಾ. ಎನ್. ವೀರಪ್ಪ, ಖಜಾಂಚಿಯಾಗಿ ಕಾಂ. ಶರೀಫ್ ಸಾಬ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸಂಗಾತಿಗಳಾದ ಬಸವರಾಜ ಸ್ವಾಮಿ, ಬಿ. ಸಿದ್ದಪ್ಪ, ಎಸ್. ಸಿದ್ದಪ್ಪ, ಎನ್. ಹನುಮಂತಪ್ಪ ಆಯ್ಕೆಯಾಗಿದ್ದಾರೆ.

ಸರ್ವ ಸದಸ್ಯರ ಸಭೆಗೆ ಕಾಂ. ಹುಸೇನ್ ಸಾಬ್ ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ. ಎಸ್. ತಿಪ್ಪಣ್ಣನವರು ಹಳ್ಳಿಯಲ್ಲಿ ಕಳೆದ ಹನ್ನೊಂದು ವರ್ಷದಿಂದ ಸಂಘಟನೆ ಬೆಳೆದು ಬಂದ ಬಗ್ಗೆ, ಕಳೆದ ಸಮಿತಿಯ ರಚನೆ ನಂತರದ ಚಟುವಟಿಕೆಗಳನ್ನು ವಿವರಿಸಿದರು. ಮುಖ್ಯ ಅತಿಥಿಯಾಗಿದ್ದ ಜಿಲ್ಲಾ ಸಮಿತಿ ಸಂಚಾಲಕ ಕಾಂ. ಮಲ್ಲಯ್ಯ ಜಾಲಿ ಹಳ್ಳಿಯವರು ಸಂಘಟನೆಯ ಅವಶ್ಯಕತೆ, ಅದನ್ನು ನಡೆಸಬೇಕಾದ ರೀತಿ, ಗ್ರಾಮ ಸಮಿತಿಗಳು ಗ್ರಾಮಗಳ ಸಮಸ್ಯೆಗಳ ಜೊತೆ ರಾಷ್ಟ್ರೀಯ ಕರೆಗಳನ್ನು ಸಮ್ಮಿಲನಗೊಳಿಸಿ ಜಾರಿಗೊಳಿಸಬೇಕಾದ ಬಗ್ಗೆ ಮತ್ತು ಹೊಸ ಆರ್ಥಿಕ ನೀತಿಯ ದುಷ್ಪರಿಣಾಮಗಳು ಹಾಗೂ ಡಂಕೆಲ್ ಸೂತ್ರಕ್ಕೆ ಸಹಿ ಬಿದ್ದಲ್ಲಿ ಆಗುವ ಗಂಡಾಂತರಕಾರಿ ದುಷ್ಪರಿಣಾಮಗಳು ಇವುಗಳ ಬಗ್ಗೆ ವಿವರವಾಗಿ ಹೇಳಿದರು. ಕೊನೆಯಲ್ಲಿ ಕಾಂ. ಎನ್. ಹನುಮಂತಪ್ಪ ವಂದನಾರ್ಪಣೆ ಮಾಡಿದರು.

ಮಂಗಳೂರು ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ

ಮಂಗಳೂರು: ಮಂಗಳೂರು ಬೀಡಿ ಕೆಲಸಗಾರರ ಸಂಘದ 27 ವಾರ್ಷಿಕ ಮಹಾಸಭೆಯು ನವೆಂಬರ್ 18 ರಂದು ಭಾನುವಾರ ಸಂಜೆ 3 ಗಂಟೆಗೆ ಎಸ್.ಕೆ. ಟೈಲ್ ವರ್ಕರ್ಸ್ ಯೂನಿಯನ್‌ನ ಸಭಾಭವನದಲ್ಲಿ ಸಂಘದ ಕೋಶಾಧಿಕಾರಿ ಕಾಂ. ಕಮಲಾಕ್ಷ ಬಂಗೇರರವರ ಅಧ್ಯಕ್ಷತೆಯಲ್ಲಿ ಜರುಗಿತು.

ಆರಂಭದಲ್ಲಿ ಸಂಘದ ಕಾರ್ಯದರ್ಶಿ ಕಾಂ. ಜೆ. ವೀರಪ್ಪನವರು ಸ್ವಾಗತಿಸಿದರು. ವಿವಿಧ ಹೋರಾಟಗಳಲ್ಲಿ ಪ್ರಾಣತೆತ್ತ ಎಲ್ಲರಿಗೂ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ನಂತರ ಪ್ರಾರ್ಥನೆಯೊಂದಿಗೆ ಸಭೆ ಆರಂಭಗೊಂಡಿತು. ಸಂಘದ ಕಾರ್ಯದರ್ಶಿಯವರ ಪರವಾಗಿ ಕಾಂ. ಬಿ. ವಿಷ್ಣುಮೂರ್ತಿ ಚಟುವಟಿಕೆಗಳ ವರದಿಯನ್ನು ನೀಡಿದರು. ಕೋಶಾಧಿಕಾರಿ ಕಾಂ. ಕಮಲಾಕ್ಷ ಬಂಗೇರನವರು ಲೆಕ್ಕಪತ್ರಗಳ ವರದಿಯನ್ನು ನೀಡಿದರು. ಇದನ್ನು ಅಂಗೀಕರಿಸಲಾಯಿತು.

ಸಂಘಟನೆಯನ್ನು ಬಲಪಡಿಸಿ ಲಕ್ಷಾಂತರ ಸಂಖ್ಯೆಯಲ್ಲಿರುವ ಬೀಡಿ ಕಾರ್ಮಿಕರು ತಮ್ಮ ಹೋರಾಟದಿಂದ ದೊರೆತ ಸವಲತ್ತುಗಳು ಕೈಗೆ ಟುಕುವಂತಾಗಲು ಹೋರಾಟ ಮಾಡಬೇಕಾದ ಪರಿಸ್ಥಿತಿ ಬಗ್ಗೆ ಎಚ್ಚರಿಸಿ, ಹಿಂದಿನ ಪರಂಪರೆಯನ್ನು ನೆನಪಿಸಿ ಹೋರಾಟಕ್ಕೆ ಧುಮುಕುವಂತೆ ಕರೆ ನೀಡಿದರು. ಈ ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್, ಸಿಐಟಿಯು ಜಿಲ್ಲಾ ಅಧ್ಯಕ್ಷ ಕಾಂ. ಬಿ. ಮಾಧವ, ಬೀಡಿ ಫೆಡರೇಷನ್‌ನ ಜಿಲ್ಲಾ ಕಾರ್ಯದರ್ಶಿ ಕಾಂ. ಬಾಲಕೃಷ್ಣ ಶೆಟ್ಟಿ ಮೊದಲಾದವರು ಮಾತನಾಡಿದರು.

ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ 40.00 ರೂಪಾಯಿ ರಾಷ್ಟ್ರೀಯ ಕನಿಷ್ಟ ಕೂಲಿ ನಿಗದಿಯಾಗಬೇಕು. ಶೇಕಡ 20 ಬೋನಸ್ ಸಿಗಬೇಕು. ಗ್ರಾಚ್ಯುಟಿ ಸೌಲಭ್ಯ ಜ್ಯಾರಿಯಾಗಬೇಕು. ವಾರಪೂರ್ತಿ ಕೆಲಸ ಸಿಗಬೇಕು. ಅಥವಾ ಕೆಲಸವಿಲ್ಲದ ದಿನಕ್ಕೆ ಲೇ-ಆಫ್ ಸಿಗಬೇಕು. ಮತ್ತು ಎಲೆ ತಂಬಾಕು ಎವರೇಜ್ ಹೆಸರಲ್ಲಿ ನಷ್ಟ ವಸೂಲಿ ನಿಲ್ಲಬೇಕೆಂದು ಒತ್ತಾಯಿಸುವ ಠರಾವುಗಳನ್ನು ಅಂಗೀಕರಿಸಲಾಯಿತು.

ಮುಂದಿನ ಸಾಲಿಗೆ ಕಾಂ. ಬಿ. ಉಮಾನಾಥ ಅಧ್ಯಕ್ಷರಾಗಿಯೂ, ಶ್ರೀಮತಿ ಕಲ್ಯಾಣಿ ಮತ್ತು ಕೃಷ್ಣಮ್ಮ ಉಪಾಧ್ಯಕ್ಷರಾಗಿಯೂ, ಜೆ. ವೀರಪ್ಪ ಕಾರ್ಯದರ್ಶಿಯಾಗಿಯೂ, ಕಾ. ಬಿ. ವಿಷ್ಣುಮೂರ್ತಿ ಮತ್ತು ಲೀಲಾ ಉಪಕಾರ್ಯದರ್ಶಿಗಳಾಗಿಯೂ, ಕಮಲಾಕ್ಷ ಬಂಗೇರ ಕೋಶಾಧಿಕಾರಿಯಾಗಿಯೂ ಇರುವ 29 ಮಂದಿಯ ಕಾರ್ಯಕಾರೀ ಸಮಿತಿಯನ್ನು ಆರಿಸಲಾಯಿತು.

ಎಸ್.ಕೆ. ಪ್ರೆಸ್ ವರ್ಕರ್ಸ್ ಯೂನಿಯನ್, ಮಂಗಳೂರು ಬಂದರು ವರ್ಕರ್ಸ್ ಯೂನಿಯನ್ ವತಿಯಿಂದ ಸಂಗಾತಿಗಳು ಶುಭ ಸಂದೇಶ ನೀಡಿದ್ದು, ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಎಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ ವತಿಯಿಂದ ಶುಭ ಸಂದೇಶಗಳನ್ನು ಓದಲಾಯಿತು.

ಕೊನೆಯಲ್ಲಿ ಕಾಂ. ವಿಷ್ಣುಮೂರ್ತಿ, ಧನ್ಯವಾದವೀಯುವುದರೊಂದಿಗೆ ಸಭೆ ಮುಕ್ತಾಯವಾಯಿತು.

ಕನಿಷ್ಟ ವೇತನಕ್ಕಾಗಿ ಹೋಟೆಲ್ ಕಾರ್ಮಿಕರ ಪ್ರತಿಭಟನೆ

ಮೈಸೂರು : ನಗರದ ಹೋಟೆಲ್ ಕಾರ್ಮಿಕರು ನವಂಬರ್ 23ರಂದು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಕಾರ್ಮಿಕ ಇಲಾಖೆ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ಹೋಟೆಲ್ ಕಾರ್ಮಿಕರ ಸಂಘದ ಮುಖಂಡರುಗಳಾದ ಮೋಹನ್ ಕುಮಾರ್, ಎಮ್. ಪುಟ್ಟಣ್ಣ, ಹೆಚ್.ಎಸ್. ಜಗದೀಶ್, ಹೇಮಾಜಿರಾವ್, ಜಿ.ಎಂ. ಲಿಂಗಪ್ಪ

ಸುದ್ದಿಗಳು

ಮುಂತಾದವರ ನೇತೃತ್ವದಲ್ಲಿ ಪ್ರತಿಭಟನೆಯು ನಡೆಯಿತು. ನಂತರ ಸಹಾಯಕ ಕಾರ್ಮಿಕರ ಆಯುಕ್ತ ಶ್ರೀ ಜೆಂಕಿಲಪ್ಪನವರಿಗೆ ಮನವಿ ಪತ್ರ ಅರ್ಪಿಸಲಾಯಿತು. ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುವುದಾಗಿ ಅವರು ಭರವಸೆ ನೀಡಿದರು.

ರಾಮದುರ್ಗ : ನವಂಬರ್ 22ರಂದ ಬೆಂಗಳೂರಿನ ವಿಧಾನಸೌಧದ ಎದುರು ಕನಿಷ್ಟ ಕೂಲಿ ಜಾರಿ ಮತ್ತಿತರ ಬೇಡಿಕೆಗಳಿಗಾಗಿ ನಡೆಸಿರುವ ಅನಿರ್ದಿಷ್ಟ ಚಳುವಳಿಯನ್ನು ಬೆಂಬಲಿಸಿ ಸಿಐಟಿಯು ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಮದುರ್ಗದಲ್ಲಿ ಬೆಳಗಾಂ ಜಿಲ್ಲಾ ಬೀಡಿ ಕಾರ್ಮಿಕರ ಯೂನಿಯನ್ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಸುಮಾರು 400 ಜನ ಸೇರಿ ಬೃಹತ್ ಮೆರವಣಿಗೆ ಮತ್ತು ತಹಸೀಲ್ದಾರ ಕಚೇರಿ ಎದುರು ನವಂಬರ್ 25ರಂದು ಧರಣಾ ಕಾರ್ಯಕ್ರಮ ನಡೆಸಿದರು.

ನಗರದ ವೆಂಕಟೇಶ ದೇವಸ್ಥಾನದಿಂದ ಮೆರವಣಿಗೆ ಹೊರಟು ತಹಸೀಲ್ದಾರ ಕಚೇರಿ ಎದುರು ಧರಣಾ ಕಾರ್ಯಕ್ರಮ ನಡೆಸ ಇತ ಹಸೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಸತ್ಯಾಗ್ರಹಿಗಳಿಗೆ 5000 ರೊಟ್ಟಿಗಳನ್ನು ಕಳಿಸಲಾಯಿತು. ಕಾರ್ಯಕ್ರಮದ ನೇತೃತ್ವವನ್ನು ಗೈಬು ಜ್ಯಮಖಾನ, ರಫೀಕ ದೆಣ್ಣೆ, ಜಹಾಂಗೀರ ಜಹಗೀರದಾರ, ನಜೀರ ಸರಮುಲ್ಲಾ, ನಾಗೇಂದ್ರ ಶಿಂಧೆ, ನಾಗಪ್ಪ ಬಂಡಿವಡ್ಡರ, ರಾಜು ಮುದಕವಿ, ದಾದಾ ಪಠಾಣ ಇವರುಗಳು ವಹಿಸಿದ್ದರು.

ಡಿವೈಎಫ್‌ಐನಿಂದ ರಾಜ್ಯೋತ್ಸವ

ಸುಂಕದಕಟ್ಟೆ(ಬೆಂಗಳೂರು) : ಡಿವೈಎಫ್‌ಐ ಸುಂಕದಕಟ್ಟೆ ಘಟಕವು ನವೆಂಬರ್ 28ರಂದು ಕರ್ನಾಟಕ ರಾಜ್ಯೋತ್ಸವ ಆಚರಿಸಿತು. ಈ ಸಂದರ್ಭದಲ್ಲಿ ಬಡಮಕ್ಕಳಿಗೆ ಉಚಿತ ಪುಸ್ತಕ ವಿತರಣೆ, ಬಡ ಜನರಿಗೆ ಬೆಡ್‌ಶೀಟ್‌ಗಳನ್ನು ನೀಡಲಾಯಿತು. ಈ ಕಾರ್ಯಕ್ರಮಕ್ಕೆ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ರಾಜ್ಯದಲ್ಲಿ ಭಾಷೆ ಅತ್ಯುನ್ನತ ಸ್ಥಾನಕ್ಕೇರಬೇಕಾದರೆ ನಾಡಿನ ಜನರ ಸಮಸ್ಯೆಗಳು ಬಗೆಹರಿಯಬೇಕು. ಅವುಗಳ ಈಡೇರಿಕೆಗಾಗಿ ಜನರು ಹೋರಾಟ ನಡೆಸಬೇಕು. ಭಾಷೆಯ ಹೆಸರಿನಲ್ಲಿ ಒಂದು ಭಾಷೆಯಿಂದ ಮತ್ತೊಂದು ಭಾಷೆಯನ್ನು ದ್ವೇಷಿಸಬಾರದು. ರಾಷ್ಟ್ರದ ಐಕ್ಯತೆಯ ಸ್ಫೂರ್ತಿ ಭಾಷಾ ... ತಿಳಿಕೊಂಡು ಬರಬೇಕೆಂದು ಮನವಿ ಮಾಡಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಗೋಪಾಲ ಕೃಷ್ಣ, ಸಿಐಟಿಯು ಕಾರ್ಯದರ್ಶಿ ಕಾಂ.ಆರ್. ಶ್ರೀನಿವಾಸ್‌ರವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಜೆ.ಸಿ. ಎಕ್ಸ್‌ಪೆಂಟ್ ಕಾರ್ಖಾನೆಯ ಆಡಳಿತಗಾರರಲ್ಲಿ ಒಬ್ಬರಾದ ಜಯರಾಂ ಅಧ್ಯಕ್ಷತೆ ವಹಿಸಿದ್ದರು.

ದೊಡ್ಡಣ್ಣ ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಡಿವೈಎಫ್‌ಐ ಸುಂಕದಕಟ್ಟೆ ಘಟಕದ ಸಂಚಾಲಕರಾದ ಮೂಡಲಗಿರಿಯವರು ಸ್ವಾಗತಿಸಿದರು.

ಶ್ರದ್ಧಾಂಜಲಿ ಕಾಂ.ಎ.ಪಿ. ನರಸಿಂಹನ್

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶ್ರೀರಾಮಪುರ ಶಾಖೆಯ ಸದಸ್ಯರಾಗಿದ್ದ ಕಾಂ. ಎ.ಪಿ.ನರಸಿಂಹನ್‌ರವರು ಕಾಯಿಲೆಯಿಂದ ಸಾವನ್ನಪ್ಪಿದರು. ಇವರ ಅಕಾಲ ಮರಣಕ್ಕೆ ಪಕ್ಷದ ಶಾಖೆಯು ತನ್ನ ಶ್ರದ್ಧಾಂಜಲಿ ಅರ್ಪಿಸಿತು. ಕಾಂ. ನರಸಿಂಹನ್‌ರವರು ಪಕ್ಷದ ಹಿರಿಯ ಸದಸ್ಯರು ಮಾತ್ರವಲ್ಲದೆ ಮಿನರ್ವ ಮಿಲ್ ಹತ್ತಿ ಗಿರಣಿ ಕಾರ್ಮಿಕ ಸಂಘದ ಸ್ಥಾಪಕರಲ್ಲಿ ಪ್ರಮುಖರಾಗಿದ್ದರು. ಜೀವನದಲ್ಲಿ ಎಂತಹ ಕಷ್ಟ ಬಂದರೂ ಪಕ್ಷವನ್ನು ಕಟ್ಟುವ ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದುಡಿಯುತ್ತಿದ್ದರು.

ಇವರ ಪಾರ್ಥಿವ ಶರೀರಕ್ಕೆ ಸಿಐಟಿಯು ರಾಜ್ಯ ಕಾರ್ಯದರ್ಶಿ ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ. ವಿ.ಜೆ.ಕೆ. ನಾಯರ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ. ಆರ್. ಶ್ರೀನಿವಾಸ್ ಮತ್ತಿತರ ಹಲವು ಗಣ್ಯರು ಪುಷ್ಪಹಾರ ಹಾಕಿ ಶ್ರದ್ಧಾಂಜಲಿ ಅರ್ಪಿಸಿದರು.

ಕಾಂ. ನರಸಿಂಹನ್‌ರವರ ಮೃತ ದೇಹವನ್ನು ಪಕ್ಷದ ಸದಸ್ಯರು, ಮಿನರ್ವ ಕಾರ್ಮಿಕರು ಶಾಂತಿ ಮೆರವಣಿಗೆ ನಡೆಸಿ ಹರಿಶ್ಚಂದ್ರ ರುದ್ರಭೂಮಿಯಲ್ಲಿ ದಹನ ಮಾಡಲಾಯಿತು.

... ಪಕ್ಷದ ಶ್ರೀರಾಮಪುರ ಶಾಖೆ ಶ್ರದ್ಧಾಂಜಲಿ ಸಭೆ ನಡೆಸಿ ಕಾಂ. ಜನಾರ್ಧನ, ... ಪಿ.ಕೆ. ಸುಬ್ರಮಣಿ, ಕಾಂ. ಚಂದ್ರ, ಕಾಂ. ಗೋಪಾಲಕೃಷ್ಣ (ಡಿವೈಎಫ್‌ಐ ...) ... ನರಸಿಂಹನ್‌ರವರು ಪಕ್ಷದ ... ಮಾಡಿದ ... ಗಳನ್ನು ...

KRNM/BGS-405 MAG(2) PRB DECR 319-78/79

ಅಂಚೆ ನೌಕರರ ಯಶಸ್ವಿ ಮುಷ್ಕರ

ಡಿಸೆಂಬರ್ 7 ರಿಂದ ಆರಂಭವಾಗಿರುವ ಅಂಚೆ ನೌಕರರ ಅಖಿಲ ಭಾರತ ಅನಿರ್ದಿಷ್ಟ ಕಾಲದ ಮುಷ್ಕರ ದೇಶಾದ್ಯಂತ ಅಂಚೆ ವ್ಯವಸ್ಥೆಯನ್ನು ಸಂಪೂರ್ಣ ನಿಲುಗಡೆ ತರುವಲ್ಲಿ ಯಶಸ್ವಿಯಾಗಿದೆ. ಮೂರು ಅಖಿಲ ಭಾರತ ಒಕ್ಕೂಟಗಳಾದ ಅಂಚೆ ನೌಕರರ ರಾಷ್ಟ್ರೀಯ ಒಕ್ಕೂಟ (NFPE), ಇಂಟಕ್‌ಗೆ ಸೇರಿದ ರಾಷ್ಟ್ರೀ ಅಂಚೆ ಸಂಘಟನೆಗಳ ಒಕ್ಕೂಟ (FNPO) ಹಾಗೂ ಬಿ.ಎಂ.ಎಸ್.ಗೆ ಸೇರಿದ ಭಾರತೀಯ ಅಂಚೆ ನೌಕರರ ಒಕ್ಕೂಟ (BPEF) ಅಕ್ಟೋಬರ್ 20, 1993ರಂದು ಜಂಟಿಯಾಗಿ ಈ ಮುಷ್ಕರದ ನೋಟೀಸು ಜಾರಿಮಾಡಿದ್ದವು. ಪೋಸ್ಟಲ್ ಇನ್ಸ್‌ಪೆಕ್ಟರುಗಳು, ಆರ್.ಎಂ.ಎಸ್.ನ ಅಸಿಸ್ಟೆಂಟ್ ಸೂಪರಿಟೆಂಡೆಂಟ್‌ಗಳು ಪ್ರತಿನಿಧಿಸುವ ಎರಡು ಸಂಘಟನೆಗಳು ಹಾಗೂ ಪೋಸ್ಟಲ್, ಅಕೌಂಟ್ಸ್ ನೌಕರರ ಸಂಘವೂ ಈ ಜಂಟಿ ನೋಟೀಸಿಗೆ ಸಹಿ ಮಾಡಿದ್ದರು.

ತಮ್ಮ ಬೇಡಿಕೆಗಳ ಈಡೇರಿಕೆಗಾಗಿ 6 ಲಕ್ಷ ಅಂಚೆ ನೌಕರರು ತಮ್ಮ ಬತ್ತಳಿಕೆಯಲ್ಲಿರುವ ಈ ಕೊನೆಯ ಅಸ್ತ್ರವನ್ನು ಪ್ರಯೋಗಿಸಿದ್ದಾರೆ. ಈ 6 ಲಕ್ಷ ನೌಕರರಲ್ಲಿ 3 ಲಕ್ಷ ಇಲಾಖೇತರ (ED) ನೌಕರರೆಂದು ಅನಿಸಿಕೊಳ್ಳುವ ಅತೀ ಕಮ್ಮಿ ಸಂಬಳ ಪಡೆಯುವ ನೌಕರರು. ಅವರಿಗೆ ಕೇವಲ 'ಅಲೋಯೆನ್ಸ್' ನೀಡಲಾಗುತ್ತಿದೆ. ವೇತನ ಶ್ರೇಣಿ ಎಂಬುವುದು ಅವರಿಗೆ ಇಲ್ಲವೇ ಇಲ್ಲ. ರಜಾ ಸೌಲಭ್ಯಗಳು, ಪೆನ್ಶನ್, ಗ್ರಾಚ್ಯುಟಿ ಇತ್ಯಾದಿಗಳೂ ಇಲ್ಲ.

ಯೂನಿಯನ್‌ಗಳು ಈ ಮೂರು ಲಕ್ಷ ನೌಕರರ ನಗ್ನ ಶೋಷಣೆಯ ವಿರುದ್ಧ ದನಿಯೆತ್ತಿವೆ. ED ಸಿಬ್ಬಂದಿ ಸರಕಾರದಡಿ ಸಿವಿಲ್ ಹುದ್ದೆಗಳಲ್ಲಿರುವವರು ಎಂದು ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿದ್ದರೂ ಭಾರತ ಸರಕಾರ ಅದನ್ನು ಉಪೇಕ್ಷಿಸಿದೆ.

ಅಂಚೆ ಸೇವೆ ಸರಕಾರದ ತಪ್ಪು ನೀತಿಗಳಿಂದಾಗಿ ದಿನೇ ದಿನೇ ಹದಗೆಡುತ್ತಿದೆ. ಅಗತ್ಯ ಸಿಬ್ಬಂದಿಯನ್ನು ಕೊಡಲಾಗುತ್ತಿಲ್ಲ. ಸಾರ್ವಜನಿಕರಿಗೆ ಇದುವರೆಗೆ ನೀಡುತ್ತಿದ್ದ ಮನೆಬಾಗಿಲಿಗೆ ತಂದು ತಲುಪಿಸುವ ವ್ಯವಸ್ಥೆಯನ್ನು ತೀವ್ರವಾಗಿ ಮಿತಗೊಳಿಸಲಾಗಿದೆ. ಡೆಲಿವರಿ ಸಂಖ್ಯೆಗಳನ್ನು ಕಡಿತಮಾಡಲಾಗಿದೆ. ಆರ್.ಎಮ್.ಎಸ್.ನಲ್ಲಿ ದಕ್ಷತೆಯಿಂದ ನಡೆಯುತ್ತಿದ್ದ ಸಾರ್ಟಿಂಗ್ ಕೆಲಸವನ್ನು ಹಾಳುಗೆಡವಲಾಗಿದೆ. ರೈಲುಗಳು ಪ್ರಯಾಣಿಸುತ್ತಿರುವಾಗಲೇ ಪತ್ರಗಳ ವಿಂಗಡಣೆ ಮಾಡುವ ಕೆಲಸವನ್ನು ನಿಲ್ಲಿಸಲಾಗಿದೆ. ಇದರಿಂದ ಪತ್ರ ತಲುಪಿಸುವಾಗ ಬಹಳ ವಿಳಂಬವಾಗುತ್ತಿದೆ. ಇತ್ತೀಚೆಗೆ ಸರಕಾರ ಈ ವಲಯವನ್ನು ಖಾಸಗೀಕರಣಗೊಳಿಸಿ, ಮನಬಂದಂತೆ ಕಂಪ್ಯೂಟರೀಕರಣ ಮಾಡಿ ಬಹಳಷ್ಟು ಸಿಬ್ಬಂದಿಗೆ ಕೆಲಸವಿಲ್ಲದಂತೆ ಮಾಡುತ್ತಿದೆ.

ಅಂಚೆ ನೌಕರರ ಸಂಘಗಳು 12 ಎಪ್ರಿಲ್ 1993 ರಂದು ತಮ್ಮ ಬೇಡಿಕೆಗಳನ್ನು ಸಲ್ಲಿಸಿದರು. ಆದರೆ ಅಂಚೆ ಮಂಡಳಿ ಮಾತುಕತೆಗಳ ಮೂಲಕ ಅವನ್ನು ಇತ್ಯರ್ಥ ಮಾಡಲು ಕ್ರಮ ಕೈಗೊಳ್ಳಲಿಲ್ಲ. ಆದ್ದರಿಂದ ಅವರು ಈ ಕಾರ್ಯಚರಣೆಗೆ ಇಳಿಯದೇಕಾಗಿ ಬಂದಿದೆ. ಇದೇ ಆಗಸ್ಟ್ 19 ರಂದು ದಿಲ್ಲಿಯಲ್ಲಿ "ಡಾಕ್ ಭವನ್" ಎದುರು ಹಾಗೂ ದೇಶಾದ್ಯಂತ ಲಕ್ಷಾಂತರ ನೌಕರರು ಧರಣಿ ನಡೆಸಿ ಮುಷ್ಕರವನ್ನು ಸಂಪೂರ್ಣ ಯಶಸ್ವಿಗೊಳಿಸುವ ತಮ್ಮ ದೃಢ ನಿರ್ಧಾರವನ್ನು ವ್ಯಕ್ತಮಾಡಿದ್ದರು. ಆದರೂ ಸರಕಾರ ಅವರ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಲು ಮುಂದಾಗಲಿಲ್ಲ.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಅಂಚೆ ನೌಕರರು ಎತ್ತಿದ ಕೆಲವು ಮುಖ್ಯ ಬೇಡಿಕೆಗಳನ್ನು ಈಡೇರಿಸಲು ಸರಕಾರ ಒಪ್ಪಿರುವುದರಿಂದ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

ಕಾಂ. ಡಿ. ಎಂ. ನಾರಾಯಣ ಸ್ವಾಮಿ

ಕೋಲಾರ ಜಿಲ್ಲೆಯ ರೈತ ಚಳುವಳಿಯ ಒಬ್ಬ ಮುಖಂಡರಾದ ಹಾಗೂ ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿಯ ಸದಸ್ಯ ಕಾಂ. ಡಿ.ಎಂ. ನಾರಾಯಣಸ್ವಾಮಿಯವರು ದಿನಾಂಕ. 10.12.1993 ಮುಂಜಾನೆ ನಿಧನ ಹೊಂದಿದ್ದಾರೆ. ಇವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸದಸ್ಯರೂ ಆಗಿದ್ದರು. ಇವರ ಅಕಾಲ ಮೃತ್ಯುವಿನಿಂದ ಪಕ್ಷಕ್ಕೆ ಹಾಗೂ ರೈತ ಚಳುವಳಿಗೆ ಅಪಾರ ನಷ್ಟವಾಗಿದೆ ಎಂದು ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿ ತನ್ನ ಶ್ರದ್ಧಾಂಜಲಿ ಅರ್ಪಿಸಿದೆ.

ಕಾಂ. ನಾರಾಯಣಸ್ವಾಮಿಯವರು ಕೋಲಾರ ಜಿಲ್ಲೆಯಲ್ಲಿ 'ಐಕ್ಯರಂಗ'ದ ಪ್ರಸಾರ ಹೆಚ್ಚಳಕ್ಕೂ ಮುತುವರ್ಜಿ ವಹಿಸಿದ್ದರು. ಇವರ ನಿಧನಕ್ಕೆ 'ಐಕ್ಯರಂಗ' ತನ್ನ ಹಾರ್ದಿಕ ಶ್ರದ್ಧಾಂಜಲಿ ಅರ್ಪಿಸುತ್ತದೆ.



ಮಹಾ ಪಲಾಯನ

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿನ ವ್ಯಂಗ್ಯಚಿತ್ರ

ಬಿಜೆಪಿಯ ಪೀಕಲಾಟ.........

ಮುಚ್ಚಳಿಕೆ ಕೊಡಲು ನಿರಾಕರಿಸಿದ್ದು ಅವರು ಬಂಧನವನ್ನು ಬಯಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಆದರೆ ಬಂಧನದ ನಂತರ ಈ ನ್ಯಾಯಾಂಗ ಕ್ರಮವನ್ನು 'ಮೋಸದ್ದು, ದುರುದ್ದೇಶಪೂರ್ಣವಾದದ್ದು, ರಾಜಕೀಯ ಪ್ರೇರಿತವಾದದ್ದು' ಎಂದು ಹೇಳಿದ್ದಾರೆ. ....ಬಾಬ್ರಿ-ಮಸೀದಿ ಧ್ವಂಸ ಒದು ಅಪರಾಧ. ಅದಕ್ಕೆ ಹೊಣೆಗಾರರಾದವರಿಗೆ ಶಿಕ್ಷೆ ಅಗತ್ಯ. ಕೇಸುಗಳನ್ನು ವಾಪಸು ಪಡೆಯಬೇಕೆಂಬುದು ಸಮರ್ಥನೀಯವಲ್ಲ......... ಬಿಜೆಪಿ ಮುಖಂಡರು ತಮ್ಮನ್ನು ಪೀಡಿಸಲಾಗುತ್ತಿದೆ ಎಂಬ ಆಪಾದನೆಯ ಸುತ್ತ ಚಳುವಳಿಯ ಕಾರ್ಯಕ್ರಮಗಳಿಂದಾಗಲೀ ಅಥವಾ ಅಯೋಧ್ಯಾ ರಾಮಮಂದಿರ ಕಟ್ಟುವ ಭಾವನಾತ್ಮಕ ಪ್ರಶ್ನೆಗಳಿಂದ ಕೂಡಾ ಆ ಪಕ್ಷ ತನ್ನ ರಾಜಕೀಯ 'ರೂಪುರೇಷೆಗಳನ್ನು ಮತ್ತೆ ಪಡೆಯಬಹುದೆಂದು ಭಾವಿಸಿದ್ದರೆ ಅವರು ಚುನಾವಣಾ ಸೋಲಿನಿಂದ ಸರಿಯಾದ ಪಾಠ ಕಲಿತಂತಿಲ್ಲ.

-- ಡೆಕ್ಕನ್ ಹೆರಾಲ್ಡ್, ಡಿ. 10

ಬಿಜೆಪಿಯ ತಂತ್ರ........

ತಿಂಗಳುಗಳು ಏಕೆ ವರ್ಷಗಳವರೆಗೂ ತಾವು ಅಯೋಧ್ಯೆ ವಿಷಯದಲ್ಲಿ ಜೈಲಿನಲ್ಲಿರಲು ಸಿದ್ಧ ಎಂದು ಬಿಜೆಪಿ ಧುರೀಣರು ಹೇಳಿದ್ದಾರೆ. ಶ್ರೀ ರಾಮ ಜನ್ಮಭೂಮಿ ವಿವಾದ ವಿಷಯದಲ್ಲಿ ಹುತಾತ್ಮ ಪದವಿಗೇರುವ ರಾಜಕೀಯ ತಂತ್ರ ಇಲ್ಲವೆ ಕುತಂತ್ರವನ್ನು ಇಲ್ಲಿ ಕಾಣಬಹುದು. ಇತ್ತೀಚಿನ ಚುನಾವಣೆಯಲ್ಲಾದ ಪರಾಭವದಿಂದ ಉತ್ತರದ ರಾಜ್ಯಗಳಲ್ಲಿ ಭಾರತೀಯ ಜನತಾಪಕ್ಷದ ಕಾರ್ಯಕರ್ತರು ಧೃತಿಗೆಟ್ಟಿದ್ದಾರೆ. ಅವರಲ್ಲಿ ನೈತಿಕ ಸ್ಥೈರ್ಯ ಕುಗ್ಗಿ ಹೋಗಿದೆಯೆಂದು ವರದಿಗಳಿವೆ. ಕಾರ್ಯಕರ್ತರಲ್ಲಿ ಮತ್ತೆ ಉತ್ಸಾಹ ತುಂಬಲು ಬಿಜೆಪಿ ಧುರೀಣರು ತಮ್ಮ ಬಂಧನವನ್ನೇ ಒಂದು ಸಾಧನವನ್ನಾಗಿ ಬಳಸಿಕೊಳ್ಳಲು ಉಪಕ್ರಮಿಸಿದ್ದಾರೆ. ಮುಖಂಡರ ಬಂಧನದ ವಿರುದ್ಧ ಪ್ರತಿಭಟಿಸಲು ಸಂಸತ್ತಿನ ಕಲಾಪಕ್ಕೆ ವ್ಯತ್ಯಯವನ್ನುಂಟುಮಾಡಲಾಗುತ್ತಿದೆ. ಉತ್ತರ ಪ್ರದೇಶ ಮತ್ತು ದಿಲ್ಲಿಯಲ್ಲಿ ಬಂದ್‌ಗೆ ಕರೆ ನೀಡಲಾಯಿತು. ತಲೆಗೆ ಕೈ ಹಚ್ಚಿ ಕುಳಿತುಕೊಂಡ ಕಾರ್ಯಕರ್ತರನ್ನು ಹುರಿದುಂಬಿಸಿ ರಸ್ತೆಗಿಳಿಸುವ ಹುನ್ನಾರ ಬಂದ್ ಕರೆಗಳ ಹಿಂದೆ ಅಡಗಿರುವುದು ಸ್ಪಷ್ಟ. ಆದರೆ ರಾಜಕೀಯದಲ್ಲಿ ಧರ್ಮ ಬೆರೆಸುವುದಕ್ಕೆ ತಮ್ಮ ಅಸಮ್ಮತಿಯನ್ನು ವ್ಯಕ್ತಮಾಡಿರುವ ಉತ್ತರದ ಜನ ಬಂದ್ ಕರೆಗಳಿಗೆ ಹೆಚ್ಚು ಸ್ಪಂದಿಸಲಿಲ್ಲ.

-ಸಂಯುಕ್ತ ಕರ್ನಾಟಕ, ಡಿ. 10

"ತೀರ್ಪು" ಮಾನ್ಯವಾಗಬೇಕು............

ಜಾಮೀನು ನೀಡಲು ನಿರಾಕರಿಸಿ ಬಂಧನಕ್ಕೊಳಗಾಗುವುದರ ಮೂಲಕ ತಮ್ಮನ್ನು ರಾಜಕೀಯವಾಗಿ ಕಿರುಕುಳಕ್ಕೊಳಪಡಿಸಲಾಗುತ್ತಿದೆ ಎನ್ನುವ ಭಾವನೆಯನ್ನು ಮೂಡಿಸಿ ಜನತೆಯ ಅನುಕಂಪವನ್ನು ಗಳಿಸುವ ಯತ್ನವನ್ನು ಈ ನಾಯಕರು ನಡೆಸಿದರಾದರೆ ಅದು ದುರದೃಷ್ಟಕರ. ಡಿಸೆಂಬರ್ 6 ರ ಘಟನೆಯ ನಂತರ ಬಿಜೆಪಿ ಆಡಳಿತವಿದ್ದ ನಾಲ್ಕು ರಾಜ್ಯಗಳನ್ನು ವಜಾ ಮಾಡಿದಾಗ ಬಿಜೆಪಿ, ತನ್ನ ಪರ ಅನುಕಂಪದ ಅಲೆ ಎದ್ದು ಅದು ತನ್ನನ್ನು ಮತ್ತೆ ಅಧಿಕಾರದ ದಡಕ್ಕೆ ಸೇರಿಸುತ್ತದೆ ಎಂದು 'ಹುತಾತ್ಮ' ಭಂಗಿ ತಾಳಿತ್ತು. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು ವಜಾ ಮಾಡಿದ ಕ್ರಮ ಚರ್ಚಾಸ್ಪದವೇ ಆಗಿದ್ದರೂ, ಬಿಜೆಪಿ ನಿರೀಕ್ಷಿಸಿದ ಅನುಕಂಪದ ಅಲೆಯಾಗಲೀ, ಮಂದಿರದ ಅಲೆಯಾಗಲೀ ಏಳದೆ ಪರಾಭವ ಅನುಭವಿಸಬೇಕಾಯಿತು. ಮೊನ್ನೆ ಉತ್ತರ ಪ್ರದೇಶ ಬಂದ್‌ಗೆ ಕೊಟ್ಟ ಕರೆ ಕೂಡಾ ವಿಫಲವಾಯಿತು. ಬಾಬರಿ ಮಸೀದಿ ಪ್ರ-ರಣ ಜನತಾ ನ್ಯಾಯಾಲಯದಲ್ಲಿ ತೀರ್ಮಾನಗೊಳ್ಳಲಿದೆ ಎಂದು ಹೇಳಿಕೊಳ್ಳುತ್ತಿದ್ದ ಬಿಜೆಪಿಗೆ ನ್ಯಾಯಾಲಯ ಇತ್ತ ತೀರ್ಪು ಮಾನ್ಯವಾಗಬೇಕು. ಈಗ ಸ್ವೀಕೃತ ನ್ಯಾಯಾಂಗದ ನಿಯಮಗಳನ್ನು ಅನುಸರಿಸುವುದು ಉತ್ತಮ ಮಾರ್ಗವೇ ಹೊರತು ಮತ್ತೊಮ್ಮೆ ಹುತಾತ್ಮ ಭಂಗಿ ತಾಳುವುದಲ್ಲ.

- ಪ್ರಜಾವಾಣಿ, ಡಿ. 10

ಸರಿಯಾದ ಕ್ರಮ ಅಲ್ಲ.....

..........ಆದರೆ ಬಾಬರೀ ಮಸೀದಿಯನ್ನು ಕೆಡವಿದ ಪ್ರಕರಣವನ್ನು ಒಂದು 'ಅಪ-ರಾಧ' ಕಾನೂನಿನಂತೆ ಪರಿಗಣಿಸಿ, ಬಿಜೆಪಿ ಮುಖಂಡರುಗಳೂ ಸೇರಿದಂತೆ ಹಲವಾರು ವ್ಯಕ್ತಿಗಳ ಮೇಲೆ ಸಿಬಿಐ ಮೊಕದ್ದಮೆ ಹೂಡಿರುವುದು ಕಾನೂನು ಕ್ರಮದಂತೆ ಸರಿ.

ಆದರೆ ಆ ಮೊಕದ್ದಮೆಯ ವಿಚಾರಣೆ ಕಾಲದಲ್ಲಿ ನ್ಯಾಯಾಂಗವೂ ಕೂಡಾ ಇದು ಕೇವಲ ಕಾನೂನಿನ ಪ್ರಶ್ನೆ ಅಲ್ಲ, ರಾಜಕೀಯ-ಧಾರ್ಮಿಕ-ಭಾವನಾತ್ಮಕ ಪ್ರಶ್ನೆಗಳೂ ಇದರಲ್ಲಿ ಅಡಕವಾಗಿವೆ ಎನ್ನುವುದನ್ನು ಮರೆಯುವಂತಿಲ್ಲ.

ಬಿಜೆಪಿ ನಾಯಕರುಗಳಾದ ಅಡ್ವಾಣಿ, ಮುರಳಿ ಮನೋಹರ ಜೋಷಿ, ಕಲ್ಯಾಣ ಸಿಂಗ್ ಮತ್ತು ಇತರರು ನ್ಯಾಯಾಲಯದಲ್ಲಿ ಜಾಮೀನು ಕೇಳಲು ನಿರಾಕರಿಸಿ ಅವರನ್ನು ನ್ಯಾಯಾಂಗದ ವಶಕ್ಕೆ ತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿ, ಸಂಘರ್ಷಕ್ಕೆ ಅವಕಾಶ ಮಾಡಿಕೊಂಡಿದ್ದಾರೆ.


ಹಿಂದೆ ಇಡೀ ಪ್ರಕರಣಕ್ಕೆ ಸಂಬಂಧಿಸಿದಂತೆ ಹೂಡಿದ್ದ ಮೊಕದ್ದಮೆಯಲ್ಲಿ ಒಬ್ಬ ನ್ಯಾಯಾಧೀಶರು ಆರೋಪಿಗಳನ್ನು ಬೇಷರತ್ತಾಗಿ ಬಿಡುಗಡೆ ಮಾಡಿದ ನಂತರ, ಈಗ ಇನ್ನೊಂದು ನ್ಯಾಯಾಲಯ ಜಾಮೀನು ಕೇಳುವುದು ಎಂದರೇನರ್ಥ ಎನ್ನುವ ಪ್ರಶ್ನೆ... ಕಾಯಿದೆ ಪಂಡಿತರು ಏನೇ ಉತ್ತರ ಕೊಟ್ಟರೂ ಜನಸಾಮಾನ್ಯರ ಮನಸ್ಸಿಗೆ ಇದೇನು ಅಷ್ಟು ಸರಿಯಾದ ಕ್ರಮ ಎನಿಸುವುದಿಲ್ಲ.

-ಟೈಂಸ್ ಆಫ್ ಇಂಡಿಯಾ ಡಿ. 9

ಹುತಾತ್ಮಗಿರಿಗಾಗಿ......

..........ಸಂಘ ಪರಿವಾರದ ಮುಖಂಡರು ತಮ್ಮ ಪ್ರಸ್ತುತ ಜೈಲುವಾಸದಿಂದ ಬಹಳ... ಪ್ರಯೋಜನ ಗಿಟ್ಟಿಸುವ ನಿರೀಕ್ಷೆಯಿಟ್ಟುಕೊಳ್ಳಬಾರದು. ಒಂದು ಸಂಘರ್ಷಕ ನಿಲುವು ಹಾಗೂ ಹುತಾತ್ಮ ಪ್ರಭೆ ಧರಿಸಲು ಖುಶಿಪಡುವ ನಿಲುವು ಸಾರ್ವಜನಿಕ ಅಭಿಪ್ರಾಯವನ್ನು ಮೆಚ್ಚಿಸಲಾರದು. ವಿಶೇಷವಾಗಿ ಮತದಾರರ ತೀರ್ಪಿನ ನಂತರ. ಧರ್ಮವನ್ನು ಚುನಾವಣಾ ಉದ್ದೇಶಕ್ಕಾ... ಸಿನಿಕತನದಿಂದ ಬಳಸುವ ಮೂಲಕ ತಂದ ರಾಜಕೀಯ ಧ್ರುವೀಕರಣ ಸಾಕೋ ಸಾಕು ಎಂಬ... ಈ ತೀರ್ಪು ಸ್ಪಷ್ಟಪಡಿಸಿದೆ. ಅಯೋಧ್ಯೆಯ ಗೂಂಡಾಗಿರಿಯ ಮೊದಲ ವಾರ್ಷಿಕ ಏಕೆ ಸಪ್ಪೆಯಾ...ಗಿತ್ತು ಎಂಬುದಕ್ಕೂ ಬುಧವಾರ ಉತ್ತರ ಪ್ರದೇಶದಲ್ಲಿ ಬಂದ್‌ಗೆ ದೊರೆತ ರೀತಿಯ ಪ್ರತಿಕ್ರಿ... ಏಕೆ ಎಂಬುದಕ್ಕೆ ಕಾರಣ ಖಂಡಿತ ಇದೇ. ಸಂಘ ಪರಿವಾರದ ಮುಖಂಡರು ತಮ್ಮ 'ಹಿಂದುತ್ವ'... ಅಬ್ಬರವನ್ನು ಕಮ್ಮಿಮಾಡಿ ದಿಲ್ಲಿ, ರಾಜಸ್ಥಾನ್‌ಗಳಲ್ಲಿ ಉತ್ತಮ ಆಡಳಿತ ಕೊಡುವ ಕೆಲಸಕ್ಕಿಳಿಯ... ದಿದ್ದರೆ ಅವರು ದೇಶದ ವಿಶ್ವಾಸಕ್ಕೆ ಅನರ್ಹರಾದ ಹೊಣೆಗೇಡಿ ಜನಗಳ ಒಂದು ಗುಂಪು ಎಂದು ಅನಿಸಿಕೊಳ್ಳುತ್ತಾರೆ.

--ಕನ್ನಡಪ್ರಭ, ಡಿ. 10



-ಕನ್ನಡಪ್ರಭ, ಡಿ. 9

ಹೊಸ ಅಧ್ಯಾಯ ....

ಪುಟ 3ರಿಂದ

ಒತ್ತಾಯಿಸುವುದು.

2. ಕಟ್ಟಿದ ಬೀಡಿಯ ಮೇಲೆ ತೆರಿಗೆ ಹಾಕುವ ಬದಲು ತಂಬಾಕಿನ ಮೇಲೆ ತೆರಿಗೆ ಹಾಕುವ ಪದ್ಧತಿಯನ್ನು ಪುನರಾರಂಭಿಸಬೇಕು ಮತ್ತು ಕಾರ್ಮಿಕರ ಬಗ್ಗೆ ಎಲ್ಲ ಕಾನೂನು ಬದ್ಧ ದಾಖಲೆಗಳನ್ನು ಒದಗಿಸುವ ಮಾಲಕರಿಗೆ ಮಾತ್ರ ತೆಂಡು ಎಲೆ ಹಾಗೂ ತಂಬಾಕನ್ನು ಸರ್ಕಾರ ಪೂರೈಸಬೇಕು.

3. ಬೀಡಿ ಕೈಗಾರಿಕೆಯಲ್ಲಿ ಗುತ್ತಿಗೆ ಪದ್ಧತಿಯನ್ನು ರದ್ದು ಮಾಡಬೇಕು.

4. ಬೀಡಿ ಕಾರ್ಮಿಕರಿಗೆ ಅನ್ವಯವಾಗುವ ಎಲ್ಲ ಕಾರ್ಮಿಕ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸುವಂತೆ ಒತ್ತಾಯಿಸುವುದು.

5. ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಯ ನಿಯಮಾವಳಿಗಳನ್ನು ಸರಳೀಕರಿಸಿ ಹೆಚ್ಚು ಹೆಚ್ಚು ಬೀಡಿ ಕಾರ್ಮಿಕರಿಗೆ ಅದರ ಲಾಭ ದೊರಕುವಂತೆ ಮಾಡುವಂತೆ ಮಾಡಬೇಕು.

6. ಬೀಡಿ ಕಾರ್ಮಿಕರ ಸಂಘಟನೆ ಮತ್ತು ಹೋರಾಟಗಳನ್ನು ಅಖಿಲ ಭಾರತ ಮಟ್ಟದಲ್ಲಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಟ್ಟಿ ಬೆಳೆಸಲು ಪದಾಧಿಕಾರಿಗಳನ್ನು ಒಳಗೊಂಡ ಅಖಿಲ ಭಾರತ ಬೀಡಿ ಕಾರ್ಮಿಕರ ಸಮಿತಿಯನ್ನು ರಚಿಸುವುದು.

7. ಸಮಿತಿಯ ಪೂರ್ಣಾವಧಿ ಕಾರ್ಯಕರ್ತರ ಮತ್ತು ಇತರ ಖರ್ಚು ವೆಚ್ಚಕ್ಕಾಗಿ ಅಖಿಲ ಭಾರತ ಮಟ್ಟದಲ್ಲಿ 2. ಲಕ್ಷ ರೂ.ಗಳ ನಿಧಿಯನ್ನು ಸಂಗ್ರಹಿಸುವುದು.

8. ಬೀಡಿ ಕಾರ್ಮಿಕರ ಮಧ್ಯದಲ್ಲಿ ಕೆಲಸ ಮಾಡುವ ಕಾರ್ಯಕರ್ತರಿಗೆ ತರಬೇತಿ ನೀಡುವ ಕಾರ್ಯಕ್ರಮ ರೂಪಿಸುವುದು.

9. ಪ್ರತಿಯೊಂದು ರಾಜ್ಯದಲ್ಲಿ ಮುಖ್ಯವಾಗಿ ಪಶ್ಚಿಮ ಬಂಗಾಲ, ಕರ್ನಾಟಕ, ತಮಿಳುನಾಡು ಮೊದಲಾದ ರಾಜ್ಯಗಳಲ್ಲಿ ಕೇರಳದ ಮಾದರಿಯಲ್ಲಿ ಕನಿಷ್ಠ ಒಂದೊಂದು ಬೀಡಿ ಕಾರ್ಮಿಕರ ಸಹಕಾರ ಸಂಘವನ್ನು ಸ್ಥಾಪಿಸಲು ಆದಷ್ಟು ಬೇಗ ಕ್ರಮ ಕೈಗೊಳ್ಳುವುದು.

10. ಬೀಡಿ ಕಾರ್ಮಿಕರ ಬೇಡಿಕೆಗಳನ್ನು ಜನಪ್ರಿಯಗೊಳಿಸಲು ಬರುವ ಜನವರಿ 31 ರಂದು ಎಲ್ಲಾ ರಾಜ್ಯ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಪ್ರದರ್ಶನ ನಡೆಸುವುದು. ಕೇಂದ್ರ ಕಾರ್ಮಿಕ ಮಂತ್ರಿಗೆ ಹಾಗೂ ರಾಜ್ಯ ಕಾರ್ಮಿಕ ಮಂತ್ರಿಗಳಿಗೆ ಮನವಿ ಸಲ್ಲಿಸುವುದು. ಮತ್ತು ಬರುವ ಮಾರ್ಚ್ ತಿಂಗಳ ಕೊನೆಯೊಳಗಾಗಿ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸಮಾವೇಶಗಳನ್ನು ನಡೆಸುವುದು.

ಸಮ್ಮೇಳನ ಮೂರನೇ ದಿನ ಏರ್ಪಡಿಸಲಾಗಿದ್ದ ಕೈಗಾರಿಕಾ ವಿಚಾರ ಸಂಕಿರಣದಲ್ಲಿ ಕೇರಳ ದಿನೇಶ್ ಬೀಡಿಯ ಚೇರ್‌ಮನ್ ಆಗಿರುವ ಶ್ರೀ ಜಿ.ಕೆ. ಪಣಿಕರ್ "ಭಾರತದಲ್ಲಿ ಬೀಡಿ ಕೈಗಾರಿಕೆ" ಎಂಬ ವಿಷಯದ ಬಗ್ಗೆ ಕೇರಳ ರಾಜ್ಯ ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಕಾಂ. ಕೆ.ಎನ್. ರವೀಂದ್ರನಾಥ್ ಅವರು "ಭಾರತ ಸರ್ಕಾರದ ಹೊಸ ಕೈಗಾರಿಕಾ ನೀತಿ" ಕುರಿತು ಮತ್ತು ಡಾ. ಥಾಮಸ್ ಐಜಕ್ ಅವರು "ಅಸಂಘಟಿತ ವಲಯದ ಕೈಗಾರಿಕೆಗಳಲ್ಲಿ ಉತ್ಪಾದನಾ ಸಂಬಂಧಗಳು'' ಎಂಬ ವಿಷಯದ ಬಗ್ಗೆ ವಿದ್ವತ್ಪೂರ್ಣವಾದ ವಿಚಾರಗಳನ್ನು ಮಂಡಿಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಇ.ಕೆ. ನಯನಾರ್ ಅವರು ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು. ಅಖಿಲ ಭಾರತ ಬೀಡಿ ಕಾರ್ಮಿಕರ ಸಮಿತಿಯ ನೂತನ ಪದಾಧಿಕಾರಿಗಳು:

ಅಧ್ಯಕ್ಷರು: ಕಾಂ. ಸಿ. ಕಣ್ಣನ್
ಉಪಾಧ್ಯಕ್ಷರು: ಕಾಂ. ವಿಮಲ ರಣದಿ...
ಪ್ರಧಾನ ಕಾರ್ಯದರ್ಶಿ: ಪಿ.ಕೆ. ಗಂಗು...
ಜಂಟಿ ಕಾರ್ಯದರ್ಶಿಗಳು: 1. ಕಾಂ. ...ಮುದ್ದಿನ್ 2. ಕಾಂ. ಎಸ್. ಚಂದ್ರಶೇ...ರನ್ 3. ಕಾಂ. ವಿ.ಜೆ.ಕೆ. ನಾಯರ್

ಕೇಂದ್ರದಲ್ಲಿ ದಿನಂಪ್ರತಿ ಕೆಲಸ ನ...ಕೊಳ್ಳಲು ಒಂದು ಉಪಸಮಿತಿಯನ್ನು... ಸಲಾಗಿದ್ದು ಎಲ್ಲ ಪದಾಧಿಕಾರಿಗಳ... ಕಾಂ. ಹೇಮಲತಾ (ಆಂಧ್ರಪ್ರದೇ...) ಮತ್ತು ಬಿಹಾರ್ ಹಾಗೂ ರಾಜಸ್ಥಾನದಿ... ಒಬ್ಬೊಬ್ಬರು ಸದಸ್ಯರಾಗಿರುತ್ತಾರೆ.

ಕರ್ನಾಟಕದಿಂದ ಅಖಿಲ ಭಾ... ಸಮಿತಿಗೆ ಒಟ್ಟು 6 ಜನ ಆಯ್ಕೆ...ದ್ದಾರೆ. ಕಾಂ. ವಿ.ಜೆ.ಕೆ. ನಾಯರ್, ... ಮಹಮ್ಮದ್ ದಸ್ತಗೀರ್, ಕಾಂ. ಕೆ. ಶ... ಕಾಂ. ನಿತ್ಯಾನಂದ ಸ್ವಾಮಿ, ಕಾಂ. ಕೃಷ್ಣ ಶೆಟ್ಟಿ ಮತ್ತು ಕಾಂ. ರಮಣಿ. ... ನಿಧಿಗೆ ಕರ್ನಾಟಕದಿಂದ 20 ಸಾವಿರ... ಕೊಡಬೇಕೆಂದು ನಿಗದಿ ಪಡಿಸಲಾಗಿ... 994 ಮೇ ದಿನದ ಒಳಗಾಗಿ ಈ ... ವನ್ನು ಕೇಂದ್ರಕ್ಕೆ ಸಂದಾಯ ಮಾಡ...ಗಿದೆ ಕರ್ನಾಟಕದಿಂದ ಒಟ್ಟು 82 ... ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗ...ದ್ದರು.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ಶಾಂತಿ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 2236462. ಸಂಪಾದಕರು : ಪಿ.ರಾಮಚಂದ್...